ಅನುಸೂಯ ಗಜಾನನ ಶರ್ಮ, ಶ್ರೀ ಕುಲಕರ್ಣಿ ಮಲ್ಲಪ್ಪ ಕರವೀರಪ್ಪ, ಶ್ರೀ. ಎ.ಎಸ್.ಗುರುಸ್ವಾಮಿ, ಶ್ರೀ ಬಿ.ವೆಂಕಟರಾಯಪ್ಪ, ಶ್ರೀ ಕೆ.ಸಿಂಗಾರಿಗೌಡ ಹಾಗೂ ಶ್ರೀ ಟಿ.ವಿ. ಕೃಷ್ಣಪ್ಪರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಸದನವನ್ನು ಮೃತರ ಗೌರವಾರ್ಥ ಒಂದು ಗಂಟೆ ಕಾಲ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1.36 ಗಂಟೆಗೆ ಮುಕ್ತಾಯಗೊಂಡು, ಮತ್ತೆ ಒಂದು ಗಂಟೆಯ ತರುವಾಯ ಸಭೆ ಸೇರಲು ನಿಶ್ಚಯಿಸಲಾಯಿತು)

(ಸದನವು 3 ಗಂಟೆ 5 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

3. ವಿಶ್ವಾಸ ಮತ ಕೋರಿಕೆ:

ವಿಷಯ: ಶ್ರೀ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಗಳು ವಿಶ್ವಾಸ ಮತಕೋರಿ ಮಂಡಿಸಿದ ನಿರ್ಣಯದ ಮೇಲೆ ಚರ್ಚೆ.

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು confidence motion move ಮಾಡಿ.

ಶ್ರೀ ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ಪ್ರಸ್ತಾಪವನ್ನು ಮಂಡಿಸುತ್ತಿದ್ದೇನೆ." ಈ ಸದನವು ಶ್ರೀ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ."

ಸನ್ಮಾನ್ಯ ಅಧ್ಯಕ್ಷರೆ, 2004 ರ ಜನಾದೇಶದ ನಂತರ ಈ ನಾಡಿನ ಜನತೆ ಒಂದು ರೀತಿ ಅಧಿಕಾರ ನಡೆಸುತ್ತಿದ್ದಂಥ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿ, ವಿರೋಧ ಪಕ್ಷಗಳಾಗಿದ್ದಂಥ ಬಿಜೆಪಿ ಮತ್ತು ಜೆಡಿಎಸ್ ನ ಪರವಾಗಿ ಜನಾದೇಶ ನೀಡಿದೆ ಎಂದು ನಾನು ಭಾವಿಸುತ್ತೇನೆ. ನಂತರ, ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಜೆಡಿಎಸ್‌ನ ಸ್ನೇಹಿತರು ಒಂದಾಗಿ ಒಂದು ಸಮ್ಮಿಶ್ರ ಸರ್ಕಾರವನ್ನು ನಡೆಸಿದರು. ಭಿನ್ನಾಬಿಪ್ರಾಯಗಳು, ಬೇರೆ ಬೇರೆ ಕಾರಣಗಳು ಅಥಾವ ರಾಜಕೀಯದಲ್ಲಿ ಒಬ್ಬರನ್ನು ಬಿಟ್ಟು ಮತ್ತೊಬ್ಬರನ್ನು ಸೇರುವುದಕ್ಕೆ ಅವರದೇ ಆದಂಥ ಅನೇಕ ಕಾರಣಗಳಿರುತ್ತವೆ. ಅವರದೇ ಆದಂಥ ಅನುಕೂಲಸಿಂದು ರಾಜಕಾರಣಗಳು ಇರುತ್ತವೆ. ಹೀಗಾಗಿ ಕಾಂಗ್ರೆಸ್ ಜೊತೆಯಿದ್ದಂಥ ಮೈತ್ರಿಯನ್ನು ಮುರಿದು ಅಥವ ಬಿಟ್ಟು ಭಾರತೀಯ ಜನತಾ ಪಾರ್ಟಿಯ ಜೊತೆಗೆ ಆ ಪಕ್ಷದ ಮುಖಂಡರಾದಂಥ ಕುಮಾರಸ್ವಾಮಿಯವರು ನನ್ನ ಹಾಗೂ ನಮ್ಮ ಪ್ರಮುಖರ ಜೊತೆ ಮಾತನಾಡಿ, 21 ತಿಂಗಳ ಹಿಂದೆ ಒಂದು ಸಮ್ಮಿಶ್ರ ಸರ್ಕಾರವನ್ನು ರಚಿಸುವಂಥ ಅವಕಾಶವನ್ನು ನಾವು ಮಾಡಿಕೊಂಡೆವು. ರಾಜ್ಯದ ಐದೂವರೆ ಕೋಟಿ ಜನರ ಹಿತದೃಷ್ಟಿಯಿಂದ ನಾವು ಒಟ್ಟಾಗಿ ಜನ ಮೆಚ್ಚುವ ರೀತಿಯಲ್ಲಿ ಕೆಲಸವನ್ನು ಮಾಡಿದ್ದೇವೆ. ನಾನೊಬ್ಬ ಸಾಮಾನ್ಯ ರೈತನ ಮಗ. ನನ್ನಂಥ ಒಬ್ಬ ಸಾಮಾನ್ಯ ರೈತನ ಮಗನಗೆ ಬಹಳಷ್ಟು ಜನ ಹಿರಿಯರು ಮುಖ್ಯಮಂತ್ರಿಯಾಗಿ ಸೇವೆ ಮಾಡಿದಂಥ ಈ ಸ್ಥಾನದಲ್ಲಿ ಕುಳಿತುಕೊಂಡು ಕೆಲಸ ಮಾಡುವಂಥ ಅವಕಾಶ ಸಿಕ್ಕಿತು. 20 ತಿಂಗಳು ಸಮ್ಮಿಶ್ರ ಸರ್ಕಾರದಲ್ಲಿ ನಾನು ಮತ್ತು ಕುಮಾರಸ್ವಾಮಿ ಬಿಜೆಪಿ ಮತ್ತು ಜೆಡಿಎಸ್ ಏನು ಒಪ್ಪಂದ ಆಗಿತ್ತು ಆ ಒಪ್ಪಂದಕ್ಕೆ ಯಾವುದೇ ರೀತಿಯ ದ್ರೋಹ ಮಾಡದೇ ದೇವರು ಮೆಚ್ಚುವ ರೀತಿ ಯಾವುದೇ ರೀತಿ ನಂಬಿಕೆಗೆ ವಿಶ್ವಾಸಕ್ಕೆ ದ್ರೋಹ ಮಾಡದೇ, ನಮ್ಮ ಒಪ್ಪಂದದಂತೆ ಯಾವುದೇ ಸಂದರ್ಭದಲ್ಲಿ ಲಕ್ಷ್ಮಣ ರೇಖೇಯನ್ನು ದಾಟದೇ ಜನ ಮೆಚ್ಚುವ ರೀತಿಯಲ್ಲಿ ಒಳ್ಳೆಯ ಕೆಲಸ ಮಾಡಿದ್ದೇವೆ. ಈ ರೀತಿ ಒಳ್ಳೆಯ ಕೆಲಸ ಮಾಡಲಿಕ್ಕೆ ಅವಕಾಶ ಕೊಟ್ಟಂಥ ಜೆಡಿಎಸ್ ಮುಖಂಡರಿಗೆ ನಾನು ಋಣಿಯಾಗಿದ್ದೇನೆ. ಈ ಜಗತ್ತು ನಡೆಯುತ್ತಿರುವಂಥದ್ದು ನಂಬಿಕೆ ಮತ್ತು ವಿಶ್ವಾಸದ ಮೇಲೆ. ಆ ನಂಬಿಕೆ ಮತ್ತು ವಿಶ್ವಾಸದ ಮೇಲೆ ಈ 20 ತಿಂಗಳು ನಾವು ಆಡಳಿತವನ್ನು ನಡೆಸಿದೆವು. ಹಣಕಾಸಿನ ಸಚಿವನಾಗಿ ಈ ರಾಜ್ಯದ 58 ಲಕ್ಷ ತುಳಿತಕ್ಕೊಳಗಾದಂಥ ರೈತ,

ಕೃಷಿ ಕಾರ್ಮಿಕ, ನೇಕಾರ, ಮೀನುಗಾರ, ಇವರುಗಳಿಗೆ ಸವಲತ್ತನ್ನು ಒದಗಿಸಿ ಕೊಡುವ ಪ್ರಮಾಣಿಕ ಪ್ರಯತ್ನ ಮಾಡಿದ್ದೇನೆ. ವಿನೂತನವಾದಂಥ ಸಂಧ್ಯಾ ಸುರಕ್ಷ ಯೋಜನೆ, ಭಾಗ್ಯಲಕ್ಷ್ಮಿ ಯೋಜನೆ, ರೈತನಗೆ 4% ನಲ್ಲಿ ಸಹಕಾರಿ ಸಂಘಗಳಿಂದ ಸಾಲ, 25 ಸಾವಿರ ರೂಪಾಯಿ, ರೈತ, ನೇಕಾರ ಹಾಗೂ ಮೀನುಗಾರರ ಸಾಲ ಮನ್ನಾ, ನಮ್ಮ ನಾಡಿನ ಗ್ರಾಮೀಣ ಜನರ ಅಪೇಕ್ಷೆಯಂತೆ ಹಣಕಾಸಿನ ಇಲಾಖೆಯ ಮೇಲೆ ಏನು ಪರಿಣಾಮ ಬೀರುತ್ತದೆ ಎನ್ನುವುದನ್ನು ಚಿಂತನೆ ಮಾಡದೇ ರಾಜ್ಯದ ಜನರ ಹಿತವನ್ನು ಕಣ್ಣಮುಂದೆ ಇಟ್ಟುಕೊಂಡು ಸಾರಾಯಿ ನಿಷೇಧ, ಲಾಟರಿ ನಿಷೇಧವನ್ನು ಜಾರಿಗೆ ತಂದಿದ್ದೇವೆ. ನಮ್ಮ ಸರ್ಕಾರಿ ನೌಕರರು ನೆಮ್ಮದಿಯಿಂದ ಕೆಲಸ ಮಾಡಬೇಕೆಂಬ ದೃಷ್ಟಿಯಿಂದ 5ನೇ ವೇತನ ಆಯೋಗದ ಶಿಫಾರಸ್ಸನ್ನು ಜಾರಿಗೆ ತಂದಿದ್ದೇವೆ. ಇದೇ ರೀತಿಯಾಗಿ ಹತ್ತು-ಹಲವು ಕೆಲಸಗಳನ್ನು ನಾವು ಮಾಡಿದ್ದೇವೆ. ಇದಕ್ಕೆ ಪ್ರತಿಪಕ್ಷ ಸೇರಿ ಈ ನಾಡಿನ ಜನರೆಲ್ಲರೂ ಮೆಚ್ಚಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಬಸವ ತತ್ವದ ಅನುಯಾಯಿ. ಬಸವ ತತ್ವದ ಪ್ರಕಾರ ನಡೆ-ನುಡಿ ಒಂದಾಗಿರಬೇಕೆಂದು ಹೇಳುವಂತೆ, ಕಳೆದ 20 ತಿಂಗಳು ನಾನು ನಡೆದುಕೊಂಡಿದ್ದೇನೆ. ಸ್ವಾಮಿ ವಿವೇಕಾನಂದರವರು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ತ್ಯಾಗದಿಂದ ಜಯ ಲಭಿಸುತ್ತದೆ ಹೊರತು ಮೋಸದಿಂದಲ್ಲವೆಂದು ಹೇಳಿದ್ದಾರೆ. ಆದ್ದರಿಂದ, ತಾಳ್ಮೆಯಿಂದ ಕಾಯುವುದು ಯಶಸ್ಸಿನ ಗುಟ್ಟೆಂದು ಸ್ವಾಮಿ ವಿವೇಕಾನಂದರವರು ಹೇಳಿದ್ದಾರೆ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮ ಬಾಳು ಎಂಬ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಒಂದು ಅದಮ್ಯ ನಂಬಿಕೆಯನ್ನು ಇಟ್ಟುಕೊಂಡು ಕೆಲಸ ಮಾಡಿದ್ದೇನೆ. ಕರ್ನಾಟಕ ಅಭಿವೃದ್ದಿ ರಂಗ ಸಮೃದ್ಧ ಕರ್ನಾಟಕ ನಿರ್ಮಿಸುವ ಸಂಕಲ್ಪತೊಟ್ಟು ರಾಜ್ಯದಲ್ಲಿ ನನ್ನ ಶಕ್ತಿ ಮೀರಿ ಮತೀಯ ಸಾಮರಸ್ಯಕ್ಕೆ ಶಕ್ತಿ ತುಂಬುವಂಥ ಒಂದು ಪ್ರಯತ್ನವನ್ನು ಮಾಡಿದ್ದೇವೆ. ಸರ್ವ ಧರ್ಮ ಸಮಭಾವ ಎಂಬ ಭಾರತೀಯ ಸಂಸ್ಕೃತಿ ಹಾಗೂ ಬೇರೆ ಸಂಸ್ಕೃತಿಯನ್ನು ಪ್ರೀತಿಸು, ನಿನ್ನ ಸಂಸ್ಕೃತಿಯಲ್ಲಿ ಜೀವಿಸು ಎಂದು ಮಹಾತ್ಮ ಗಾಂಧೀಜಿರವರು ಹೇಳಿರುವಂಥ ವಿಚಾರಕ್ಕೆ ಬದ್ಧನಾಗಿ ನನ್ನ ಕೆಲಸವನ್ನು ನಾನು ಮಾಡಿದ್ದೇನೆ. ಮೊನ್ನೆ ದಿವಸ ದೆಹಲಿಯಲ್ಲಿರುವ ರಾಜ್‌ಘಾಟ್‌ಗೆ ಹೋಗಿ ಮಹಾತ್ಮ

ಗಾಂಧೀಜಿಯವರ ಸಮಾಧಿಗೆ ಪುಷ್ಪಗುಚ್ಛವನ್ನು ಅರ್ಪಣೆ ಮಾಡಿ ಸ್ಮರಣೆ ಮಾಡಿಕೊಂಡು ಬಂದಿದ್ದೇನೆ. ಮಹಾತ್ಮ ಗಾಂಧೀಜಿಯವರ ಸ್ವರಾಜ್ಯ ಮತ್ತು ರಾಮರಾಜ್ಯದ ತತ್ವಗಳು ಇನ್ನೂ ಕಾರ್ಯರೂಪಕ್ಕೆ ಬರಲಿಲ್ಲವೆಂಬ ಚಿಂತೆ ಇದೆ. ಭಗವಂತ ಅವಕಾಶ ಮಾಡಿಕೊಟ್ಟರೆ, ಬರುವ ದಿವಸಗಳಲ್ಲಿ ಈ ಕೆಲಸವನ್ನು ಮಾಡುತ್ತೇನೆಂಬ ಪ್ರಮಾಣವನ್ನು ಸಹ ಅಲ್ಲಿ ಸ್ವೀಕಾರ ಮಾಡಿಕೊಂಡು ಬಂದಿದ್ದೇನೆ. ಸಂವಿಧಾನ ಶಿಲ್ಪಿ ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರ ವಿಚಾರಗಳು ಮತ್ತು ಮಹಾತ್ಮ ಗಾಂಧೀಜಿಯವರ ವಿಚಾರಗಳು ನನ್ನ ಜೀವನದಲ್ಲಿ ಜನಪರ ಹೋರಾಟಕ್ಕೆ ಪ್ರೇರಣೆ ನೀಡಿತ್ತು. ನಮ್ಮ ಜೆ.ಡಿ.ಎಸ್. ಸ್ನೇಹಿತರು ದಿನಾಂಕ 28.10.2007ರಲ್ಲಿ ಮಾನ್ಯ ರಾಜ್ಯಪಾಲರಿಗೆ ಒಂದು ಮನವಿಯನ್ನು ಸಲ್ಲಿಸಿದ್ದಾರೆ. ಜೆ.ಡಿ.ಎಸ್. ನಾಯಕರಾಗಿರುವ ಕುಮಾರ ಸ್ವಾಮಿಯವರು ಮಾನ್ಯ ರಾಜ್ಯಪಾಲರಿಗೆ ಬರೆದಿರತಕ್ಕಂಥ ಪತ್ರವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ:-

"His Excellencey the Governor of Karnataka,
Raja Bhavan,
Bangalore.

Respected Sir,

Subject:- Furnishing the individual letters of the members of JDLP.

Declaring the un-conditional support to the BJP and Janata Dal (S) coalition Government under the leadership of Sri B.S.Yediyurappa.

With reference to the above subject and in continuation of my yesterday's letter, I am hereby furnishing the individual letters of members of Legislative Assembly who are also the members of JDLP under my leadership. We request you to be good enough to send a report to the president of India about the formation of the Government and get necessary orders passed for the formation of the popular Government as mandated in S.R.Bommai's case.

Thanking you,"

ಈ ರೀತಿಯಾಗಿ ಮಾನ್ಯ ಕುಮಾರ ಸ್ವಾಮಿಯವರು ಪತ್ರವನ್ನು ಬರೆದಿದ್ದಾರೆ. ಅದೇ ರೀತಿಯಾಗಿ ಆ ಪಕ್ಷದ ಅಧ್ಯಕ್ಷರಾದಂಥ ಮಾನ್ಯ ಮಿರಾಜುದ್ದೀನ್ ಎನ್.ಪಾಟೀಲ್ ರವರೂ ಕೂಡ ಪತ್ರ ಬರೆದಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ಪಕ್ಷದ 129 ಜನ ಶಾಸಕರು ರಾಜಭವನಕ್ಕೆ ಹೋಗಿ ಮಾನ್ಯ ರಾಜ್ಯಪಾಲರಿಗೆ ಪತ್ರವನ್ನು ಕೊಟ್ಟಿದ್ದೇವೆ. ಇದು ಆದ ಮೇಲೆ ನವೆಂಬರ್ 6ನೇ ತಾರೀಖಿನ ದಿವಸ, ಬಹುಶಃ ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ 126 ಜನ ಶಾಸಕರು ರಾಷ್ಟ್ರಪತಿಗಳವರನ್ನು ಭೇಟಿ ಮಾಡಿ ಮನವಿಯನ್ನು ಸಲ್ಲಿಸಿ, ಮಾನ್ಯ ಬೊಮ್ಮಾಯಿರವರ ಕೇಸ್‌ಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಮತ್ತು ಸಂವಿಧಾನದ ಚೌಕಟ್ಟಿನಡಿಯಲ್ಲಿ ಈ ಸಮ್ಮಿಶ್ರ ಸರ್ಕಾರವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಿ ಎಂದು ವಿನಂತಿ ಮಾಡಿದ್ದೆವು. ರಾಷ್ಟ್ರಪತಿಯವರಿಗೆ ಮತ್ತು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳಿಗೆ ಈ ಮನೆಯ ಮೂಲಕ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಪ್ರಜಾತಂತ್ರ ವ್ಯವಸ್ಥೆಯನ್ನು ಎತ್ತಿ ಹಿಡಿಯುವುದಕ್ಕೋಸ್ಕರ ಮತ್ತು ಸುಪ್ರೀಂ ಕೋರ್ಟ್‌ನ ಆದೇಶ ಹಾಗೂ ನಮ್ಮ ಸಂವಿಧಾನದ ಚೌಕಟ್ಟಿನಡಿಯಲ್ಲಿ ನಮ್ಮ ಸಮ್ಮಿಶ್ರ ಸರ್ಕಾರ ನಡೆಯುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇಂಥ ಒಂದು ವಿಶೇಷವಾದಂಥ ಸಂದರ್ಭದಲ್ಲಿ ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟ ಪಡದೇ ನಿಮ್ಮೆಲ್ಲರ ಮಾತುಗಳನ್ನು ಕೇಳಿದ ಮೇಲೆ ನಿಮ್ಮಗಳ ಪ್ರಶ್ನೆಗೆ ಉತ್ತರ ಕೊಡುವಂಥ ಪ್ರಯತ್ನವನ್ನು ಮಾಡುತ್ತೇನೆಂದು ಹೇಳುತ್ತಾ ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ವಿಶ್ವಾಸ ಮತದ ಪರವಾಗಿ ತಾವು ಬೆಂಬಲವನ್ನು ಕೊಟ್ಟು ನಾನು ಆಡಳಿತವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಆಡಳಿತ ಪಕ್ಷ ಮತ್ತು ಪ್ರತಿಪಕ್ಷದ ಶಾಸಕರಲ್ಲಿ ವಿನಂತಿ ಮಾಡಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನನ್ನ ಸರ್ಕಾರಕ್ಕೆ ಬೆಂಬಲ ಕೊಡಬೇಕೆಂದು ಮತ್ತೆ ಈ ರಾಜ್ಯದ ಮುಖ್ಯಮಂತ್ರಿಯಾಗಿ ಕೆಲಸ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಈಗಾಗಲೇ ಮಾನ್ಯ ಯಡಿಯೂರಪ್ಪನವರು ಕೇಳಿದ್ದಾರೆ. ಈ ದಿನ ಮುಂಜಾನೆ ತಾವು ಅಧಿವೇಶನವನ್ನು ಕರೆದಿದ್ದೀರಿ. ಮಾನ್ಯ ಬೊಮ್ಮಾಯಿರವರು ಈ

ರಾಜ್ಯದ ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರ ಪರವಾಗಿ ಸಂತಾಪ ಸೂಚನೆ ಮತ್ತು ಶ್ರದ್ಧಾಂಜಲಿಯನ್ನು ಎಲ್ಲರೂ ಕೂಡ ಗೌರವ ಪೂರ್ವಕವಾಗಿ ಅರ್ಪಿಸಿದ್ದಾರೆ. ತದನಂತರ, ಈ ಸರ್ಕಾರಕ್ಕೆ ಬಹುಮತ ಸಾಬೀತು ಪಡಿಸುವಂಥ ಏಕೈಕ ಅಜೆಂಡಾ ಇಟ್ಟುಕೊಂಡು ಇವತ್ತು ಅಧಿವೇಶನ ಕರೆದಿದ್ದೀರಿ. ಬೆಳಿಗ್ಗೆ ಸಂತಾಪ ಸೂಚನೆ ಮೇಲೆ ಮಾತನಾಡಿದ ಬಳಿಕ ತಾವು ಸಭೆಯನ್ನು ಅಡ್ಜರ್ನ್ ಮಾಡಿ ಬಹಳ ಹೊತ್ತಿನ ಮೇಲೆ ಮತ್ತೆ ಪ್ರಾರಂಭ ಮಾಡಿದ್ದೀರಿ. ಹಿಂದೆ ಏನು ರಾಜಕಾರಣ ನಡೆಯುತ್ತಿದೆ ಎಂಬುದು ನಮಗೇನು ಗೊತ್ತಿಲ್ಲ. ನಾವೆಲ್ಲರೂ ಕೂಡ ಹೊರಗಡೆ ಕಾಯುತ್ತಿದ್ದೆವು. ಇವತ್ತು ಮಾನ್ಯ ಯಡಿಯೂರಪ್ಪನವರು ಸರ್ಕಾರಕ್ಕೆ ಬಹುಮತವನ್ನು ಕೇಳುತ್ತಿದ್ದಾರೆ. ಅವರು ಯಾವ ಸರ್ಕಾರಕ್ಕೆ ಬಹುಮತ ಕೇಳುತ್ತಿದ್ದಾರೆ? ಸಮ್ಮಿಶ್ರ ಸರ್ಕಾರಕ್ಕೆ ಕೇಳುತ್ತಿದ್ದಾರೆಯೋ ಅಥವಾ 79 ಶಾಸಕರ ಬೆಂಬಲದಿಂದ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾರೆ, ಆದ್ದರಿಂದ ಅವರ ಬೆಂಬಲವನ್ನು ಕೇಳುತ್ತಿದ್ದಾರೆಯೋ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಕರ್ನಾಟಕ ರಾಜ್ಯದ ರಾಜಕಾರಣದ ಇತಿಹಾಸದಲ್ಲಿ ಮೊಟ್ಟಮೊದಲನೆಯದಾಗಿ ಇಂಥ ಒಂದು ಸನ್ನಿವೇಶವನ್ನು ನಾವು ನೋಡುತ್ತಿದ್ದೇವೆ. ನಾನೂ ಕೂಡ 35 ವರ್ಷಗಳ ಕಾಲ ಈ ಸದನದಲ್ಲಿ ಕೆಲಸ ಮಾಡಿದ್ದೇನೆ. ಮತ್ತೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾನ್ಯ ದೇಶಪಾಂಡೆಯವರು ಮಾನ್ಯ ಸಿದ್ದರಾಮಯ್ಯನವರು ಮತ್ತು ಮಾನ್ಯ ರಮೇಶ್ ಕುಮಾರ್‌ರವರು ಇಲ್ಲಿ ತುಂಬಾ ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇವತ್ತಿನ ದಿವಸ ಮಿತ್ರಪಕ್ಷಗಳು ಒಂದಾಗಿ 129 ಶಾಸಕರು ರಾಜ್ಯಪಾಲರ ಎದುರುಗಡೆ ಹೋಗಿ ಭೇಟಿಯಾಗಿದ್ದಾರೆ. ಮತ್ತೆ ಅವರು ಹೇಳಿದ ಹಾಗೆ ವಿಶೇಷವಾಗಿ ದೆಹಲಿಯಲ್ಲಿರುವ ರಾಜ್‌ಘಾಟ್‌ಗೆ ಹೋಗಿ ಮಹಾತ್ಮ ಗಾಂಧೀಯವರ ಸಮಾಧಿಗೆ ಸಹ ಭೇಟಿ ಕೊಟ್ಟಿದ್ದಾರೆ. ಇಲ್ಲಿಯೂ ಕೂಡ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ಮಾಡಿ ನ್ಯಾಯ ಕೊಡಬೇಕೆಂದು ಕೇಳಿದ್ದಾರೆ. ಮತ್ತೆ ಇವರು ಪ್ರಮಾಣ ವಚನ ಸ್ವೀಕಾರ ಮಾತಕ್ಕಂಥ ಸಂದರ್ಭದಲ್ಲಿ ಮಹಾತ್ಮಗಾಂಧಿಯವರಿಗೆ ಹೊಡೆದಂಥ ಗುರುಗಳ ಫೋಟೋವನ್ನು ಸಹ ಹಾಕಿಕೊಂಡಿದ್ದರು. ಪ್ರಮಾಣವಚನ ಸ್ವೀಕಾರ ಮಾಡತಕ್ಕಂಥ ಕಾರ್ಯಕ್ರಮಕ್ಕೆ ಅವರು ನನ್ನನ್ನೂ ಕೂಡ ಆಹ್ವಾನ ಮಾಡಿದ್ದರು. ನಾನು ಮನೆಗೆ

ಬರುತ್ತೇನೆಂದು ಹೇಳಿದೆ. ತಾವು ಅಧಿಕಾರ ಸ್ವೀಕಾರ ಮಾಡತಕ್ಕಂಥ ಸಮಾರಂಭಕ್ಕೆ ತಾವು ಬರಬೇಕೆಂದು ಕೇಳಿದ್ದರು. ಆದರೆ, ನಾವು ಮತ್ತು ನಮ್ಮ ಕಾಂಗ್ರೆಸ್ ಪಕ್ಷದ ನಾಯಕರು ಬೆಳವಣಿಗೆಯನ್ನು ನೋಡಿದೆವು. ಆ ಸಮಾರಂಭಕ್ಕೆ ನರೇಂದ್ರ ಮೋದಿ ಬರುತ್ತಿದ್ದರು. ಗೋದ್ರಾದ ಘಟನೆ ಎಲ್ಲರಿಗೂ ಗೊತ್ತಿದೆ. ಗುಜರಾತ್ ರಾಜ್ಯದಲ್ಲಿ ನಡೆಯುವ ಚುನಾವಣೆಯಬಗ್ಗೆ ಬಹಳ ಪ್ರಾಮುಖ್ಯವಾದಂಥ ವಿಚಾರಗಳು ರಾಷ್ಟ್ರಮಟ್ಟದಲ್ಲಿ ನಡೆಯುವ ವಿಚಾರಗಳಲ್ಲಿ ಪ್ರಸ್ತಾಪವಾಗುತ್ತಿವೆ. ಅವರು ಇಲ್ಲಿ ಇಲ್ಲಿ ಬಂದು ಏನು ಹೇಳುತ್ತಾರೆಂದರೆ, ಯಡಿಯೂರಪ್ಪಾಜಿ, ಆಪ್ ಕೆ ಮಾರ್ಗದರ್ಶನ್ ಮೇ ಗುಜರಾತ್ ಮೇ ಜೋ ಮೈನೆ ಪ್ರಗತಿ ಕಿಯೆ, ಓ ಪ್ರಗತಿ ಆಪ್ ಕರೋ ಎಂದು ಹೇಳುತ್ತಾರೆ. ಮತ್ತೆ ರಾಜನಾಥ್‌ಸಿಂಗ್‌ರವರು ಮತ್ತು ಬಿಜೆಪಿ ಪಕ್ಷದ ನಾಯಕರೆಲ್ಲರೂ ಇಲ್ಲಿಗೆ ಬರುತ್ತಿದ್ದಾರೆ. ಅವರಿಗೆ ಏನಾಗಿದೆ ಎಂದರೆ, ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬಿಜೆಪಿ ಸರ್ಕಾರ ಬಂದಿದೆ. 2004ನೇ ಇಸವಿಯಲ್ಲಿ ನಾವೆಲ್ಲರೂ ಚುನಾವಣೆಗೆ ಹೋದೆವು, ಆಗ ಯಾವ ಪಕ್ಷಕ್ಕೂ ಕೂಡ ಬೆಂಬಲ ಸಿಗಲಿಲ್ಲ. ನಿಮಗೆ 79 ಸೀಟ್ ಮತ್ತು ನಮಗೆ 65 ಸೀಟು ಮಾತ್ರ ಸಿಕ್ಕಿತು. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕ್ ಪಂಚಾಯತ್ ಚುನಾವಣೆ ಆಯಿತು. ತಮ್ಮ ಪಕ್ಷಕ್ಕೆ ಒಂದು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕ್ ಪಂಚಾಯತ್ ಚುನಾವಣೆಯಲ್ಲಿ ಆರಿಸಿ ಬರುವುದಕ್ಕೆ ಆಗಲಿಲ್ಲ. ಇಲ್ಲಿಯೂ ಕೂಡ ಛಿದ್ರ ಛಿದ್ರವಾಗಿ ಕರ್ನಾಟಕ ರಾಜ್ಯದಲ್ಲಿ ಯಾವ ಪಕ್ಷಕ್ಕೂ ಕೂಡ ಬಹುಮತ ಸಿಗಲಿಲ್ಲ. ನಾವು ಕೂಡ ಸಮ್ಮಿಶ್ರ ಸರ್ಕಾರ ಮಾಡಿದ್ದೇವೆ. ಸಮ್ಮಿಶ್ರ ಸರ್ಕಾರ ಇದ್ದಂಥ 20 ತಿಂಗಳ ಅವಧಿಯಲ್ಲಿ ಯಾವ ಹಗರಣವಾಗಲಿ ಮತ್ತು ಇತರೇ ವಿಚಾರಗಳು ಹೊರಗಡೆ ಬರುವುದಕ್ಕೆ ಆಗಲಿಲ್ಲ.ನಾವು ರಾಜ್ಯದ ಹಿತದೃಷ್ಟಿಯಿಂದ ಕಾಂಗ್ರೇಸ್ ಪಕ್ಷದವರು ಜನತಾದಳ (ಎಸ್) ಜೊತೆಯಲ್ಲಿ ಮೈತ್ರಿ ಸರ್ಕಾರವನ್ನು ಮಾಡಿದ ಮೇಲೆ ನಂತರ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಏನಾಯಿತು? 20 ತಿಂಗಳ ಕಾಲ ಅಧಿಕಾರ ಹಸ್ತಾಂತರದ ಬಗ್ಗೆ ನಡೆಯಿತು. ಒಂದು ದಿವಸ ಮೌನ ತಾಳುತ್ತೇನೆಂದು, ಮತ್ತೆ ಮೌನ ತ್ಯಜಿಸುತ್ತೇನೆಂದು ಹೇಳಿದಿರಿ. ಸಾಕಷ್ಟು ವಿಷಯಗಳನ್ನು ಕೂಡ ತಾವು ಪ್ರಸ್ಥಾಪ ಮಾಡಿದ್ದೀರಿ. ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ವಿಧಾನಸಭೆ ಏನು ಇದೆ, this

is the property of the State. ಯಾರಿಗೆ ಮಾರುವುದಕ್ಕಾಗಿ, ಶ್ರೀ ಕೆಂಗಲ್ ಹನುಮಂತಯ್ಯನವರು ವಿಧಾನಸಭೆಯನ್ನು ಕಟ್ಟಿಸಿದ್ದಾರೆ? ಅವರು ಒಂದು ದಿನವು ಕೂಡ ಕುರ್ಚಿಯಲ್ಲಿ ಕೂಡಲಿಲ್ಲ. ಆದರೂ ಕೂಡ 1,84,00,000 ರೂಪಾಯಿಗಳನ್ನು ಖರ್ಚು ಮಾಡಿ 1956 ರಲ್ಲಿ ಕಟ್ಟಿಸಿದರು. ಇದು ಎಲ್ಲಾ ಜನರಿಗೆ ಗೊತ್ತಿದೆ. ಮತ್ತೆ ನೀವು ಹೇಳುತ್ತೀರಿ, ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಕೊಡುತ್ತೇನೆ, ದೀನ ದಲಿತರಿಗೆ ರಕ್ಷಣೆಯನ್ನು ಕೊಡುತ್ತೇನೆ, ಹಿಂದುಳಿದವರಿಗೆ ರಕ್ಷಣೆಯನ್ನು ಕೊಡುತ್ತೇನೆ, ಇದನ್ನು ತಾವು ಮಾತಿನಲ್ಲಿ ಹೇಳಿದರೆ ಆಗುವುದಿಲ್ಲ ಸ್ವಾಮಿ. ಇವತ್ತು ರಾಜ್ಯದಲ್ಲಿ ನಿಜವಾಗಿಯೂ ಕೂಡ ಸ್ಪಷ್ಟತೆ ಬೇಕಾಗುತ್ತದೆ. ಅದರ ಬಗ್ಗೆ commitment ಬೇಕಾಗುತ್ತದೆ. ಇವತ್ತು ನಾವು ಎಲ್ಲಾ ಕಡೆ ಹೋಮ ಹವನಗಳನ್ನು ಮಾಡಿರುವ ಬಗ್ಗೆ ಹೇಳಿದಾಗ ಆ ಬಗ್ಗೆ ಏನು ಇಲ್ಲವೆಂದು ತಾವು ಹೇಳಿದ್ದೀರಿ. ಇವರ ಪಕ್ಷದ ಅಧ್ಯಕ್ಷರು ಶ್ರೀ ಸದಾನಂದಗೌಡರು ಇದ್ದಾರೆ, ಅವರು ದೊಡ್ಡ ಮಹಾ ಪುರುಷರಾಗಿದ್ದಾರೆ. ಆತ ಮಲ್ಲಿಕಾರ್ಜುನ ಖರ್ಗೆ ಮತ್ತು ಧರ್ಮಸಿಂಗ್ ನಾಲಾಯಕ್ ಇದ್ದಾರೆಂದು ಹೇಳುತ್ತಾನೆ ಅವರು ದೇಶ ಬಿಟ್ಟು ಹೋಗಲಿ ಎಂದು ಹೇಳುತ್ತಾನೆ. ನಮ್ಮನ್ನು ದೇಶಬಿಟ್ಟು ಹೋಗು ಎಂದು ಹೇಳುವುದಕ್ಕೆ ಇವನ್ಯಾರು? ನಾನು ಕೂಡ ಸ್ವಾತಂತ್ರ್ಯ ಹೋರಾಟಗಾರರ ಮನೆತನದಿಂದ ಬಂದವನಾಗಿದ್ದೇನೆ. ಸ್ವಾತಂತ್ರ್ಯ ಹೋರಾಟಕ್ಕಾಗಿ ನಮ್ಮ ಅಣ್ಣನವರು ಸಹ ಜೀವವನ್ನು ಕೊಟ್ಟಿದ್ದಾರೆ. ಇವತ್ತು ನಾವು ನಿಮ್ಮಿಂದ ಕಲಿಯಬೇಕಾಗಿಲ್ಲ. ಇದು ಎಲ್ಲವೂ ಕೂಡ ರಾಜ್ಯದ ಜನತೆಗೆ ಗೊತ್ತಿದೆ. ಮಾನ್ಯ ಯಡಿಯೂರಪ್ಪನವರೆ, ನಮ್ಮ ಮಿತ್ರಪಕ್ಷಗಳು ಒಂದಾಗಿಲ್ಲ, ನಿಮಗೆ ಉಪಮುಖ್ಯಮಂತ್ರಿಗಳು ಯಾರು ಎಂದು ಗೊತ್ತಿಲ್ಲ. ಇವತ್ತು ಕಾರಜೋಳರವರನ್ನು ತೆಗೆದುಕೊಂಡಿದ್ದೀರಿ ನಮ್ಮ ಅಭ್ಯಂತರವಿಲ್ಲ. ಅಶೋಕರವರು ಸಚಿವರಾಗಿದ್ದಾರೆ, ಡಾ:ವಿ.ಎಸ್.ಆಚಾರ್ಯರವರು ಸಚಿವರಾಗಿ ದ್ದಾರೆ, ಶ್ರೀ ಜಗದೀಶ್ ಶೆಟ್ಟರ್‌ರವರು ಸಚಿವರಾಗಿದ್ದಾರೆ. ಈ ಬಗ್ಗೆ ನಮಗೆ ಪೂರ್ಣವಾಗಿ ಗೌರವವಿದೆ. ಆದರೆ ಬೇರೆ ಪಕ್ಷದವರು ನಮ್ಮ ಜೊತೆಯಲ್ಲಿ ಬರದೆ ಹೋದರೆ ನೀವು ಯಾವ ರೀತಿ ಸರ್ಕಾರವನ್ನು ನಡೆಸಿಕೊಂಡು ಹೋಗುತ್ತೀರಿ? ನೀವು ಯಾರಿಗಾಗಿ ಬಹುಮತವನ್ನು ಕೇಳುತ್ತಿದ್ದೀರಿ? ಸಮ್ಮಿಶ್ರ ಸರ್ಕಾರದ ಪರವಾಗಿ ಮತ್ತೇ ನಾವು ಒಂದಾಗಿ ರಾಜ್ಯದ ಜನತೆಯ ಮುಂದೆ ಬರುತ್ತೇವೆಂದು ಕೇಳುತ್ತೀರಾ? ರಾಜ್ಯದ ಜನರ

ಎದುರಿಗೆ ಯಾವ ಮುಖವನ್ನು ಹೊತ್ತುಕೊಂಡು ಹೋಗುತ್ತೀರಿ? 3ನೇ ಅಕ್ಟೋಬರ್ 2007ರಂದು ನಿಮಗೆ ಅಧಿಕಾರ ಹಸ್ತಾಂತರವಾಗಲಿಲ್ಲ. ಏಕೆಂದರೆ, ಯಡಿಯೂರಪ್ಪನವರನ್ನು ತಡೆಯುವುದಕ್ಕೆ ಸಾಧ್ಯವೇ ಇಲ್ಲ. ಮೋಸಗಾರ, ಸುಳ್ಳುಗಾರ, ಅಪ್ಪ ಕಳ್ಳ, ಮಗ ಸುಳ್ಳಾ, ಇವೆಲ್ಲವು ಪತ್ರಿಕೆಗಳಲ್ಲಿ ಬಂದಿವೆ, ಇದನ್ನು ನಾವು ಹೇಳುವಂಥದ್ದಲ್ಲ. ನೀವೇನು ನಮಗೆ ಧಕ್ಕೆ ಬರುತ್ತದೆ ಏತಕ್ಕಾಗಿ ಪದವನ್ನು ಬಳಸುತ್ತೀರೆಂದು ಹೇಳಿದ್ದೀರಿ, ನಾವು ಆ ಪದವನ್ನು ಬಳಸಿಲ್ಲ. ಅವರು ಆ ಪದವನ್ನು ಉಪಯೋಗಿಸಿದ್ದಾರೆ. ಎಲ್ಲಾ ಕಡೆಗಳಿಗೆ ಹೋಗಿದ್ದಾರೆ. ತುಮಕೂರಿನ ತನಕ ಹೋಗಿ, ಇಲ್ಲಾ ಮತ್ತೇ ನಾವು ಬರುತ್ತೇವೆಂದು ಬಂದಿರಿ. ರಾಜಭವನಕ್ಕೆ ಹೋದಿರಿ. ಮನೆಯಲ್ಲಿ ಹಾರ ಮತ್ತು ತುರಾಯಿಗಳು ಆಯಿತು. ಮತ್ತೆ ಮೇಲಿನವರು ಒಪ್ಪಲಿಲ್ಲ. ಏನು ಹುಡುಗಾಟ ಎಂದು ಮೇಲಿನವರು ಹೇಳುತ್ತಾರೆ. ಮಾನ್ಯ ಯಶವಂತ ಸಿನ್ಹಾರವರು ದಿವಂಗತ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಚಂದ್ರಶೇಖರ್‌ರವರು ಪ್ರಧಾನ ಮಂತ್ರಿಯಾಗಿದ್ದಾಗ ಹಣಕಾಸಿನ ಸಚಿವರಾಗಿ ಕೆಲಸ ಮಾಡಿದ್ದಾರೆ. ಕರ್ನಾಟಕದ ಎಂತಹ ಪರಿಸ್ಥಿತಿ ನನ್ನ ಪಾಲಿಗೆ ಬಂತು? ಮಾನ್ಯ ವೆಂಕಯ್ಯನಾಯ್ಡುರವರು ಬೆಂಗಳೂರಿಗೆ ಬರುತ್ತಾರೆ ಮತ್ತು ಹೋಗುತ್ತಾರೆ ಅದು ಬೇರೆ. When Yashwnth sinha met Devegowdaji, ಸ್ವಾಮಿ ನಾವು ಇನ್ನೊಮ್ಮೆ ನಿಮ್ಮ ಜೊತೆ ಸೇರಿ ಸರ್ಕಾರವನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಿಮ್ಮ ತಂಟೆಗೆ ನಾವು ಬರುವುದಿಲ್ಲವೆಂದು ಹೇಳಿ ಹೋದರು. ಆದರೂ ಕೂಡ ಎಲ್ಲವು ಆಗಿದೆ ಎಂದು ಹೇಳಿ, ಹೇಗಾದರೂ ಮಾಡಿ ತರಾತುರಿಯಲ್ಲಿ ಸೇರಿಕೊಂಡಿರಿ. ಮಾನ್ಯ ಯಡಿಯೂರಪ್ಪನವರು ಕಳೆದ ಸಾರಿ ಅಧಿವೇಶನದಲ್ಲಿ ಹೇಳಿದ್ದರು. ಮುಂದಿನ ಅಧಿವೇಶನದಲ್ಲಿ ಆ ಸೀಟಿನಲ್ಲಿ ನಾನು ಕೂರುತ್ತೇನೆಂದು ಅವರು ಹೇಳಿದ್ದರು. ಅವರು ಮುಖ್ಯಮಂತ್ರಿಯಾಗಿ ಬರುತ್ತೇನೆಂದು ಹೇಳಿರುವಂಥದ್ದು ಅವರ ಕನಸು ನನಸಾಗಿದೆ. ಆದರೆ immediate ಆಗಿ ನಿಮಗೆ ಮಿತ್ರಪಕ್ಷಗಳ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿ ಈಗ ಉಪಮುಖ್ಯಮಂತ್ರಿ ಗಳಾಗುತ್ತೇವೆಂದು ಹೇಳಿದ್ದರು. ಸ್ವಲ್ಪ ಏನೋ ಪದವನ್ನು ಉಪಯೋಗಿಸುವಂತಹ ರೀತಿಯಲ್ಲಿ ಇರಬೇಕಲ್ಲಾ? ಅವರ ಜೊತೆಯಲ್ಲಿ ನೀವು ಕೆಲಸವನ್ನು ಮಾಡಿ ಇಂತಹ ಪದಗಳನ್ನು ಉಪಯೋಗಿಸಿದ್ದೀರಿ. ರಾಜ್ಯದ ಜನತೆಯ ಬಗ್ಗೆ ನೀವು

ಅನ್ನುತಿರಬೇಕು. ನಮಗೆ ಬಹಳಷ್ಟು ಜನರು ದೊಡ್ಡ ರೀತಿಯಲ್ಲಿ ವೋಟು ಕೊಡುತ್ತಾರೆಂದು, ಎಲ್ಲಾ ಕಡೆಗಳಲ್ಲೂ ಕೂಡ ಬಿ.ಜೆ.ಪಿ ಕೇಸರಿಮಯವಾಗಿದೆ. ಆದರೆ ಕರ್ನಾಟಕ ರಾಜ್ಯ ಪೂರ್ತಿ ಕೇಸರಿಮಯವಾಗಿಲ್ಲ. ರಾಜ್ಯದ ಜನತೆಗೆ ಒಳ್ಳೆಯದಾಯಿತು. ಇವತ್ತು ಕಾಂಗ್ರೇಸ್ ಪಕ್ಷವನ್ನು ಮಾನ್ಯ ಅಧ್ಯಕ್ಷರೆ ತಾವು ನೋಡುತ್ತಿದ್ದೀರಿ, ತಮ್ಮ ಅಧ್ಯಕ್ಷತೆಯಲ್ಲಿ ನಾವು ಯಾವಾಗಲೂ ಗಲಾಟೆಯನ್ನು ಮಾಡುವುದಕ್ಕೆ ಹೋಗಲಿಲ್ಲ. ನಃ ೦ಗೆ ನೀವು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಅವರು ಒಂದು ಸಲ ನಮ್ಮ ಜೊತೆಯಲ್ಲಿ ಬಂದರು. ಡಾ:ಮನಮೋಹನ್ ಸಿಂಗ್ ರವರು ರಾಷ್ಟ್ರಮಟ್ಟದಲ್ಲಿ ಪ್ರಧಾನಮಂತ್ರಿಗಳಾಗಿದ್ದರು. ಎಲ್ಲಾ ಕಡೆಗಳಲ್ಲಿ Left Parties ದೇವೆಗೌಡರಿಗೆ ಹೇಳಿದರು, ತಾವು ಕರ್ನಾಟಕದಲ್ಲಿಯೂ ಕೂಡ ಒಂದಾಗಿ ಹೋಗಿ. ಕರ್ನಾಟಕದಲ್ಲಿ to prevent B.J.P you have to become one ಎಂದು ಹೇಳಿದರು. ನಮಗೆ ದೊಡ್ಡ ಕಠಿಣದ ಕೆಲಸವಾಯಿತು. ಆದರೆ ಒಂದು ಜವಾಬ್ದಾರಿಯನ್ನು ಕೊಟ್ಟ ಮೇಲೆ, ಇವತ್ತು ಶ್ರೀಮತಿ ಸೋನಿಯಾಗಾಂಧಿ ಮತ್ತು ಕಾಂಗ್ರೇಸ್ ಪಕ್ಷದ ವರಿಷ್ಠರ ಆದೇಶದ ಮೇರೆಗೆ ನಾವು ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ನಿಮ್ಮಂತಹ ರೀತಿಯಲ್ಲಿ ಬೀದಿಗೆ ಇಳಿಯುವಂತಹ ಕೆಲಸವನ್ನು ನಾವು ಮಾಡಿಲ್ಲ. ಇವತ್ತು ರಾಜ್ಯದಲ್ಲಿ ಏನಾಗಿದೆ ಎಂದರೆ, ಇವತ್ತು ತಾವು ಮುಖ್ಯಮಂತ್ರಿಗಳಾಗಿದ್ದೀರಿ. ನಾನು ತಮ್ಮನ್ನು ಪ್ರಪ್ರಥಮವಾಗಿ ಕೇಳುವಂತಹ ಪ್ರಶ್ನೆ ಇಷ್ಟೆ. ಇವತ್ತು ಮತ ಯಾರಿಗೆ ಕೊಡಬೇಕು, ಯಡಿಯೂರಪ್ಪನವರಿಗೆ ಕೊಡಬೇಕೆ? ಸಂಘಪರಿವಾರದವರಿಗೆ ಕೊಡಬೇಕೆ? ಏನು ಆರ್.ಎಸ್.ಎಸ್.ನವರಿಗೆ ಕೊಡಬೇಕೆ? ಏನು ಬಿ.ಜೆ.ಪಿಯ ಸಮಾವೇಶ ಒಳ್ಳೆಯದಾಗಿ ಮಾಡಿದ್ದೀರೆಂದು ಸರ್ಟಿಫಿಕೇಟ್‌ನ್ನು ಕೊಡಬೇಕೆ? ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಇನ್ನು ಕೂಡ ತಾವು ಅವರ ಜೊತೆಯಲ್ಲಿ ಹೋಗಿ ಏನು ಭಿನ್ನಾಭಿಪ್ರಾಯವಿದೆ ಎಂದು ತಿಳಿದುಕೊಳ್ಳಿ. ಆದರೆ ನಾವು ಆ ಜಗಳದ ಬಗ್ಗೆ ಹೋಗುವುದಕ್ಕೆ ತಯಾರಿಲ್ಲ. ನಮ್ಮದು ಏನು ಇದೆ ಅವೆಲ್ಲವನ್ನು ಕೂಡ ಸ್ಪಷ್ಟವಾಗಿ ಹೇಳಬೇಕು. ಇವತ್ತಿನ ದಿವಸ ತಾವು ಸರ್ಕಾರವನ್ನು ರಚನೆ ಮಾಡಿ ನಾವು ಕೆಲಸವನ್ನು ಮಾಡುತ್ತೇವೆ, ನಮ್ಮ ಕಾರ್ಯಕ್ರಮಗಳು ಈ ರೀತಿ ಇವೆ ಎನ್ನುವಂತಹ ರೀತಿಯಲ್ಲಿ ತಾವು ಹೇಳಬೇಕು. ಒಟ್ಟಾರೆ ಇವತ್ತು ಕರ್ನಾಟಕ ರಾಜ್ಯದ ರಾಜಕಾರಣವನ್ನು ಇಂತಹ ಒಂದು ದುಸ್ಥಿತಿಗೆ ತಂದಿದ್ದೀರಿ. ನಾವು

ದೆಹಲಿಗೆ AICC ಸಮಾವೇಶಕ್ಕೆ ಹೋಗಿದ್ದೆವು. ಎಲ್ಲಾ ಕಡೆಗಳಲ್ಲಿ ಜನರು ಕೂಡ ಹೇಳುತ್ತಾರೆ What happened in Karnataka? ಏನು ಇಂತಹ ಸರ್ಕಾರಕ್ಕೆ ಅವಕಾಶ ಬಂತು ಎನ್ನುವಂತಹ ರೀತಿಯಲ್ಲಿ ಹೇಳುತ್ತಾರೆ. ಯಾರೂ ಕೂಡ appreciate ಮಾಡುತ್ತಿಲ್ಲ. ನಾವು ಕೂಡ ಜನರಿಂದ ಆರಿಸಿ ಬಂದವರಾಗಿದ್ದೇವೆ. ನಾವು ಜನ ಪ್ರತಿನಿಧಿಗಳಾಗಿ ಕೆಲಸವನ್ನು ಮಾಡುತ್ತಿದ್ದೇವೆ. ಆದರೆ ಬಿ.ಜೆ.ಪಿ is the emotional party. ಬಿಜೆಪಿ ಯಾವಾಗಲೂ ಕೂಡ ಈ ರಾಷ್ಟ್ರದಲ್ಲಿ ಒಂದು ನೈತಿಕತೆಯ ಮೇಲೆ, ನಮ್ಮ ಪಕ್ಷ ಭಾರತೀಯ ಸಂಸ್ಕೃತಿ, ಭಾರತೀಯ ಪರಂಪರೆ ಎಂದು ಹೇಳುತ್ತಾ ಬಂದಿದೆ. ರಾಮನನ್ನು ತೆಗೆದುಕೊಂಡು ಕೊಂಡು ಬಂದಿರಿ, ರಥಯಾತ್ರೆ ಬಂತು, ಆ ರಥಯಾತ್ರೆಯನ್ನು ಬಿಹಾರದಲ್ಲಿ ಮಾನ್ಯ ಮುಲಾಯಂ ಸಿಂಗ್ ಹಾಗೂ ಲಾಲೂ ಪ್ರಸಾದ್ ಯಾದವ್‌ರವರು ತಡೆಹಿಡಿದರು, ಅದು ಆಗಲಿಲ್ಲ. ನಂತರ ವಿಕಾಸ ಯಾತ್ರೆ ಬಂತು. ನೀವು ಕರ್ನಾಟಕದಲ್ಲಿ ವಿಕಾಸಯಾತ್ರೆಯನ್ನು ಪ್ರಾರಂಭ ಮಾಡಿದಿರಿ. ಆದರೆ ಬೀದರ್‌ನಲ್ಲಿ ಚುನಾವಣೆಯಾಯಿತಲ್ಲಾ, ಅಲ್ಲಿ 5 ಸಲ ಬಿ.ಜೆ.ಪಿ ಪಾಲಾಗಿರುವಂತದ್ದು ಈ ಸಲ ಅದು ಕಾಂಗ್ರೆಸ್ ಪಕ್ಷಕ್ಕೆ ಬಂದಿದೆ. ಗಡಿ ಭಾಗದಲ್ಲಿರಿವಂತಹ ಜನರು ಈ ಬಗ್ಗೆ ವಿಚಾರವನ್ನು ಮಾಡುತ್ತಾರೆ. ಇವರು ಎಲ್ಲರು ವಿಚಾರವಂತರಾಗಿದ್ದಾರೆ. ಇವತ್ತು ಅಧಿಕಾರಕ್ಕಾಗಿ ಇಷ್ಟೊಂದು ದಾಹ ತಮಗೆ. ಇಲ್ಲವೆಂದರೆ ಏತಕ್ಕಾಗಿ ನೀವು ಮಾಡುತ್ತಿದ್ದೀರಿ? ಏನು ನಿಮ್ಮ ಷರತ್ತುಗಳು ಇದೆ. ಅದನ್ನು ತಾವು ಒಪ್ಪುತ್ತಿರೋ ಅಥವಾ ಬಿಡುತ್ತೀರೋ that is different. ಇವತ್ತು ಮಾನ್ಯ ಅಧ್ಯಕ್ಷರೆ ತಮ್ಮ ಮುಖಾಂತರ ಮಾನ್ಯ ಯಡಿಯೂರಪ್ಪನವರನ್ನು ಕೇಳುತ್ತೇನೆ ಈ ಸದನದಲ್ಲಿ ಏನು ಮಾತುಗಳನ್ನು ಏತಕ್ಕಾಗಿ ಹೇಳುತ್ತಿದ್ದೀರಿ? ನೀವೇ accountable ಅಲ್ಲಾ. ಇಬ್ಬರು ಮಿತ್ರಪಕ್ಷಗಳು 20 ತಿಂಗಳುಗಳ ಕಾಲ ಅಧಿಕಾರವನ್ನು ಏನು ನಡೆಸಿದ್ದೀರಿ, ನೀವೆಲ್ಲರೂ ಕೂಡ ರಾಜ್ಯದ ಜನರಿಗೆ ಹೇಳಬೇಕಾಗುತ್ತದೆ. ನಾವು ಕೇಳುವುದೇನೆಂದರೆ, ಇವತ್ತಿನ ದಿವಸ ಇಂತಹ ಒಂದು ಕೆಟ್ಟ ರಾಜಕಾರಣ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ನಡೆದಿಲ್ಲ. ಹೊಸ ಯುವಕರು ಆರಿಸಿ ಬಂದಿದ್ದಾರೆ, ನಾವು ಮಾತನಾಡತಕ್ಕಂತಹ ಕಾಲದಲ್ಲಿ ಹೇಳಿದೆವು. ಏನು ಎಂತಹ ಅಧೋಗತಿಗೆ ನಮ್ಮ ರಾಜ್ಯದ ಸ್ಥಿತಿ ಬಂತು, ಪತ್ರಿಕಾಮಿತ್ರರು ಕೇಳುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಮುಂದೆ ಏನು

ಆಗಬಹುದು ಎಂದು ನಾನು ಒಂದು press conference ನಲ್ಲಿ ಹೇಳಿದ್ದೆ. ಎಂದಿಗೂ ಆಗಲಾರದಂತಹ ಘಟನೆಗಳು ಕರ್ನಾಟಕ ರಾಜ್ಯದಲ್ಲಿ ನಡೆಯುತ್ತದೆ ನೀವು ನೋಡಬೇಕೆನ್ನುವಂತಹ ಮಾತನ್ನು ಅವರಿಗೆ ಹೇಳಿದ್ದೆ. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸುರವರು ಕರ್ನಾಟಕ ರಾಜ್ಯದಲ್ಲಿ 8 ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿದ್ದರು ಮಾನ್ಯ ಯಡಿಯೂರಪ್ಪನವರೆ. ಇವತ್ತು social justice ಎಲ್ಲಾ ಜನರಿಗೆ ಒದಗಿಸುವಂತಹ ರೀತಿಯಲ್ಲಿ, ವಿಶ್ವಾಸವನ್ನು ಮೂಡಿಸುವಂತಹ ರೀತಿಯಲ್ಲಿ, ಕರ್ನಾಟಕ ರಾಜ್ಯದಲ್ಲಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ನಾವು ಸಾಲ ಮನ್ನಾ ಮಾಡಿದ್ದೇವೆಂದು ಹೇಳಿದರು. ಇವತ್ತು ಅಪೆಕ್ಸ್ ಬ್ಯಾಂಕಿನವರು ಕೇಳುತ್ತಾರೆ "ನಿಮಗೆ ಎಷ್ಟು ಸಲ ಹೇಳುವುದು, ನಿಮ್ಮ ಬಜೆಟ್ ಏನಿದೆ ಅದರ ಬಗ್ಗೆ ನಾವು ಹೇಳಬೇಕು." ಈ ಬಗ್ಗೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕುಮಾರ ಸ್ವಾಮಿಯವರು ಹೇಳಿದ್ದಾರೆ "ಇಂತಹ ಅರ್ಥಮಂತ್ರಿಗಳು ನಮ್ಮ ಜೀವನದಲ್ಲಿ ನೋಡಿಲ್ಲ. ಯಾವ ಸರ್ಕಾರದಲ್ಲಿಯೂ ನೋಡಿಲ್ಲ" ಎಂದು ಅವರು ಹೇಳಿದ್ದಾರೆ. ಇವತ್ತು ಬಜೆಟ್ ಮಂಡನೆ ಮಾಡುವುದಕ್ಕೆ ತಾವು ಅವಕಾಶವನ್ನು ಕಲ್ಪಿಸಿಕೊಡಲಿಲ್ಲ, ಬಜೆಟ್ ಮಂಡನೆಯಾದ ಮೇಲೆ ಮತ್ತೆ 220 ಕೋಟಿ ರೂಪಾಯಿಗಳು ಬೇಕು ಎಂದು ಹೇಳುವುದು. ಇವತ್ತು ಯಾವ ಯಾವ ಸಂಸ್ಥೆಗಳು ಇವೆ, ಇವತ್ತು ರಾಜ್ಯದ ಜನರಿಂದ ವಸೂಲಿ ಮಾಡುವಂತಹ ತೆರಿಗೆ ಏನು ಇದೆ, ಗುಡಿ ಗುಂಡಾರಗಳಿಗೆ ಕೊಡುವುದಕ್ಕೆ ಇದೆಯೇ? ಸ್ವಾಮಿಗಳಿಗೆ ಕೊಡುವುದಕ್ಕೆ ಇದೆಯೇ? ನೀವು ಯಾರ ಮೆಚ್ಚುಗೆಗೆ ಮಾಡುತ್ತಿದ್ದೀರಿ, ಇವತ್ತು ತಾವು ಮಾಡುತ್ತಿರುವುದು ರಾಜ್ಯದ ನಿರ್ಗತಿಕರಿಗಾ? ಯಾವ ರೈತರಿಂದ ವಸೂಲಿ ಮಾಡತಕ್ಕಂತಹ ಬೊಕ್ಕಸ ಏನು ಇದೆ, ಅಲ್ಲಿ ನೀವು ಇವತ್ತಿನ ದಿವಸ ಆ ಜನರಿಗೆ ಮೋಸವನ್ನು ಮಾಡಿದ್ದೀರಿ. ಯಾವ ಕೆಲಸ ಕಾರ್ಯಗಳನ್ನು ತಾವು ಮಾಡಿದ್ದೀರಿ? ಸರಾಯಿ ನಿಷೇಧ 1902 ಕೋಟಿ ರೂಪಾಯಿಗಳು. ಒಟ್ಟಾರೆ ಇವತ್ತು 5000 ಕೋಟಿ ರೂಪಾಯಿಗಳ ಬಜೆಟ್ ಮಂಡನೆ ಏನು ಮಾಡಿದ್ದೀರಿ, ಅದಕ್ಕಿಂತ ಹೆಚ್ಚಾಗಿ ನೀವು ಹಣವನ್ನು ಭರಿಸಬೇಕಾಗುತ್ತದೆ. ಅದನ್ನು ನೀವು ಎಲ್ಲಿ ಮಾಡಿದ್ದೀರಿ? You have utterly failed. ಸುಮ್ಮನೆ ಘೋಷಣೆಗಳನ್ನು ಹೇಳುವುದು. ನಾವು ರೈತರ ಪರವಾಗಿ ಕೆಲಸ ಮಾಡುತ್ತಿದ್ದೇವೆ. ಇದೇನು ಆಗುತ್ತಿದೆ, ಏನಿದು ಮೋಸ, ಏನು ಸುಳ್ಳು

ಕತೆ, ತಾವು ಎಷ್ಟು ಹೇಳಿದಿರಿ ಸ್ವಾಮಿ, ಎಲ್ಲಾ ಕಡೆಗಳಲ್ಲಿ ಕಡಲು ತೀರದ ಪ್ರದೇಶಗಳಲ್ಲಿ ಮಾನ್ಯ ನಾಗರಾಜ ಶೆಟ್ಟಿಯವವರ ಅಧ್ಯಕ್ಷತೆಯಲ್ಲಿ ಹೋಗಿ ಮತ್ತೆ ನಿಮ್ಮ ಅಧ್ಯಕ್ಷರಾದ ಶ್ರೀ ಡಿ.ವಿ. ಸದಾನಂದಗೌಡರು ಮಹಾ ಅಧ್ಯಕ್ಷರಾಗಿದ್ದಾರೆ. ಸದಾನಂದಗೌಡರು ಏನು ಬೇಕಾದರು ಹೇಳುತ್ತಾರೆ. ಅವರನ್ನು ಹುಚ್ಚಾಸ್ಪತ್ರೆಗೆ ಸೇರಿಸಬೇಕೆಂದು ಹೇಳಿದ್ದೇನೆ. ಅವರ ಬಗ್ಗೆ ನಮ್ಮ ಅಧ್ಯಕ್ಷರು ಯಾರಾದರೂ ಮಾತನಾಡಿದ್ದಾರೆಯೇ? ನಾವು ನಮ್ಮ ಬಗ್ಗೆ ಮಾತನಾಡಿದ್ದೇವಾ? ಕರ್ನಾಟಕ ರಾಜ್ಯದ ಜನತೆಗೆ ಎದುರುಗಡೆ ನೀವು ಮಾಡತಕ್ಕಂತಹ ಏನು ಒಂದು ಮೋಸ ಇದೆ, ಇದರ ಬಗ್ಗೆ ಕೇಳುವುದಕ್ಕೆ ನಾವೆಲ್ಲರೂ ಕುಳಿತಿದ್ದೇವೆ. ಏಕೆಂದರೆ ಜನರು ಪ್ರತೀಕಾರವನ್ನು ಮಾಡುತ್ತಾರೆ. ಆನರ ಪ್ರತಿಕ್ರಿಯೆ ಬಹಳ ಮಹತ್ವವಾದುದು, ಅದಕ್ಕೆ ನಮಗನಸುತ್ತಿದೆ, ಇಲ್ಲಾ ನಾವು ಮಾಡುತ್ತೇವೆ. ನನಗೆ ಅವಕಾಶವನ್ನು ಕೊಡಬೇಕು, ಇದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಇವತ್ತು ಮೊಟ್ಟಮೊದಲನೆಯದಾಗಿ ಮಿತ್ರಪಕ್ಷಗಳು ಕೂಡಿ ಗವರ್ನರ್ ಬಳಿ ಹೋಗಿ ಮನವಿಯನ್ನು ಸಲ್ಲಿಸಿದರು. ಮನವಿಯನ್ನು ಸಲ್ಲಿಸುವಾಗ ಗಲಾಟೆಗಳು ಕೂಡ ಆಯಿತು. ಮತ್ತೆ ಗಾಂಧಿ ಪ್ರತಿಮೆ ಬಳಿ ಹೋಗಿ ನಮಗೆ ನ್ಯಾಯ ಕೊಡಬೇಕೆಂದು ಹೋದರು. ಅಲ್ಲಿ ಇವರು ಏತಕ್ಕಾಗಿ ಹೋದರು? ನ್ಯಾಯ ಎಲ್ಲವೂ ಗವರ್ನರ್ ಹತ್ತಿರ ಸಿಗುತ್ತಿತ್ತು, ಗವರ್ನರ್ ಹೇಳಿದ್ದಾರೆ, ಇವತ್ತು ನೀವು 129 ಶಾಸಕರ ಬೆಂಬಲ ತೋರಿಸಿದ್ದೀರಿ. ನಾನು ರಿಪೋರ್ಟ್‌ನ್ನು ಕಳುಹಿಸುತ್ತೇನೆಂದು ಅವರು ಹೇಳಿದ್ದಾರೆ. ಗವರ್ನರ್ ಸಾಕಷ್ಟು ಪರಿಪಕ್ವವಾಗಿ ಎಲ್ಲಾ ತಜ್ಞರ ಜೊತೆಯಲ್ಲಿ ವಿಚಾರ ವಿನಿಮಯ ಮಾಡಿಕೊಂಡು, ಕಾನೂನು ತಜ್ಞರ ಜೊತೆಯಲ್ಲಿ ವಿಚಾರ ವಿನಿಮಯ ಮಾಡಿದ್ದಾರೆ, ಅವರು ನ್ಯಾಯವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಇವರು ರಾಷ್ಟ್ರಪತಿಯವರ ಎದುರುಗಡೆ ಏತಕ್ಕಾಗಿ ಹೋದರೆಂದರೆ, ಹಿಮಾಚಲ ಪ್ರದೇಶದಲ್ಲಿ, ಗುಜರಾತ್‌ನಲ್ಲಿ ಚುನಾವಣೆ ಬರುತ್ತಿದೆ, ಎಲ್ಲಾ 129 ಶಾಸಕರು ಪರೇಡ್ ಮಾಡುತ್ತೇವೆ, ಇನ್ನು ಕೂಡ ರಾಜ್ಯಪಾಲರು ಅವಕಾಶವನ್ನು ಕೊಡುತ್ತಿಲ್ಲವೆನ್ನುವಂತಹ ರೀತಿಯಲ್ಲಿ ಹೇಳಿದ್ದಾರೆ. ಇವತ್ತು ಕೊನೆಗೆ ಬಂದರು, ಎಲ್ಲಾ ಕಡೆಗಳಲ್ಲಿಯೂ ಕೂಡ ಕರ್ನಾಟಕ ರಾಜ್ಯದ ಜನತೆಯ ಬೊಕ್ಕಸದಿಂದ ಇವತ್ತು ಬಿಜೆಪಿಯ ಎಲ್ಲಾ ರಾಷ್ಟ್ರಮಟ್ಟದ ನಾಯಕರುಗಳನ್ನು ಕರೆಸಿ ದೊಡ್ಡ ಬಿಜೆಪಿಯ ಸಮಾವೇಶವಾಯಿತು,

ಹೊರತಾಗಿ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡುವಂತಹ ಸಮಾರಂಭವಾಗಲಿಲ್ಲ. ಇದು ನಮ್ಮ ಆಕ್ಷೇಪಣೆಯಾಗಿದೆ. ಎಲ್ಲರೂ ಕೂಡ ಇವತ್ತು ದಲಿತರೂ ಕೂಡ, ಅವರ ಮುಖಂಡರುಗಳು, ಇವತ್ತು ನಮ್ಮ ಯು.ಆರ್. ಅನಂತಮೂರ್ತಿಯವರಾಗಲಿ ಬಹಳಷ್ಟು ಜನರು ಗವರ್ನರ್‌ರನ್ನು ಭೇಟಿಯಾಗಿ ಬಿಜೆಪಿ ಸರ್ಕಾರಕ್ಕೆ ಅವಕಾಶವನ್ನು ಕಲ್ಪಿಸಿಕೊಡಬಾರದು ಎಂದು ಹೇಳಿದರು. ಸಾಕಷ್ಟು ವಿದ್ಯಾರ್ಥಿ ಸಂಘಟನೆಗಳು ರಾಜ್ಯದಲ್ಲಿರುವಂತಹ ಪ್ರಗತಿಪರವಾದಂತಹ ವಿಚಾರಧಾರೆ ಇರುವಂತಹ ಜನರು ಕೂಡ ಕರ್ನಾಟಕದಲ್ಲಿ ಬಿಜೆಪಿಗೆ ಅವಕಾಶವನ್ನು ಕೊಡಬಾರದು ಎಂದು ಹೇಳಿದ್ದಾರೆ. ಹಾಗೆಂದು ಕೊನೆಗೆ ನಾವೂ ಕೂಡ ಹೇಳಿದ್ದೇವೆ. ಕೊನೆಗೆ ಬರಬೇಕಾಗಿರುವುದು ಬಂದಿದೆ, ಇವರ ಜೊತೆಯಲ್ಲಿಯೂ ಕೂಡ ಅವರುಗಳು ಇದ್ದಾರೆ. ಇವತ್ತು ತಮ್ಮ ಮಿತ್ರಪಕ್ಷಗಳು ಕೂಡಿ, ಯಡಿಯೂರಪ್ಪನವರೆ ಇಲ್ಲಿ ನಾವು ಕುಳಿತಿದ್ದೇವೆ, ನಮ್ಮ ಮಿತ್ರಪಕ್ಷವಾದ ಜೆಡಿ(ಎಸ್)ನವರು ಕೂಡ ಒಂದು ಆದೇಶ ಕೊಟ್ಟಿದ್ದಾರೆ, ವಿಪ್‌ನ್ನು ಕೊಟ್ಟಿದ್ದಾರೆ. ನಾವು ಇದರ ವಿರುದ್ಧವೇನೆಂದರೆ, ವೋಟು ಕೊಡಬಾರದು ಎನ್ನುವಂತಹ ರೀತಿಯಲ್ಲಿ ಹೇಳಿದ್ದಾರೆ. ಮತ್ತೆ ಮತ್ತೆ ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದು ಏತಕ್ಕಾಗಿ ಬೇಕಾಗಿತ್ತು? Already you have lost the majority. ನಿಮಗೆ confidence ಇಲ್ಲ. ಆದರೂ ಕೂಡ ನೀವು ಯಾವಾಗ ಬಿಟ್ಟು ಹೋಗುತ್ತಿರೋ, ಅದು ಕೂಡ ಗೊತ್ತಾಗುವುದಿಲ್ಲ. ಏಕೆಂದರೆ, ಆರ್‌ಎಸ್‌ಎಸ್‌ಗೆ, ಸಂಘಪರಿವಾರದ ಆದೇಶದ ಮೇರೆಗೆ ಅವರು ಎಲ್ಲಾ ಕಡೆಗಳಲ್ಲೂ ಯಡಿಯೂರಪ್ಪನವರು ರಾಜ್ಯದ ಮುಖ್ಯಮಂತ್ರಿಯಾದಾಗ ಅವರು ಹುಟ್ಟೂರಿನಲ್ಲಿ ಮಂಡ್ಯದಲ್ಲಿ ಆರ್‌ಎಸ್‌ಎಸ್‌ನ ಸಂಚಾಲಕರಾಗಿ ಯಾವ ರೀತಿಯಾಗಿ ಇದ್ದರು ಎಂಬುದು ನಮಗೂ ಕೂಡ ಗೊತ್ತು. ಇವತ್ತು ಜನರಿಗೆ ಭಯವಾಗಿದೆ. ಎಲ್ಲಿ ನಮಗೆ protection, minorityಗೆ Protection ಎಲ್ಲಿದೆ? ದಲಿತರಿಗೆ ಎಲ್ಲಿದೆ ರಕ್ಷಣೆ? ಬೇರೆ ಜನರಿಗೆ ರಕ್ಷಣೆ ಎಲ್ಲಿದೆ? ಏಕೆಂದರೆ ಒಂದು ideaಗೆ set ಆಗಿದ್ದೇವೆ. ಯಾವಾಗಲೂ ಕೂಡ ಬಿಜೆಪಿಯವರಿಗೆ set ಆಗಿಲ್ಲ. Economic development ಬಗ್ಗೆ ಇವರಿಗೆ ಏನು ಕೂಡ ಗೊತ್ತಿಲ್ಲ. ಇವರು ಕೇವಲ ಘೋಷಣೆಗಳ ಮುಖಾಂತರ ಇವತ್ತಿನ ದಿವಸ ಕೆಲಸವನ್ನು ಮಾಡುತ್ತಿದ್ದಾರೆ. ಅದಕ್ಕೆ ನಾನು ಇವತ್ತು ಅಧ್ಯಕ್ಷರೆ, ತಮಗೆ ಕೇಳುವುದೇನೆಂದರೆ, ಯಾವತ್ತು

ಬೆಂಬಲವನ್ನು ವಾಪಸ್ಸು ತೆಗೆದುಕೊಂಡಿದ್ದಾರೆ, ಯಾವ ರೀತಿಯಲ್ಲಿ ಸದನದಲ್ಲಿ ನಾವು ನಿಮಗೆ ವಿರೋಧ ಮಾಡುವುದಕ್ಕೆ ಬಂದಿದ್ದೇವೆ., ಈ ಸರ್ಕಾರದ ಪತನವಾಗಬೇಕೆಂದು ಬಂದಿದ್ದೇವೆ. ದಕ್ಷಿಣ ಭಾರತದಲ್ಲಿ ಬಿಜೆಪಿ ಸರ್ಕಾರವಾಗುವಂತಹ ನೈತಿಕತೆ ಇಲ್ಲ. 2004ರ ಚುನಾವಣೆಯಲ್ಲಿ ನಮಗೆ ಅಧಿಕ ಸಂಖ್ಯೆಯಲ್ಲಿ ಆರಿಸಿ ಕಳಿಸಿದ್ದಾರೆಯೇ? ನಿಮಗೆ 79 ಶಾಸಕರು ಇರಬಹುದು, ನಮಗೆ 65 ಇರಬಹುದು, ಅವರಿಗೆ 58 ಇರಬಹುದು. ಆದರೆ ಬಿಜೆಪಿ ಸರ್ಕಾರದ ಮುಖ್ಯಮಂತ್ರಿಯಾಗಿ ಏನು ತಾವು ಪ್ರದರ್ಶನ ಮಾಡಿದ್ದೀರಿ, ನಾವು ಇದಕ್ಕೆ ಮಾನ್ಯತೆ ಕೊಡುವುದಕ್ಕೆ ತಯಾರಿಲ್ಲ. ಏಕೆಂದರೆ ನಾವುಗಳು ಸಜ್ಜಾಗಿದ್ದೇವೆ, ನಮ್ಮ ಅಧ್ಯಕ್ಷರು ಇದ್ದಾರೆ, ನಮ್ಮ ಪಕ್ಷದಲ್ಲಿ ಎಲ್ಲಾ ಹಿರಿಯರು ಇದ್ದಾರೆ, ಯುವಕರು ಕೂಡ ಇದ್ದಾರೆ, ನಮೆಲ್ಲರಿಗೂ ಕೂಡ ಸವಾಲನ್ನು ಎದುರಿಸತಕ್ಕಂತಹ ಶಕ್ತಿ ಸಾಮರ್ಥ್ಯ ಇದೆ. ಅದಕ್ಕೆ ಏಕೆ ವ್ಯರ್ಥವಾಗಿ ಇವತ್ತಿನ ದಿವಸ ಸರ್ಕಾರಕ್ಕೆ ಮತಯಾಚನೆ ಮಾಡುತ್ತಿದ್ದಿರೋ ನನಗೆ ಅರ್ಥವಾಗುತ್ತಿಲ್ಲ. ಇವತ್ತು ನೀವು ಅವರನ್ನು ಕೇಳಿ, ಜೊತೆಯಲ್ಲಿ ಇರುವುದಕ್ಕೆ ಏನಾಗಿದೆ ಎಂದು ಕೇಳಿ. ಇವತ್ತು ತಮಗೂ ಕೂಡ ಗೊತ್ತಿರಲಿಲ್ಲ. ತಾವು ಚೇಂಬರಿನಲ್ಲಿ ಮಾತನಾಡುತ್ತಿದ್ದೀರಿ, ಯಾವ ತರಹದ ವಿಪ್ ಆಗಿದೆ ಎಂದು ನಾನು ತಮಗೆ ಓದಿ ಹೇಳಿದ್ದೇನೆ. ವಿಪ್ ಜಾರಿ ಮಾಡಿದ್ದಾರೆ. "ದಿನಾಂಕ: 19–11–2007ರ ಸೋಮವಾರದಂದು ವಿಧಾನಸಭೆಯಲ್ಲಿ ಸರ್ಕಾರವು ಮಂಡಿಸಿರುವ ವಿಶ್ವಾಸ ಮತ ನಿರ್ಣಯ ವಿರುದ್ಧವಾಗಿ ನಮ್ಮ ಮತ ಚಲಾಯಿಸಲು ಜನತಾದಳ (ಎಸ್) ಶಾಸಕಾಂಗ ಪಕ್ಷದ ನಿರ್ಣಯದಂತೆ ಸೂಚಿಸಲಾಗಿದೆ" ಅದಕ್ಕೆ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ, ಇವತ್ತು ವಿಪ್ ಬಂದಿದೆ. ಇವತ್ತು ಮಿತ್ರಪಕ್ಷಗಳಲ್ಲಿ ಒಡಕು ಆಗಿದೆ. ಮಿತ್ರಪಕ್ಷಗಳು ಇದರ ಬಗ್ಗೆ ಸಹಕಾರವನ್ನು ಕೊಡುತ್ತಿಲ್ಲ. ಬೆಂಬಲವನ್ನು ಕೊಡುತ್ತಿಲ್ಲ. ಇವತ್ತು ಕಾಂಗ್ರೆಸ್ ಪಕ್ಷವೂ ಕೂಡ ಇದರ ಬಗ್ಗೆ ನಮಗೆ ಬೆಂಬಲವನ್ನು ಕೊಡುತ್ತಿಲ್ಲ. ಇಂತಹ ಒಂದು ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಬರತಕ್ಕಂತಹ ರೀತಿಯಲ್ಲಿ ಒಂದು ಏನಾಯಿತೆಂದರೆ, ತರಾತುರಿಯಲ್ಲಿ ನಿಮ್ಮ ಜೀವನದ ಕನಸು ನನಸಾಗಿದೆ. ಆಗಬೇಕಾಗಿತ್ತೆಂದು ನೀವು ಹೇಳಿದ್ದೀರಿ. ಅದು ಪರಿಪೂರ್ಣವಲ್ಲ. ಇವತ್ತು ರಾಜ್ಯದ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯದಲ್ಲಿ ಸಿಕ್ಕಂತಹ ಎನು ಒಂದು

ಅವಕಾಶವಿದೆ, ಯಾವ ರೀತಿಯಲ್ಲಿ ಅದನ್ನು ಪಾಲನೆ ಮಾಡಿದ್ದೀರಿ ಎಂದು ಗೊತ್ತಿದೆ. ಇವತ್ತು ಕಬ್ಬು ಬೆಳೆಗಾರರಾಗಲಿ, ನೀರಾವರಿಯ ಬಗ್ಗೆ ಕಾರ್ಯಕ್ರಮವಾಗಲಿ, ಯಾವ ಕಾರ್ಯಕ್ರಮವನ್ನು ಕೂಡ ಇವತ್ತಿನ ದಿವಸ ತಾವು ಮಾಡಿಲ್ಲ. ಯಾವ ಮನೆಗಳನ್ನು ಕೂಡ ತಾವು ಕಟ್ಟಿಸಿಲ್ಲ. ಅವೆಲ್ಲ ಕಾರ್ಯಕ್ರಮದ ಬಗ್ಗೆ ಹೇಳುತ್ತಾ ಹೋದರೆ ಸಾಕಷ್ಟು ಸಮಯವಾಗುತ್ತದೆ. ಅದಕ್ಕೆ ನಾನು ಇವತ್ತು ಹೇಳುವುದೇನೆಂದರೆ, ತಾವು ಏನು ನಿರ್ಣಯ ಮಂಡಿಸಿದ್ದೀರಿ, ನಾನು ಅದಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತೇನೆ. ವಿರೋಧವೆಂದರೆ ವೈಯಕ್ತಿಕವಾಗಿ ಅಲ್ಲ. ಇವತ್ತು ಪಕ್ಷದ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯದ ಸಮಸ್ತ ಜನರ ಹಿತದೃಷ್ಟಿಯಿಂದ ಜನರ ಮನಸಿನಲ್ಲಿರುವಂತಹ ಭಾವನೆಗಳನ್ನು ಪ್ರತಿಬಿಂಬಿಸುವಂತಹ ರೀತಿಯಲ್ಲಿ ಕೂಡ ಇವತ್ತು ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಸಶಕ್ತವಾಗಿದೆ. ಇವತ್ತು ಜನತಾದಳದ ಎಲ್ಲಾ ಶಾಸಕರ ಮತ್ತು ಮುಖಂಡರನ್ನು ಮೋಸಗೊಳಿಸಿದ್ದೀರಿ, ನಿಮ್ಮ ಪ್ರಮಾಣವಚನ ಸ್ವೀಕಾರ ಮಾಡಿರುವುದನ್ನು ರಾಜ್ಯದ ಜನರು ಯಾರೂ ಕೂಡ ಒಪ್ಪುವುದಿಲ್ಲ. ನಿಮಗೆ ಕೂಡ ಇದು ಒಪ್ಪುತ್ತಿಲ್ಲ. ನೀವು ಹೇಗೆ ರಾಜ್ಯದ ಮುಖ್ಯಮಂತ್ರಿಯಾಗುತ್ತೀರಿ? ನೀವು 79 ಶಾಸಕರ ಬೆಂಬಲದಿಂದ ಮುಖ್ಯಮಂತ್ರಿಯಾಗುತ್ತಿದ್ದೀರಾ? ಇವತ್ತು ಜನತಾದಳದ ಶಾಸಕರು ಕೂಡ ಇದಕ್ಕೆ ತಮ್ಮ ಬೆಂಬಲವಿಲ್ಲವೆಂದು ಹೇಳಿದ್ದಾರೆ. ಆದರೆ ನೀವು ಏನೆಂದರೆ, ಕರ್ನಾಟಕ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ, ಎಲ್ಲಾ ಕಡೆಗಳಿಗೆ ಹೋಗುತ್ತೀರಿ, ನಿಮಗೆ ಇದರಲ್ಲಿ ಏನಾದರೂ ಕೂಡ ಹೆಮ್ಮೆ ಎನಿಸುತ್ತಿರಬಹುದು, but you have failed in all the fields. ಇವತ್ತು ನಿಮಗೆ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಒಂದು ನಿಮಿಷ ಕೂಡ ಇಲ್ಲಿ ಅವಕಾಶವಿಲ್ಲ. ನಾವು ತಿಳಿದಿದ್ದೆವು, ಯಾವಾಗ ಇದು ಸುತ್ತೋಲೆ ಬಂತು, ವಿಪ್ ಜಾರಿ ಆದಮೇಲೆ ಬೆಂಬಲ ಹಿಂದೆ ತೆಗೆದುಕೊಂಡಿದ್ದೇವೆಂದು ಬಂತು. 1979ರಲ್ಲಿ ಶ್ರೀ ಚರಣಸಿಂಗ್‌ರವರು ದೇಶದ ಪ್ರಧಾನ ಮಂತ್ರಿಯಾಗಿದ್ದರು. ಮೊಟ್ಟ ಮೊದಲನೆಯದಾಗಿ Non-Brahmin Prime Minister ಆಗಿದ್ದರು. ಯಾವಾಗ ಅವರಿಗೆ ಕೊಟ್ಟ ಬೆಂಬಲವನ್ನು ವಾಪಸ್ಸು ತೆಗೆದುಕೊಂಡ ಮೇಲೆ ಅವರು ಒಂದು ದಿವಸವೂ ಕೂಡ ಪಾರ್ಲಿಮೆಂಟಿನಲ್ಲಿ ಕೂರಲಿಲ್ಲ. ಅಲ್ಲಿಂದಲೇ ಅವರು ರಾಜಿನಾಮೆಯನ್ನು ಕೊಟ್ಟಿದ್ದಾರೆ. ಈ ರಾಷ್ಟದಲ್ಲಿ ಈ

ಬಗ್ಗೆ ಸಾಕಷ್ಟು ಉದಾಹರಣೆ ಇದೆ. ಅಧಿಕಾರ ಬರುತ್ತದೆ ಮತ್ತು ಹೋಗುತ್ತದೆ., ಎಷ್ಟೋ ಕಡೆಗಳಲ್ಲಿ ಈ ರೀತಿ ಆಗಿದೆ. ಆದರೆ ಇವತ್ತು ನಿಮ್ಮ ಮನಸ್ಸು ಎಲ್ಲಿಯವರೆಗೆ ನೆಮ್ಮದಿಯಾಗುತ್ತದೆ, ಎಲ್ಲಿಯವರೆಗೆ ನಿಮಗೆ satisfaction ಸಿಗುತ್ತದೆಯೇ ಗೊತ್ತಿಲ್ಲ. ನಮಗೆ ಇಷ್ಟು ಛೀಮಾರಿ ಹಾಕಿ ಇಂತಹ ಒಂದು ದುಸ್ಥಿತಿಯಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ, ಆ ಮುಖ್ಯಮಂತ್ರಿ ಪದವಿಯನ್ನು ತ್ಯಜಿಸುವಂತಹ ರೀತಿಯಲ್ಲಿ ಏನು ವಿಷಾದವಾಗುತ್ತಿದೆ, ಅದರ ಬಗ್ಗೆ ಹೇಳುವುದಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ. ಇಷ್ಟು ಮಾತುಗಳನ್ನು ಹೇಳಿ ನಾವು ನಮ್ಮ ಬೆಂಬಲವನ್ನು ಕೊಡುತ್ತಿಲ್ಲವೆನ್ನುವಂತಹ ಮಾತನ್ನು ಅವರಿಗೆ ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ(ಗುರುಮಿಠಕಲ್):- ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಏಕೆಂದರೆ ಈಗಾಗಲೇ ವಿರೋಧ ಪಕ್ಷದ ನಾಯಕರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿ ನಾವು ಏತಕ್ಕೆ ಈ ವಿಶ್ವಾಸಮತಕ್ಕೆ ಬೆಂಬಲ ನೀಡುತ್ತಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಕೂಡ ಒಂದೆರೆಡು ಮಾತನ್ನು ಹೇಳುತ್ತೇನೆ. ನಿಜವಾಗಿಯೂ ನೋಡಿದರೆ ಇದು ಚರ್ಚೆಯೇ ಆಗಬಾರದು. ಏಕೆಂದರೆ ಈಗಾಗಲೇ ವಿಶ್ವಾಸಮತದ ವಿರುದ್ಧವಾಗಿ ವಿಪ್ ಅನ್ನು ಜೆಡಿಎಸ್‌ನವರು ಜಾರಿ ಮಾಡಿದ್ದಾರೆ. ಜೆಡಿಎಸ್ ಮತ್ತು ಬಿಜೆಪಿ ಇಬ್ಬರೂ ಸೇರಿ ಸಮ್ಮಿಶ್ರ ಸರ್ಕಾರ ಮಾಡುತ್ತೇವೆಂದು ಹೇಳಿ ಮಾನ್ಯ ರಾಜ್ಯಪಾಲರಿಗೆ ಬರೆದು ಕೊಟ್ಟಿರುವುದಾಗಿ ಅವರು ಹೇಳಿದರು. ಆದರೆ ಅದರ ಮುಂದಿನ ಬೆಳವಣಿಗೆ ಏನಾಯಿತು? ಆ ಬೆಳವಣಿಗೆ ಮೇಲೆ ಇವತ್ತಿನ ದಿವಸ ವಿಪ್ ಅನ್ನು ಜಾರಿ ಮಾಡಿ ಬೆಂಬಲ ನಾವು ಕೊಡುತ್ತಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ circulate ಮಾಡಿದ್ದಾರೆ. Circulate ಮಾಡಿದ ಮೇಲೆ ಯಾವ ನೈತಿಕ ಆಧಾರದ ಮೇಲೆ ವಿಶ್ವಾಸ ಮತ ಕೇಳುತ್ತಿದ್ದಾರೆ? ನಿಮಗೆ ಏನಾದರೂ ಆಧಾರ ಬೇಕಲ್ಲವೆ? ನಿಮಗೆ ಬೆಂಬಲ ಇಲ್ಲ., ಯಾರು ಬೆಂಬಲ ಕೊಡುತ್ತೇವೆಂದು ಹೇಳಿದ್ದರೋ ಅವರೇ ಇವತ್ತು ಕಾರಣಾಂತರದಿಂದ ಬೆಂಬಲವನ್ನು ವಾಪಸ್ಸು ಪಡೆದ ಮೇಲೆ ಈ ಚರ್ಚೆಗೆ ಆಸ್ಪದ ಎಲ್ಲಿದೆ? ಮತ್ತು ವಿಶ್ವಾಸ ಮತವನ್ನು ನಾನು ತೆಗೆದುಕೊಳ್ಳುತ್ತೇನೆ ಎಂಬ ಮೊಂಡು ಧೈರ್ಯ ತೋರಿಸುವುದು ಆಗಬಾರದು. ಈ ಅಸೆಂಬ್ಲಿಯನ್ನು ಒಂದು platform ಮಾಡಿಕೊಂಡು ನೀವು

ನಿಮ್ಮದೆ ಆದಂತಹ ಫಿಲಾಸಫಿಯನ್ನು ಹೇಳಿಕೊಂಡು ಒಬ್ಬರ ಮೇಲೆ ಒಬ್ಬರು ಕೆಸರು ಎರಚುವ ಅಥವಾ ಟೀಕೆ ಟಿಪ್ಪಣಿ ಮಾಡುವ ಕೆಲಸ ಆಗಬಾರದು. ಬೆಂಬಲ ಇಲ್ಲದೇ ಇದ್ದಾಗ ಗೌರವದಿಂದ ರಾಜಿನಾಮೆ ಕೊಟ್ಟು, ಈ ಕಾರಣದಿಂದ ನಮಗೆ ಬೆಂಬಲ ಕೊಟ್ಟಿಲ್ಲ, ಈ ಕಾರಣಕ್ಕೆ ರಾಜಿನಾಮೆ ಕೊಡುತ್ತಿದ್ದೇನೆಂದು ಹೇಳಿ ಹೋಗಬೇಕಾಗಿತ್ತು. ಅದು ಬಿಟ್ಟು "ನಾನು ಅದು ಮಾಡಿದೆ, ಭಾಗ್ಯಲಕ್ಷ್ಮಿ ಯೋಜನೆ ಜಾರಿ ಮಾಡಿದೆ" ಎಂದು ಹೇಳಿ ಅದಕ್ಕಾಗಿ ತಾವು ವಿಶ್ವಾಸ ಮತ ಕೊಡಿ ಎಂದು ಕೇಳಿದರೆ ಇಲ್ಲಿ ಅದನ್ನು ಯಾರೂ ಕೇಳುವುದಿಲ್ಲ. ನೀವು ಏನು ಮಾಡಿದ್ದೀರಿ, ಬಿಟ್ಟಿದ್ದೀರಿ ಅವೆಲ್ಲಾ ಬಜೆಟ್ ಮೇಲೆ ಚರ್ಚೆಯಾಗುವ ಸಂದರ್ಭದಲ್ಲಿ ಸಾಕಷ್ಟು ನಿಮ್ಮ ಆಗು ಹೋಗುಗಳ ಬಗ್ಗೆ, ಸಾಧನೆಗಳ ಬಗ್ಗೆ ಚರ್ಚೆ ಆಗಿದೆ. ಕೇವಲ "ನಾನು ಸೈಕಲ್ ಕೊಟ್ಟೆ, ನಾನು ಗುಡಿ ಗುಂಡಾರಗಳಿಗೆ ಹಣ ಕೊಟ್ಟೆ" ಅಂದ ಕೂಡಲೇ ಅದೇನು ದೊಡ್ಡ ಸಾಧನೆಯಲ್ಲ. ಈ ದೇಶದಲ್ಲಿ, ಈ ರಾಜ್ಯದಲ್ಲಿ ಮನುಷ್ಯನಿಗೆ ನೀನು ಮನುಷ್ಯನಾಗಿ ಬದುಕು ಎಂದು ಹೇಳಿ ಹಕ್ಕು ಕೊಡಿಸಿದಂಥ ಪಕ್ಷಗಳಿಗೂ ಕೂಡ ಜನ ತಿರಸ್ಕಾರ ಮಾಡಿದ್ದಾರೆ. ಉಳುವವನೇ ಭೂಮಿ ಒಡೆಯ ಎಂದು ಹೇಳಿ ಲಕ್ಷಾಂತಾರ ಗೇಣಿದಾರರನ್ನು ಮಾಲೀಕರನ್ನಾಗಿ ಮಾಡಿದರೂ ಕೂಡ ಆ ಪಕ್ಷಕ್ಕೆ ತಿರಸ್ಕಾರ ಮಾಡಿದ್ದಾರೆ. ಲಕ್ಷಾಂತರ ಎಕರೆ ಒತ್ತುವರಿ ಜಮೀನನ್ನು ಖಾಯಂ ಮಾಡಿಕೊಟ್ಟ ಪಕ್ಷಕ್ಕೆ ಜನ ತಿರಸ್ಕಾರ ಮಾಡಿದ್ದಾರೆ. ಸೂರು ಇಲ್ಲದವರಿಗೆ ಸೂರು ಕೊಟ್ಟ ಪಕ್ಷಕ್ಕೆ ಬೆಂಬಲ ಇಲ್ಲ. ಎಷ್ಟು ಯೋಜನೆಗಳ ಬಗ್ಗೆ ಹೇಳಬಹುದು. Reservation, Backlog ಹುದ್ದೆಗಳ ಬಗ್ಗೆ, ಬಿಸಿಯೂಟ, ನಾವು ಸಾವಿರ ಯೋಜನೆಗಳ ಬಗ್ಗೆ ಹೇಳಬಹುದು. ನಾವು ಮಾಡಿದ ಕಾರ್ಯಕ್ರಮಗಳ ಮುಂದೆ ಬಹುಶಃ ನಿವು ಹೇಳಿಕೊಳ್ಳುವಂಥ ಕಾರ್ಯಕ್ರಮಗಳು ಏನೂ ಇಲ್ಲ. ಒಬ್ಬರು ಬದುಕಲಿಕ್ಕೆ ದಾರಿ ಮಾಡಿಕೊಟ್ಟಂಥ ಕಾಂಗ್ರೇಸ್ ಪಕ್ಷಕ್ಕೆ 2004 ರಲ್ಲಿ ಬೆಂಬಲ ಸಿಗಲಿಲ್ಲ. ಆದರೆ ನೀವು " ನಾನು ಸೈಕಲ್ ಕೊಟ್ಟಿದ್ದೇನೆ, ಭಾಗ್ಯಲಕ್ಷ್ಮಿ ಯೋಜನೆ ಜಾರಿಗೊಳಿಸಿದ್ದೇನೆ, ಹಾಗಾಗಿ ನನಗೆ ವಿಶ್ವಾಸ ಮತ ಕೊಡಿ" ಎಂದು ಕೇಳಿದರೆ ಹೇಗೆ? ನಾವು ಸಹ ಸಾಕಷ್ಟು ಯಶಸ್ವಿ ಯೊಜನೆಗಳನ್ನು ಜಾರಿಗೊಳಿಸಿದ್ದೇವೆ. ಆಶ್ರಯ ಯೋಜನೆ ಮುಂತಾದ ಸಾಕಷ್ಟು ಯೋಜನೆಗಳಿವೆ, ನಾವು ಅದನ್ನು ಪಟ್ಟಿ ಮಾಡಲಿಕ್ಕೆ ಹೋಗುವುದಿಲ್ಲ. ಇಲ್ಲಿ ಇರುವಂಥದ್ದು ಒಂದು specific point ಏನು? ನೀವು

ವಿಶ್ವಾಸಮತವನ್ನು ಪಡೆಯುತ್ತಿದ್ದೀರಿ, ನಿಮಗೆ ಈ ಸದನದಲ್ಲಿ ಈ ಹೊತ್ತಿಗೆ ಬೆಂಬಲ ಇದೆಯೇ? ಇಲ್ಲ. ಏಕೆಂದರೆ ಈಗಾಗಲೇ ವಿಪ್ ಜಾರಿಯಾಗಿದೆ. ಅದು ನಿಮಗೆ ಗೊತ್ತಾಗಿದೆ, ಗೊತ್ತಿದ್ದರೂ ಕೂಡ ನನಗೆ ವಿಶ್ವಾಸಮತವನ್ನು ಕೊಡಿ ಎಂದರೆ ಯಾವ basis ಮೇಲೆ ಈ ಸದನದವರು ನಿಮಗೆ ಬೆಂಬಲ ನೀಡಬೇಕು? ಏತಕ್ಕಾಗಿ ನಿಮಗೆ ಬೆಂಬಲ ಕೊಡಬಾರದು ಎಂದು ಈಗಾಗಲೇ ನಿಮ್ಮ ಮಿತ್ರ ಪಕ್ಷ ಜೆಡಿಎಸ್‌ನವರೇ ಹಿಂದೆ ಒಂದೂವರೆ ಪುಟಗಳಷ್ಟು advertisement ಮಾಡಿ ಹೇಳಿದ್ದಾರೆ. ಇದೊಂದೆ ಸಾಕ್ಷಿ. ಬೇರೆ pamphlets, ಬೇರೆ ಕಾರಣಗಳು ಬೇಕಾಗಿಲ್ಲ. ಇದು ಒಂದನ್ನು ತಾವು ಅಧ್ಯಕ್ಷರೇ, ನಮ್ಮ ಹೇಳಿಕೆಗಳೆಂದು ಹೇಳೀ ತಾವು Speechನಲ್ಲಿ ಸೇರಿಸಿದರೆ ಒಳ್ಳೆಯದಾಗುತ್ತದೆ. ಏಕೆಂದರೆ ಅದರಲ್ಲಿ ಅವರೇ ಹೇಳಿದ್ದಾರೆ, ಉಪಮುಖ್ಯಮಂತ್ರಿಗಳು ಬಿಜೆಪಿ ಹೆಸರಿನಲ್ಲಿ ಇವತ್ತು ಅಮಾಯಕರನ್ನು ಕೊಂದರೂ ಕೂಡ ಅದಕ್ಕೆ ಸಪೋರ್ಟ್ ಮಾಡಿದರು. ಒಬ್ಬ ಮುಖ್ಯಮಂತ್ರಿಯ ಮೇಲೆ ಕೊಲೆ ಆಪಾದನೆ ಮಾಡುವಂಥ ಮಂತ್ರಿಗೆ protection ಕೊಟ್ಟರು. ಗಣಿ ಹಗರಣದಲ್ಲಿ ಷಾಮೀಲಾದ ಎಂ.ಎಲ್.ಸಿ.ಗೆ ಬೆಂಬಲ ನೀಡಿದರು. 260–00 ಕೋಟಿ· ರೂ.ಗಳ ಹಣವನ್ನು ಯಾವುದೇ ಒಂದು ಆರ್ಥಿಕ ರೂಲ್ಸ್ ರೆಗ್ಯುಲೇಷನ್ ಫಾಲೋ ಮಾಡದೇ ಮಠ ಮಂದಿರಗಳಿಗೆ ಇಚ್ಛೆ ಬಂದಂತೆ ಕೊಟ್ಟರು. ಅಂಥ ಉಪ ಮುಖ್ಯಮಂತ್ರಿ ಅಥವಾ ಹಣಕಾಸು ಸಚಿವರನ್ನು ನಾವು 60 ವರ್ಷಗಳಲ್ಲಿ ನೋಡಿಲ್ಲ. ಅಂಥವರಿಗೆ ನಾವು ಸಪೋರ್ಟ್ ಮಾಡಬೇಕೇ ಎನ್ನತಕ್ಕಂಥ ಪ್ರಶ್ನೆಉದ್ಭವವಾಗುತ್ತದೆ. 19ನೇ ಅಕ್ಟೋಬರ್ 2007ರಲ್ಲೇ ಅವರು ಕೇಳಿದರು. ಇಷ್ಟೊಂದು ಛೀಮಾರಿ ಹಾಕಿಸಿಕೊಂಡು, ಇಷ್ಟೊಂದು ಬೈಸಿಕೊಂಡು ಏಕೆ ತರಾತುರಿಯಲ್ಲಿ ತುಮಕೂರಿನಿಂದ, ಶಿವಮೊಗ್ಗಾದಿಂದ ಓಡಿಬರುವುದು. ಇಲ್ಲಿ ಬಂದು ಕ್ಯಾಪಿಟಲ್ ಹೋಟೆಲ್‌ನಲ್ಲಿ ಕುಳಿತು ಮಾತನಾಡುವುದು. ಛೇಂಬರ್‌ಗಳಲ್ಲಿ ಮಾತನಾಡುವುದು, ಎಲ್ಲಾ ಕಡೆ ಮಾತನಾಡುವುದು ಅಂದರೆ ಇದರ ಅರ್ಥ ಏನು? ನಾವು ಹೇಳಿದರೆ ನಿಮಗೆ ಸಿಟ್ಟು ಬರುತ್ತದೆ. ಇದು ಅಧಿಕಾರ ದಾಹವಲ್ಲದೇ ಏನು? ಅಧಿಕಾರಕ್ಕಾಗಿ ಪ್ರತಿಯೊಂದು ಕಡೆ ನೀವು compromise ಮಾಡಿಕೊಂಡು ಹೋಗುತ್ತಿರುವುದಕ್ಕೆ ಇವೆಲ್ಲಾ ಉದಾಹರಣೆಗಳಲ್ಲವೇ? ಹೇಳುವುದು ಒಂದು, ಬೀದಿಯಲ್ಲಿ ದೇವೇಗೌಡರ ಪುತ್ಥಳಿಯನ್ನು ಸುಟ್ಟರಿ, ಚಪ್ಪಲಿ ಹಾರಗಳನ್ನು ಹಾಕಿದಿರಿ,

ಬೈದಿರಿ ಎಲ್ಲಾ ಮಾಡಿದಿರಿ ಮತ್ತೇ ನೀವ್ಯಾಕೆ ಒಂದಾದಿರಿ? ಅಂದರೆ ಅಧಿಕಾರದ ಆಸೆಗಾಗಿ, ಅವರು ಅದೇ ಷರತ್ತು ಹಾಕಿ ನಿಮಗೆ ಹೇಳಿದರು, ಅದಕ್ಕೂ ನೀವು ಒಪ್ಪಿಕೊಂಡಿರಿ. ಆದರೆ ನಾನು ನಮಗೆ ಹೇಳುವುದು ಇಷ್ಟೇ, ಇವತ್ತಿನ ದಿವಸ ಆಧಿಕಾರ ಅಂದರೆ ನಿಮಗೆ ಎಷ್ಟು ಪ್ರೀತಿ ಇದೆ ಎನ್ನುವುದು ಇದರಿಂದ ತೋರಿಸುತ್ತಿದೆ. ಅಂದರೆ ಅಧಿಕಾರದ ದಾಹ, ಅಧಿಕಾರದ ಮೋಹ, ಅಧಿಕಾರದ ಲಾಲಸೆ, ಏನೇ ಮಾಡಿ, ಒಂದು ಸಾರಿ ಅಧಿಕಾರ ಕೊಡಿ ಎಂದು ಹೇಳಿ...ನೀವು ತಾಳಬೇಕು. ಬೇರೆಯವರಿಗೆ ಪ್ರಶ್ನೆಗಳನ್ನು ಹಾಕಿದಿರಿ, ಬಸವಣ್ಣನವರ ವಚನಗಳನ್ನು ಹೇಳಿದಿರಿ. ಬಸವಣ್ಣನವರ follower ಎಂದು ಹೇಳಿದಿರಿ, ನುಡಿದಂತೆ ನಡೆಯುತ್ತೇನೆಂದು ಹೇಳಿದಿರಿ, ಬಸವಣ್ಣನವರು ಹೀಗೆ ಹೇಳಿದ್ದಾರೆಯೇ? ಅವಮಾನ ಮಾಡಿಸಿಕೊಂಡು ಮುಖ್ಯಮಂತ್ರಿ ಆಗಿ ಎಂದು ಹೇಳಿದ್ದಾರೆಯೇ? ಅಥವಾ ಬೆಂಬಲ ಇಲ್ಲದೇ ಮುಖ್ಯಮಂತ್ರಿಯಾಗಿ ಎಂದು ಹೇಳಿದ್ದಾರೆಯೇ? ಅಥವಾ ನಿಮಗೆ ಯಾವುದೇ ನೈತಿಕ ಬೆಂಬಲ ಇಲ್ಲದೇ ಇವತ್ತು ನೀವು ಸದನಕ್ಕೆ ಬಂದು ವಿಶ್ವಾಸ ಮತವನ್ನು ಕೇಳೀದ್ದೀರಿ. ಇವೆಲ್ಲಾ ನೋಡಿದಾಗ ಅಧ್ಯಕ್ಷರೇ ದಯವಿಟ್ಟು ನಾನೂ ಅನೇಕ ವಿಚಾರಗಳನ್ನು ಹೇಳಬೇಕೆಂದಿದ್ದರೂ ನಾನು ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಇದು ವಿಶ್ವಾಸಮತ ಪಡೆಯುವಂಥ ಸಂದರ್ಭ. ಓಟಿಂಗ್‌ಗೆ ಹಾಕಿಬಿಡಿ, ಏಕೆಂದರೆ ಈಗಾಗಲೆ ವಿಪ್ ಜಾರಿಯಾಗಿದೆ, ಇಲ್ಲಿ ಪರೀಕ್ಷೆ ಮಾಡುವಂಥದ್ದು ಇಲ್ಲ. ಒಂದು ವೇಳೆ ಮಿತ್ರ ಪಕ್ಷದವರು ಸಪೋರ್ಟ್ ಮಾಡುತ್ತೇವೆಂದು ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಲ್ಲಿ ಪ್ರಶ್ನೆಯೇ ಇಲ್ಲ, ಏಕೆ ಸುಮ್ಮನೆ ಚರ್ಚೆ? ಮೈದಾನ್‌ಮೆ ಗೋಡಾ, ಯಾರು ಎಷ್ಟು ಓಡುತ್ತಾರೆಯೋ ನೋಡೋಣ. ಅದು ಬಿಟ್ಟು ಇಲ್ಲಿ ಸುಮ್ಮನೆ ಚರ್ಚೆ ಮಾಡಿಕೊಂಡು ಒಬ್ಬರ ಮೇಲೆ ಒಬ್ಬರು ಹೇಳಿಕೊಂಡು ಇರಲಿಕ್ಕೆ ಇದು ಪ್ಲಾಟ್‌ಫಾರಂ ಆಗಬಾರದು. ಏಕೆಂದರೆ ಏನು ವಿಶ್ವಾಸ ಮತ ಪಡೆಯಲಿಕ್ಕೆ ನಾನು ಅದು ಮಾಡಿದೆ ಅವರು ಹೀಗೆ ಮಾಡಿದರು ಎಂದು ಹೇಳಿಕೊಂಡು ಹೋಗಲಿಕ್ಕೆ ಇದು ಒಂದು ಅವಕಾಶ ಹೊರತಾಗಿ ವಿಶ್ವಾಸ ಮತವನ್ನು ಪಡೆದುಕೊಳ್ಳುವಂಥ ಶಕ್ತಿಯೇ ಇಲ್ಲವೆಂದಾಗ ತಾವ್ಯಾಕೆ ಇದಕ್ಕೆ ಆಸ್ಪದ ಕೊಡುತ್ತೀರಿ, ಸಮಯವನ್ನು ಏಕೆ ವ್ಯರ್ಥ ಮಾಡುತ್ತೀರಿ., ಇಡಿ ರಾಜ್ಯದ ಜನತೆಯ ಸಮಯ ವ್ಯರ್ಥ. ಇದಕ್ಕಾಗಿ ರಾಜ್ಯದ ಬೊಕ್ಕಸಕ್ಕೆ ಏಕೆ

ಲುಕ್ಸಾನು ಮಾಡಬೇಕು? ಅದಕ್ಕಾಗಿ ದಯವಿಟ್ಟು ತಾವು ಇದಕ್ಕೆ ಅವಕಾಶ ಕೊಡುವಂಥ ಅವಶ್ಯಕತೆ ಇಲ್ಲ. ಅವರು ಹೇಳೀಕೊಂಡಿದ್ದಾರೆ, ಪ್ರಸ್ತಾಪ ಮಾಡಿದ್ದಾರೆ, ಅವರು ಒಪ್ಪುತ್ತಾರೋ ಇಲ್ಲವೋ ಎನ್ನುವುದನ್ನು ಸದನದ ಗಮನಕ್ಕೆ ತಂದು ತಾವು ಕೇಳಿಬಿಡಿ, ಅದು ತಕ್ಷಣವೇ ಗೊತ್ತಾಗುತ್ತದೆ.ಅವರಿಗೆ ಬಹುಮತ ಸಿಕ್ಕಿತು ಎಂದರೆ ಅನಂತರ ಬೇಕಾದರೆ ಭಾಷಣ ಮಾಡಲಿ. ಆದುದರಿಂದ ಬಹುಮತ ಇಲ್ಲದೇ ವಿಶ್ವಾಸಮತದ ಹೆಸರಿನ ಮೇಲೆ ತನ್ನ ಅನಿಸಿಕೆಗಳನ್ನು ತನ್ನ philosophyಯನ್ನು ಹೇಳುವುದು ಆಗಬಾರದು. ಏಕೆಂದರೆ ನಾವು ಮೊದಲೇ ಹೇಳಿದ್ದೇವೆ. ಇವತ್ತು ಅವರ ಮುಖಂಡರು ಅನೇಕಸಾರಿ ನಮಗೆ ಟೀಕೆಟಿಪ್ಪಣಿ ಮಾಡಿದ್ದಾರೆ. ಅದಕ್ಕೆ ವಿರೋಧ ಪಕ್ಷದ ನಾಯಕರು ಉತ್ತರ ಕೊಟ್ಟರು. ಸದಾನಂದಗೌಡರು ಹೇಳಿದರು, ನಾವೆಲ್ಲರೂ ನಾಲಾಯಕ್ ಅಂತೆ, ಅವರೇ ಲಾಯಕ್ಕರು, ನಾವು ಊರು ದೇಶ ಬಿಟ್ಟು ಹೋಗಬೇಕಂತೆ. ನಾವು ಈ ದೇಶದ ಮೂಲ ನಿವಾಸಿಗಳು. ಆದರೆ ನೀವು ಆರ್.ಎಸ್.ಎಸ್., ಬಿಜೆಪಿಯವರ philosophy ಇದೆಯಲ್ಲಾ, ನೀವೆಲ್ಲರೂ ಹೊರಗಿನಿಂದ ಬಂದವರು, ನಿಮಗೆ ನಾವು ಹೊರಗೆ ಕಳುಹಿಸಬೇಕು, ಆರ್ಯನ್ ಹೆಸರಿನ ಮೇಲೆ..

ಅಧ್ಯಕ್ಷರು: ಮೂಲ ನಿವಾಸಿಗಳು ಎಂದು ಹೇಳೀದ್ದು ಬೇರೆ ಅರ್ಥದಲ್ಲಿ. ಅವರು ಆರ್ಯರು. ನೀವು ಈ ಕಡೆಯವರೂ ಆರ್ಯರಿರಬಹುದು. ಅದನ್ನು ಈಗ ಏಕೆ ಎತ್ತುತ್ತೀರಿ?

ಶ್ರೀ ಮಲ್ಲಿಕಾರ್ಜುನ್ ಎಂ ಖರ್ಗೆ: ನಾವೇನು ಆರ್ಯನ್ಸ್ philosophy ತೆಗೆದುಕೊಂಡು ಬಂದವರಲ್ಲ. ನಾವು ಈ ದೇಶದ ಮೂಲ ನಿವಾಸಿಗಳು. ಆದರೆ ನಾವು ಇವತ್ತು ಚರ್ಚೆ ಮಾಡತಕ್ಕದ್ದು, philosophyಯನ್ನು ಅಡ್ವಾನಿಯವರಿಂದ ಕಲಿತ್ತಿದ್ದೀರಿ. ಈಗೇನು ಮಹಾತ್ಮಾಗಾಂಧಿಯವರ ಹೆಸರನ್ನು ಹೇಳಿಕೊಂಡು ಹೊರಟಿದ್ದೀರಿ. ಮಹಾತ್ಮಾ ಗಾಂಧಿಜಿಯವರನ್ನು ಕೊಲೆ ಮಾಡಿದಂಥ ಆರ್.ಎಸ್.ಎಸ್. ಪರಂಪರೆಯಿಂದ ಬಂದಂಥ ಜನ ನಮಗೆ ಇವತ್ತು ನೀವು ಲಾಯಕ್ ಇಲ್ಲ, ಈ ಊರು ಬಿಟ್ಟು ಹೋಗಬೇಕು ಎಂದು ಹೇಳುತ್ತಾರೆ. ಅವರೇನು ಈ ಊರಿನ ಸಂಸ್ಕೃತಿಯನ್ನು ಗುತ್ತಿಗೆ ತೆಗೆದುಕೊಂಡಿದ್ದಾರೆಯೇ? ಆಂದರೆ ಐದು ಸಾವಿರ ವರ್ಷದಿಂದ ನಡೆದುಕೊಂಡು ಬಂದಿರುವ ಸಂಸ್ಕೃತಿ ಎಲ್ಲವೂ ನಿಮ್ಮದೇಯೇ? ಏಕೆಂದರೆ

ಆ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕೆಂದು ಹೇಳಿ ನಿಮ್ಮ ಪ್ರಯತ್ನ ಅಲ್ಲವೇ! ಅದಕ್ಕಾಗಿ ದಯವಿಟ್ಟು ಇಂಥ ಹುಚ್ಚು ಹುಚ್ಚು ಮಾತನಾಡಲು ಹೋಗಬಾರದು. ಬಿಟ್ಟು ಹೋಗವ ಕಾಲ ಬಂದಿರುವುದು ನಿಮಗೆ. ನಮಗೇಕೆ ಬಿಟ್ಟು ಹೋಗಿ ಎಂದು ಹೇಳುತ್ತೀರಿ? ನಾವು ಎಂದೂ ಆ ರೀತಿ ಹೇಳಿಲ್ಲ. ಅದ್ವಾನಿಯವರು ಹೊರಗಿನಿಂದ ಬಂದಿದ್ದಾರೆ ಬಿಟ್ಟು ಹೋಗಿ ಎಂದು ಎಂದಾದರೂ ಅಂದಿದ್ದೇವೆಯೇ? ನಾವು ಅವರಿಗೆ ನೀವು ಪಾಕಿಸ್ತಾನಕ್ಕೆ ಹೋಗಿ ನೀವು ಅಲ್ಲೇ ಹುಟ್ಟಿದ್ದು ಎಂದು ಎಂದಾದರೂ ಹೇಳಿದ್ದೇವೆಯೇ? ಇಲ್ಲ. ಅವರು ಈ ದೇಶದ ದೊಡ್ಡ ನಾಯಕರು. Deputy Prime Minister ಆಗಿ ಕೆಲಸ ಮಾಡಿದವರು. ನಾವು ಆ ರೀತಿ ಹೇಳುವುದಿಲ್ಲ. ಆದರೆ ಇವರು ಬಾಯಿಗೆ ಬಂದಂತೆ ನುಡಿಯುವುದು. ಏಕೆಂದರೆ ಏನೂ ವಿಷಯಗಳು ಸಿಗಲಿಲ್ಲ ಎಂದರೆ ಇಂಥದನ್ನು ಮಾತನಾಡುವುದು. ಮೊದಲೇ ಸಮಾಜವನ್ನು ಒಡೆದು ಆಳತಕ್ಕ ಅವರ ಪದ್ಧತಿ, ಅವರ ಒಂದು ಗುಣ. ಅದನ್ನೆ ಈಗಲೂ ಕೂಡ ಮಾಡುತ್ತಿದ್ದಾರೆ. ಈ ಮಾತನ್ನು ನಾವು ಒಬ್ಬರೇ ಹೇಳಿಲ್ಲ. ಅವರ ಮಿತ್ರ ಪಕ್ಷದವರಾದವರೂ ಹೇಳಿದ್ದಾರೆ. ಸಮಾಜ ಒಡೆಯತಕ್ಕ ಗುಣ ಬಿ.ಜೆ.ಪಿ. ಯಲ್ಲಿದೆ ಅಮಾಯಕರನ್ನು ಕೊಲ್ಲತಕ್ಕದ್ದಕ್ಕೆ support ಮಾಡತಕ್ಕ ಗುಣ ಅವರಲ್ಲಿದೆ. ಮಂಗಳೂರಿನಂಥ ಜಿಲ್ಲೆಯಲ್ಲಿ ದಂದೆ ಮಾಡತಕ್ಕದ್ದಕ್ಕೆ, ಪ್ರಚೋದನೆ ಮಾಡತಕ್ಕದ್ದಕ್ಕೆ ಅವರ ಬೆಂಬಲ ಇದೆ. ಹೀಗೆಲ್ಲಾ ಸವಿಸ್ತಾರವಾಗಿ ಹೇಳಿದ್ದಾರೆ. ಇವತ್ತು ನಾನು ಹೆಚ್ಚಿನ ಮಾತುಗಳನ್ನು ಆಡುವುದಿಲ್ಲ. ಛಾಪಾ ಕಾಗದದ ಮೇಲೆ agreement ಆಗುವುದಿತ್ತು. ಅದು ಆಯಿತೋ ಇಲ್ಲವೋ ಗೊತ್ತಾಗಲಿಲ್ಲ. ನಾನು ಆ ಗೋಜಿಗೆ ಹೋಗುವುದಿಲ್ಲ. ಇವತ್ತು ಒಂದೇ ಒಂದು ಮಾತನ್ನು ಹೇಳುತ್ತೇನೆ. ಅವರೇನು ತಮ್ಮ ವಿಶ್ವಾಸವನ್ನು ಪಡೆಯುವುದಕ್ಕೆ ತಮ್ಮ motionನ್ನು move ಮಾಡಿದ್ದಾರೆ ಅದಕ್ಕೆ ತಾವು ತಕ್ಷಣವೇ voting ಗೆ ಹಾಕಿದರೆ ಒಳ್ಳೆಯದು. ಏಕೆಂದರೆ ಇದು ಚರ್ಚೆಯ ವಿಷಯವಾಗಬಾರದು. ಅವರಿಗೆ ಬೆಂಬಲ ಕೂಡ ಇಲ್ಲ. ಸುಮ್ಮನೆ ಇಡೀ ರಾಜ್ಯದಲ್ಲಿ ಈ ಸದನದ ಮೂಲಕ ತಮ್ಮ ಸಂದೇಶ ಕೊಡಬೇಕು ಎಂದು ಇದೆ. ಅದಕ್ಕಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.ಆ ತಪ್ಪು ಸಂದೇಶ ಇಲ್ಲಿಂದ ಹೋಗಬಾರದು. ಏಕೆಂದರೆ ಉತ್ತರ ಕೊಟ್ಟಮೇಲೆ ಇಲ್ಲಿ clarification ಕೇಳಲು ಆಗುವುದಿಲ್ಲ. ಅಥವಾ ತಪ್ಪುತಪ್ಪಾಗಿ ಅವರು

ಹೇಳಿದನ್ನು ಪುನಃ ಇಲ್ಲಿ ತಿದ್ದಲು ಆಗುವುದಿಲ್ಲ. ಆದರಿಂದ ದಯವಿಟ್ಟು ಇದಕ್ಕೆ ಅಂತ್ಯ ಆಡಬೇಕೆಂದು ತಮ್ಮಲ್ಲಿ ಮನವಿ. ದಯವಿಟ್ಟು ತಾವು ಇದನ್ನು ಪರಿಗಣಿಸಬೇಕು.

ಶ್ರೀ ಜೆ.ಸಿ.ಮಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಬಹಳ ಕೆಟ್ಟ ಸ್ಥಿತಿಯಲ್ಲಿ ನಾವು ಇಲ್ಲಿ ಸೇರಿದ್ದೇವೆ. ಚರ್ಚೆಯಾಗಬಾರದು ಎಂದು ಮಾನ್ಯ ಖರ್ಗೆಯವರೇನು ಹೇಳಿದರು, ಚರ್ಚೆ ಆರಂಭ ಮಾಡಿದ ಮೇಲೆ ಅದನ್ನು ಹೇಳಿದ್ದರಿಂದ, ನಾನೂ ಹಾಗೆಯೇ ಹೇಳಬೇಕಾಗುತ್ತದೆ, ನನ್ನ ಮಾತು ಆಡಿದ ಮೇಲೆ ಚರ್ಚೆ ಆಗಬಾರದೇನೋ ಎಂದು. ಮಾನ್ಯ ಯಡಿಯೂರಪ್ಪನವರು ಇಲ್ಲಿ ಮತವನ್ನೇನು ಕೇಳುವಂಥ ಸ್ಥಿತಿ ನಿರ್ಮಾಣವಾಗಿದೆ ಅದು ಏಕೆ ಆಯಿತು, ಹೇಗಾಯಿತು ಎಂದು ಯೋಚನೆ ಮಾಡುವುದು ಅನಿವಾರ್ಯವಾಗಿದೆ. ಯಡಿಯೂರಪ್ಪನವರು ಇಲ್ಲಿ ಮುಖ್ಯಮಂತ್ರಿಯಾಗಿ ಸರ್ಕಾರವನ್ನು ನಡೆಸಿ ಅವರಾಗಿಯೇ ಬಂದು ವಿಶ್ವಾಸ ಮತವನ್ನು ಕೇಳಿದ್ದಿದ್ದರೆ ಬಹುಶಃ ಬಹಳ ವ್ಯಾಪಕವಾದ ಚರ್ಚೆಯನ್ನು ನಾವು ಮಾಡಬಹುದಾಗಿತ್ತು. ಸನ್ಮಾನ್ಯ ರಾಜ್ಯಪಾಲರ ನಿರ್ದೇಶನದಂತೆ ಇವತ್ತು ಅವರು ಅವರಿಗಿರುವ ಶಕ್ತಿಯನ್ನು ಈ ಸದನದ ಮೂಲಕ ನಿರೂಪಿಸಬೇಕಾಗಿದೆ. ಆ ಶಕ್ತಿಯನ್ನು ಅವರೂ ಮತ್ತು ಅವರ ಜೊತೆಯಲ್ಲಿದ್ದ ಜೆ.ಡಿ.ಎಸ್. ಪಕ್ಷ ರಾಜ್ಯಪಾಲರ ಮುಂದೆ ಪ್ರದರ್ಶಿನಿ ನಾವು 129 ಜನ ಒಟ್ಟಿಗೆ ಇದ್ದೇವೆ, ನಮಗೆ ಸರ್ಕಾರ ಮಾಡಲು ಒಂದು ಅವಕಾಶ ಕೂಡಿ ಎಂದು ಕೇಳಿ ಕೊಡುತ್ತಾರೋ ಇಲ್ಲವೋ ಎಂದು ಬಹಳ ರಾಜ್ಯದ ತುಂಬ ಚರ್ಚೆಯಾಗಿ ಅನಂತರ ಇವತ್ತಿನ ಈ ಸ್ಥಿತಿ ಬಂದಿದೆ. ಬೇರೆ ಮಾತನಾಡುವುದಕ್ಕೆ ಮೊದಲು ಒಂದನ್ನು ಸಭೆಯ ಮುಖಾಂತರ ಒಪ್ಪುತ್ತೇನೆ. ಸನ್ಮಾನ್ಯ ರಾಜ್ಯಪಾಲರು ಹಾಗೂ ಕೇಂದ್ರ ಸರ್ಕಾರ ಮತ್ತು ರಾಷ್ಟ್ರಾಧ್ಯಕ್ಷರು ಸಂವಿಧಾನಕ್ಕೆ ಮತ್ತು ಸುಪ್ರಿಂಕೋರ್ಟ್‌ಗೆ ಈ ಹಗರಣದಲ್ಲಿ ಬಹಳ ಗೌರವವನ್ನು ಕೊಟ್ಟಿದ್ದಾರೆ. ಬಹುಶಃ ಎಲ್ಲರಿಗೂ Assembly dissolve ಆಗಿಹೋಯಿತೇನೋ ಎಂದು ಅನ್ನಿಸುತ್ತಿತ್ತು. ಅವತ್ತು ಅವರು dissolve ಮಾಡಲಿಲ್ಲ. ಸುಪ್ರಿಂಕೋರ್ಟ್ ತೀರ್ಮಾನ ಬೊಮ್ಮಾಯಿಯವರ ಪ್ರಕರಣದಲ್ಲಿ ಇತ್ತು ಅದನ್ನು uphold ಮಾಡುವುದಕ್ಕೆ floor of the house ನಲ್ಲೇ ತೀರ್ಮಾನವಾಗಬೇಕು ಅಥವಾ Parliament ಮುಂದೆ ತೀರ್ಮಾನವಾಗಬೇಕು ಎಂಬ ಸ್ಥಿತಿಯನ್ನು ಕೇಂದ್ರ ಸಚಿವ ಸಂಪುಟ ಒಪ್ಪಿ

ಸಂವಿಧಾನಕ್ಕೆ ಬಹಳ ಗೌರವವನ್ನು ಕೊಟ್ಟಿದೆ. ಅದು ಆದ ನಂತರ ಮತ್ತೆ ರಾಜ್ಯಪಾಲರನ್ನು ನಾವು ಸರ್ಕಾರ ಮಾಡುತ್ತೇವೆ ಎಂದು ಒಂದು ಗುಂಪು ಹೋಗಿ ಕೇಳಿದಾಗ ಬಹಳ ಗೌರವಯುತವಾಗಿ ವರ್ತಿಸಿದ್ದಾರೆ. ನಾನು ಆವರಿಗೆ ನನ್ನ ವೈಯಕ್ತಿಕವಾದ ಗೌರವಗಳನ್ನು ಅರ್ಪಿಸುತ್ತೇನೆ. ಈ ಮಧ್ಯೆ ನಾವು ಏನಾಗಿದ್ದೇವೆ ಎಂದು ಚರ್ಚೆ ಮಾಡಬೇಕಾಗುತ್ತದೆ. ನಾವು ಜನಗಳ ಪ್ರತಿನಿಧಿಗಳಾಗಿ ದೊಡ್ಡ ದೇವಾಲಯ ಎಂದು ಜನರೆಲ್ಲಾ ತಿಳಿದುಕೊಂಡಿರುವ ಈ ಸಭೆಯಲ್ಲಿ ಬಂದಿರುವವರು ನಮ್ಮ ಸ್ಥಿತಿಗಳೇನು? ನಮ್ಮ ಸ್ಥಾನ ಏನು? ನಮ್ಮ ಮಾನ ಮರ್ಯಾದೆ ಏನು ಎನ್ನುವಂಥ ಚರ್ಚೆ. ಯಾವ ಸುಪ್ರೀಂಕೋರ್ಟ್ ವಿಧಾನಸಭೆಗೆ ರಕ್ಷಣೆ ಕೊಟ್ಟಿತು ಆ ಸುಪ್ರೀಂಕೋರ್ಟ್ ತೀರ್ಮಾನಕ್ಕೆ ಇವತ್ತು ಇತಶ್ರೀ ಹಾಡುತ್ತಿದ್ದೇವೆ. ನಾಳೆ ಒಂದು ಸರ್ಕಾರ ಇದನ್ನು ನಿದರ್ಶನ ಮಾಡಿಕೊಳ್ಳಬಹುದು. ಏತಕ್ಕೆ ನಾವು consider ಮಾಡಬೇಕು, floor ಮೇಲೆಯೇ ಕರೆಯಿರಿ ಎಂದು ಏಕೆ ಕೇಳಬೇಕು, ಒಬ್ಬ ರಾಷ್ಟ್ರಪತಿ ಮುಂದೆ ಬಂದು ತಲೆ ಎಣಿಕೆ ಮಾಡಿರುವುದು, ಅಫಿಡವಿಟ್ ಹಾಕಿರುವುದಕ್ಕೆ ಮೂರು ಕವಡೆ ಕಿಮ್ಮತ್ತು ಇಲ್ಲ ಎಂದರೆ ಸುಪ್ರಿಂಕೋರ್ಟ್ ಹೇಳಿರುವುದನ್ನು ಏಕೆ ಕೇಳಬೇಕು? At any given point of time, governor can dismiss the Assembly ಎಂದರೆ ನಾವು ಏನಾಗುತ್ತೇವೆ? ಒಂದು ಪಂಚಾಯಿತಿ, ಒಂದು ಸೊಸೈಟಿ dissolve ಆಗಬೇಕಾದರೆ supersede ಆಗಬೇಕಾದರೆ notice ಕೊಟ್ಟು dissolve ಮಾಡತಕ್ಕ ಸ್ಥಾನದಲ್ಲಿ ಇರುವಾಗ, ರಾಜ್ಯದಲ್ಲಿ, ರಾಷ್ಟ್ರದಲ್ಲಿ ವಿಧಾನಸಭೆ ವಿಸರ್ಜನೆ ಆಗಬೇಕಾದರೆ ಯಾರಿಗೂ notice ಇಲ್ಲ, ಯಾವುದೇ ಚರ್ಚೆ ಇಲ್ಲ. ಕೋತಿ ಕೈಗೆ ಗುಲಗಂಜಿ ಸಿಕ್ಕಿದಂತೆ ಎಂದು ನಾವು ಹೇಳುತ್ತೇವೆ. ಏನು ಬೇಕಾದರು ಅಗಬಹುದು. ಅಂಥ ಸ್ಥಿತಿಯಲ್ಲಿ ನಮಗೆ ಒಂದು ಕನಿಷ್ಟ ರಕ್ಷಣೆ ಬೇಕಾಗಿದೆ. ಇವತ್ತು ಬೊಮ್ಮಾಯಿಯವರಿಗೆ ಏನು ಶ್ರದ್ಧಾಂಜಲಿ ಅರ್ಪಿಸಿದೆವು, ಅವರು ಕೋರ್ಟ್‌ಗೆ ಹೋಗಿ ಈ ಶಾಸನ ಸಭೆಗೆ ಗೌರವ ತಂದಿದ್ದರು. ಇಡೀ ರಾಷ್ಟ್ರದಲ್ಲಿ ಕರ್ನಾಟಕದ ಬಗ್ಗೆ ಗೌರವಯುತವಾಗಿ ಮಾತನಾಡುವಂತಹ ಸ್ಥಿತಿ ಇತ್ತು. ಆಯಾರಾಮ್ ಗಯಾ ರಾಮ್ ಸಂಸ್ಕೃತಿ ಕನಿಷ್ಟ ಪಕ್ಷ ಇಂದು ಇಲ್ಲ. ಯಾರು ಏನು ಹೇಳಿದರೋ ಗೊತ್ತಿಲ್ಲ. ಇವರು ತಾಲ್ಲೂಕು ಪಂಚಾಯಿತಿ ಮಂಡಲ ಪಂಚಾಯಿತಿಗೆ ಕಾಯ್ದೆ ಮಾಡಬೇಕಾದವರು? 20, 20

ತಿಂಗಳನ್ನು ಎಲ್ಲೋ ಬರೆದುಕೊಂಡು ಓದಿಕೊಂಡುಬಿಟ್ಟರು. ಇದೂ 20 ತಿಂಗಳೇ ಎಂದು ಅಂದುಕೊಂಡುಬಿಟ್ಟರು. ಶಾಸನ ಸಭೆಗೂ ಅದೇ ಕಾಯ್ದೆ ಅನ್ವಯವಾಗುತ್ತದೆ ಎಂದು ಏನಾದರೂತಿಳಿದುಕೊಂಡು 20, 20 ತಿಂಗಳು ಎಂದು ರಾಜಿ ಆದರೋ ನಮಗೆ ಗೊತ್ತಿಲ್ಲ. ಈಗ ಮಾತನಾಡಿದ ರೀತಿಯಲ್ಲಿ ರಾಜ್ಯದಲ್ಲಿ ಯಾರ ಪರವಾಗಿಯೂ ಯಾರಿಗೂ ಆಡಳಿತ ಮಾಡುವುದಕ್ಕೆ ನಮಗೆ ಜನರು vote ಕೊಟ್ಟಿರಲಿಲ್ಲ. ನಮಗೆಯೇ ನೈತಿಕತೆ ಇದ್ದಿದ್ದರೆ ನಾವು ನಿಜವಾಗಿ ಜನರ ಪ್ರತಿನಿಧಿಗಳು ಬಾರಿ ಸ್ವಾಭಿಮಾನ ಇರುವ ಜನರು ಎಂದು ಇದ್ದರೆ ಅವತ್ತೆ ಸರ್ಕಾರ ರಚನೆ ಆಗಬಾರದಿತ್ತು. ಅವತ್ತು ಆಗಿದ್ದೆ ಒಡಂಬಡಿಕೆ. ಅವರು ಆಗಿದ್ದೆ ಬೇರೆಯವನ ಹೆಂಡತಿಯ ಜೊತೆ ಮದುವೆ. ಇವತ್ತು ಏನು ಚರ್ಚೆ ಇದೆ? ಇವತ್ತು ಏಕೆ ಚರ್ಚೆ ಮಾಡುತ್ತಿದ್ದೀರಿ ನಮಗೆ ಗೊತ್ತಾಗಲಿಲ್ಲ. ಅವತ್ತು ಇವರನ್ನು ಯಾರು ಒದ್ದರೋ ಇವತ್ತು ಅವರನ್ನು ಒದ್ದಿದ್ದಾರೆ. ಅವರು ನರಳುತ್ತಿದ್ದಾರೆ. ಇವರೂ ಒದಿಸಿಕೊಂಡಿದ್ದಾರೆ. ಅವರೂ ಒದಿಸಿಕೊಂಡಿದ್ದಾರೆ. ಒದ್ದವರು scot free ಚರ್ಚೆಗೇ ಬರುತ್ತಿಲ್ಲ. ಯಾವ ದುರಂತದ ಕಾಲದಲ್ಲಿ ನಾವು ಬದುಕಿದ್ದೇವೆ? ನೀವೂ ಒದೆಸಿಕೊಂಡಿದ್ದೀರಿ ಸಾರ್. ಮಾತೇ ಇಲ್ಲ. ಈಗ ಅವರೂ ಒದೆಸಿಕೊಂಡಿದ್ದಾರೆ. ಆದರೆ ಒದ್ದವರನ್ನು ಏನು ಮಾಡುತ್ತಿದ್ದಿರಿ? ಅವತ್ತು ಧರ್ಮಸಿಂಗ್ ಅವರ ಮೇಲೆ ಟೀಕೆ, ಇವತ್ತು ಯಡಿಯೂರಪ್ಪನವರ ಮೇಲೆ ಟೀಕೆ, ಇದು ಸತ್ಯ. ಇಡೀ ಪ್ರಪಂಚದ ಇತಿಹಾಸ ವೀರತ್ವದ ಮೇಲೆ, ಶೂರರ ಮೇಲೆ, ಯಾರಾದರೂ ಪ್ರಾಣ ತ್ಯಾಗ ಮಾಡಿದವರ ಮೇಲೆ ನಿರ್ಮಾಣವಾಗಿದ್ದರೆ ಅದು ಈ ದೇಶದ ದೌರ್ಭಾಗ್ಯ! ಈ ಸಮಾಜದಲ್ಲಿ ಇತಿಹಾಸ ನಿರ್ಮಾಣವಾಗಿರುವುದು ಪಿತೂರಿಗಾರರ ಮೇಲೆಯೇ. ಯಾರು ನಂಬರ್ 1 ಪಿತೂರಿ ಮಾಡುತ್ತಾರೋ, ಅವನೇ Hero. ನಾನು ಮೊನ್ನೆ ಒದುತ್ತಿದ್ದೆ, ತೇಜಸ್ವಿಯವರು ಒಂದು ಕಡೆ ಬರೆಯುತ್ತಾರೆ 'ಯುದ್ಧದಲ್ಲಿ ಮುಂದೆ ಇದ್ದವನು, ನಿಜವಾದ ಶೂರ ಆಗಿದ್ದವನು, ಸತ್ತು ಹೋಗಿರುತ್ತಾನೆ. ಯಾರು ಆ ಯುದ್ಧದಲ್ಲಿ ಹಿಂದೆ ಇರುತ್ತಾನೋ ಅವನು ಯುದ್ಧದಲ್ಲಿ ಗೆದ್ದು ಬಂದ ಮೇಲೆ ಪರಮ ವೀರ ಚಕ್ರ ತೆಗೆದುಕೊಳ್ಳುತ್ತಾನೆ. ಮುಂದೆ ನಿಂತುಕೊಂಡು ಬುಲೆಟ್‌ಗೆ ಆಹುತಿಯಾದವನಿಗೆ ಹೇಗೆ ಪರಮ ವೀರ ಚಕ್ರ ಸಿಗುತ್ತದೆ? ಪರಮ ವೀರ ಚಕ್ರ ತೆಗೆದುಕೊಳ್ಳುವವರು ಯಾರು ಸಾರ್? ಹಿಂದುಗಡೆ ಇರುವವರು. ತಾಜ್‌ಮಹಲ್ construction

ಶುರು ಮಾಡಿದವರ್ಯಾರು, ಅದು ನಮಗೆ ಗೊತ್ತಿಲ್ಲ. ಅದರ ಉದ್ಘಾಟನೆಯಾಗಿರುದಷ್ಟೇ ನಮಗೆ ಗೊತ್ತು. ಈ ಸ್ಥಿತಿ ಏನು ನಿರ್ಮಾಣವಾಗಿದೆ. ಸತ್ಯವಾಗಿ ಅಧ್ಯಕ್ಷರೆ, ಜನಗಳ ಮಧ್ಯೆ ಹೋಗುವಂತಹ ಸ್ಥಿತಿಯಲ್ಲಿ ಯಾವುದೇ ರಾಜಕಾರಿಣಿ ಇವತ್ತು ಇಲ್ಲ. ಹೃದಯ ಬಿಚ್ಚಿ ಮಾತನಾಡಬೇಕೆಂದರೆ, ನಾವೆಲ್ಲಾ ವ್ಯಾಪಾರಸ್ಥರಾಗಿದ್ದೇವೆ. ನಾವೆಲ್ಲಾ ದಂಥೆಗೋಸ್ಕರ, ನಾವೆಲ್ಲಾ ಹಣಕೋಸ್ಕರ ಈ ಸ್ಥಿತಿಯನ್ನು ನರ್ಮಾಣ ಮಾಡಿದ್ದೇವೆ. ಬುದ್ಧಿವಂತರಾಗುವಷ್ಟು ಜನ ಬುದ್ಧಿವಂತರಾಗಿದ್ದಾರೆ. ಏಕೆಂದರೆ ಮಾಧ್ಯಮಗಳು ಇವತ್ತು ಅವರನ್ನು ಸಾಕಷ್ಟು educate ಮಾಡುತ್ತಿವೆ. ಯಾವುದಕ್ಕಾಗಿ ಇವತ್ತು ಈ ಸ್ಥಿತಿ ನಿರ್ಮಾಣವಾಯಿತು? ಆರೇ ದಿವಸಗಳಲ್ಲಿ support ಕೊಡುವುದಿಲ್ಲ ಎನ್ನುವಂತಹ ಸ್ಥಿತಿ ಏಕೆ ನಿರ್ಮಾಣವಾಯಿತು? ಇದೊಂದು ದಂಥೆ. Minesನಲ್ಲಿ ದುಡ್ಡಿದೆ, ಬೆಂಗಳೂರು ಭೂಮಿಯಲ್ಲಿ ದುಡ್ಡಿದೆ. ಆ ದುಡ್ಡು ಯಾರಿಗೆ ಸೇರಬೇಕೆಂದು ಚರ್ಚೆಯಾಗುತ್ತಿದೆ. ತತ್ವಕ್ಕಲ್ಲ. ಫಿಲಾಸಫಿಗಲ್ಲ. ಫಿಲಾಸಫಿಗೆ ಚರ್ಚೆಯಾಗಿದ್ದರೆ ಅವರು ಅವತ್ತೆ ಒಂದಾಗಿ ಬಿಡಬಹುದಾಗಿತ್ತು. ಅವತ್ತೇ ಅವರು ಜಾತಿ ಇಟ್ಟು ಕೊಂಡು ರಾಜಕೀಯ ಮಾಡಿದವರು, ಇನ್ನೊಬ್ಬರು ಜಾತ್ಯತೀತರಾಗಿದ್ದವರು. ಇವತ್ತೇಕೆ ಈ ಚರ್ಚೆ ಬರುತ್ತಿದೆ? ನನ್ನ ತೆವಲೆಲ್ಲಾ ತೀರಿ ಹೋಯಿತು, ನಿಮ್ಮದು ಬಂದಾಗ 'ಇಲ್ಲಾಪ್ಪ ನಾನು ಪತಿವ್ರತೆ'! ಎಲ್ಲಾ ಸೂಳೆಯರೂ ಮುಪ್ಪಾಗಿ ಗರತಿ ಆಗಬೇಕಲ್ಲವೇ? ಅವರು ಗರತಿಯರು ಆಗಲೇಬೇಕು. ಯಾರ್ಯಾರು ಯಾವ್ಯಾವಾಗ ಗರತಿಯರು ಆಗುತ್ತಾರೋ ಎಂಬುದು ನಮಗೆ ಅರ್ಥವಾಗಬೇಕು. ಹೆಣ್ಣು ಮಕ್ಕಳು ದಯವಿಟ್ಟು ನನ್ನನ್ನು ಕ್ಷಮಿಸಬೇಕು. ನಾನು ಹಳ್ಳಿಯಲ್ಲಿ ಬದುಕಿದವನಾಗಿ ಈ ಮಾತನ್ನು ಆಡುತ್ತಿದ್ದೇನೆ. ಸಾರ್, ನಾವು ಇವತ್ತು ಎಲ್ಲಿಗೆ ಹೋಗುತ್ತಿದ್ದೇವೆ? ನಾವು ಸ್ವಲ್ಪ ಸತ್ಯವನ್ನು ಹೃದಯದ ಮಾತಿನಲ್ಲಿ ಆಡುವುದಕ್ಕೆ ಆಗುವುದಿಲ್ಲ ಎನ್ನುವುದಾದರೆ, ಶಾಸಕರಾಗಬೇಕೇ? ನಮ್ಮ ಎದುರಿಗೆ ನಂತುಕೊಂಡು ನಾನು ಏನನ್ನು ಪ್ರಮಾಣ ಮಾಡಿದ್ದೇವೆ? ಇವತ್ತು ಈ ಸ್ಥಿತಿಗೆ ರಾಜ್ಯ ಏನು ಹೋಗುತ್ತಿದೆ, ನಾಳೆ ಈ ರಾಜ್ಯದ ಭವಿಷ್ಯವೇನು? ಯಾರಾದರೂ ನಾವು ಮಾನ ಮರ್ಯಾದೆ ಇಟ್ಟುಕೊಂಡು ಜನರಲ್ಲಿ ಓಟು ಕೇಳುವುದಕ್ಕಾಗುತ್ತದೆಯೇ? ಬರಿ ದುಡ್ಡಿನಲ್ಲಿ election ಗೆಲ್ಲುವುದಕ್ಕಾಗುತ್ತದೆಯೇ? ದುಡ್ಡಿನ ಝೇಂಕಾರ, ಅಹಂಕಾರ ಈ ರಾಜ್ಯದಲ್ಲಿ ಎಷ್ಟು ದಿವಸ ಇರುತ್ತದೆ? ಎಷ್ಟು ಜನ ದುಡ್ಡು ಇಟ್ಟುಕೊಂಡೇ ರಾಜಕೀಯ

ಮಾಡಿದ್ದಾರೆ? ದೇವರಾಜ್ ಅರಸ್‌ರವರ ಬಗ್ಗೆ ಬಗ್ಗೆ ನಾವು ಹೇಳುತ್ತೇವೆ. ಆದರೆ ಮಾನ್ಯ ದೇವರಾಜ್ ಅರಸ್‌ರವರನ್ನೂ ಸಹ ಪಿತೂರಿ ಮಾಡಿ ಆಚೆಗೆ ಹಾಕಲಿಲ್ಲವೇ? ವೀರೇಂದ್ರ ಪಾಟೀಲ್‌ರವರ ಹೆಸರನ್ನೂ ಸಹ ಹೇಳುತ್ತೇವೆ. ಆದರೆ ಮಾನ್ಯ ವೀರೇಂದ್ರ ಪಾಟೀಲ್‌ರವರನ್ನು ಸಹ ಪಿತೂರಿ ಮಾಡಿ ಆಚೆಗೆ ಹಾಕಲಿಲ್ಲವೇ? ಈ ರಾಜ್ಯದಲ್ಲಿ ಎಷ್ಟೋಂದು ಜನ ಧೀಮಂತ ನಾಯಕರಿದ್ದರು, ಯಾರಿಗೆ ನಾವು ಆ ರೀತಿ ಮಾಡಿಲ್ಲ ಹೇಳಿ. ಇಡೀ ರಾಜ್ಯದಿಂದ ರಾಷ್ಟ್ರಮಟ್ಟಕ್ಕೆ ಒಬ್ಬ ವ್ಯಕ್ತಿಯನ್ನು ಬೆಳಸಲಿಕ್ಕೆ ನಮಗೆ ಎಲ್ಲಿಯಾದರೂ ಸಾಮರ್ಥ್ಯ ಬಂತೇ? ಯಾರಾದರೂ ಒಬ್ಬರು "ನಾನು ನೀರಿಗೋಸ್ಕರ ಹೋರಾಡಿದೆ, ನಾನು ಗಡಿಗೋಸ್ಕರ ಹೋರಾಡಿದೆ, ನಾನು ಈ ಭಾಷೆಯ ಶಾಸ್ತ್ರೀಯ ಸ್ಥಾನಮಾನ ಕೊಡಿಸಲಿಕ್ಕೆ ಹೋರಾಡಿದೆ, ನಾನು ಯವುದೋ ಕ್ಷೇತ್ರದಲ್ಲಿ ವಿಫಲನಾದೆ" ಎಂದು ಇವತ್ತು ವೀರರಾಗಿ ಸೋಲೊಪ್ಪಿಕೊಂಡರಾದರೂ ಮನೆಗೆ ಹೋಗುತ್ತಿದ್ದೇವೆಯೇ? ಇಲ್ಲ. ಅಧಿಕಾರ, ಹಣ, ಅಂತಸ್ತು, ಯಾರ costನಲ್ಲಿ? At whose cost we are enjoying all this? ಯಾರಿಗೋಸ್ಕರ ಈ ದಂಧೆಗಳನ್ನು ಮಾಡುತ್ತಿದ್ದೀರಿ? ಯಾರಿಗೋಸ್ಕರ ಕರ್ನಾಟಕವನ್ನು ಲೂಟಿ ಮಾಡುತ್ತಿದ್ದೀರಿ? ಯಾರಿಗೋಸ್ಕರ ಬೆಂಗಳೂರನ್ನು ಲೂಟಿ ಮಾಡುತ್ತಿದ್ದೀರಿ ಎಂಬುದನ್ನು ನಮಗೆ ಹೇಳಿ. ಆಮೇಲೆ ನಿಮ್ಮ ಮೇಲೆ ವಿಶ್ವಾಸದ ಪ್ರಶ್ನೆ ಬರುತ್ತದೆ. ಎರಡು ಪಕ್ಷದವರನ್ನು ಸೇರಿಸಿ ನಾನು ಮತನಾಡುತ್ತಿದ್ದೇನೆ. ಸಾರ್, ಇಡೀ ಬೆಂಗಳೂರು ಮತ್ತು ಇಡೀ ಕರ್ನಾಟಕ ದಿವಾಳಿಯಾಗಿದೆ. Mines ಹೆಸರಿನಲ್ಲಿ ಗ್ರಾಮೀಣ ಪ್ರದೇಶ ದಿವಾಳಿಯಾಗಿದೆ. ಭೂಮಿ ಹೆಸರಿನಲ್ಲಿ ಬೆಂಗಳೂರು ದಿವಾಳಿಯಾಗಿದೆ. ಯಾರು ಇವತ್ತು ಸರ್ಕಾರವನ್ನು ನಡೆಸುತ್ತಿದ್ದಾರೆ? ದುಡ್ಡಿರುವವರು ಸಾರ್. ಇವತ್ತು ಸರ್ಕಾರ ನಡೆಯುತ್ತಿರುವುದು ಇವರ್‍ಯಾರಿಂದಲೂ ಅಲ್ಲ, ನಮ್ಮಿಂದಲೂ ಅಲ್ಲ. ದುಡ್ಡಿರುವವರಿಂದ. ಎರಡನೆಯದು ಜಾತಿ ಇರುವವರಿಂದ. ಮೂರನೆಯದು, ಎಲ್ಲೋ ಕುಳಿತುಕೊಂಡು ಆಶೀರ್ವಾದ ಮಾಡುವವರಿಂದ. ನಾವೆಲ್ಲ ಯಾಕೆ ಈ ಸಭೆಯಲ್ಲಿ ಇರಬೇಕು? ಶಾಸನ ಸಭೆ ಸದಸ್ಯರಿಗೆ ಯಾರಿಗಾದರೂ ಸರ್ಕಾರ ಮಾಡಲಿಕ್ಕೆ, ಸರ್ಕಾರ ಇಳಿಸುವುದಕ್ಕೆ ಸಾಮರ್ಥ್ಯ ಇದೆಯೇ? ಹೃದಯ ತಟ್ಟಿಕೊಳ್ಳಬೇಕಲ್ಲ! ಇವತ್ತು ಒಂದು ಸರ್ಕಾರದ ಮೇಲೆ ಅವಿಶ್ವಾಸ ಬರುತ್ತಿದೆ ಎಂದರೆ, ಇಲ್ಲಿ honest ಆಗಿ ಇರುವವರಿಗೆ, ಅವತ್ತು

ಅಲ್ಲಿ ಕಾಗದ ಕೊಟ್ಟವರಿಗೆ ಗೌರವ ತರುತ್ತದೆಯೇ? ನಾನು ಪ್ರಶ್ನೆ ಕೇಳುತ್ತೇನೆ. What made you behave like this ? ಎಂದು ನಾಳೆ Governer ಕರೆಸಿ ಕೇಳುತ್ತಾರೆ. ಮಾನ್ಯ ಯಡಿಯೂರಪ್ಪನವರಿಗೆ ನೀವು ಯಾವುದೇ ಕೆಲಸ ಮಾಡಲಿಕ್ಕೆ ಬಿಟ್ಟಿಲ್ಲ. ಮಾನ್ಯ ಯಡಿಯೂರಪ್ಪನವರಿಗೆ ನೀವು ಈ ಕೆಲಸ ಮಾಡಕೂಡದು ಎಂದು ನೀವು ಹೇಳಿದ್ದೀರಿ. ಏಳೇ ದಿವಸದಲ್ಲಿ ಅವರ ಮೇಲೆ ಅವಿಶ್ವಾಸ ಬರಲಿಕ್ಕೆ ಕಾರಣವೇನು ಎಂದು ರಾಜ್ಯಪಾಲರಾಗಲಿ, ರಾಷ್ಟ್ರಪತಿಗಳಾಗಲಿ ಕೇಳಿದರೆ, ನಮ್ಮ ಸ್ಥಿತಿಯೇನು? What is our answer? What is the answer of our Hon'ble Members? They have deposed before the Governer. They had given written affidavit before the Governer. ಹಾಗಾದರೆ ನಾಳೆ ಗೌರ್ನರ್‌ಗಳು ಯಾರನ್ನಾದರೂ ಒಬ್ಬ ಶಾಸಕರನ್ನು ನಂಬಬಹುದೆ? ನಮ್ಮ ಮಾತಿಗೇನಾದರೂ ಗೌರವದಿಂದ ವರ್ತಿಸಬಹುದೇ? ಈ ಸ್ಥಿತಿ ಏತಕ್ಕಾಗಿ ಬಂತು ಎಂಬುದನ್ನು ಹೇಳಬೇಕು. ನಾನು ಮಾನ್ಯ ಯಡಿಯೂರಪ್ಪನವರಿಗೆ ಒಂದು ಮನವಿಯನ್ನು ಮಾಡುತ್ತೇನೆ. ತಮಗೆ Support ಇಲ್ಲವೆಂದು ನಿಮಗೆ ಗೊತ್ತಾದಾಗ, ಮಾನ್ಯ ಖರ್ಗೆಯವರು ಹೇಳಿದಂತೆ, ತಾವು ನಿರ್ದಾಕ್ಷಿಣ್ಯವಾಗಿ ರಾಜೀನಾಮೆ ಕೊಟ್ಟು ಹೋಗಬೇಕಾಗಿತ್ತು. ನೀವು ಬಸವಣ್ಣನವರನ್ನು ಒಪ್ಪಿಕೊಳ್ಳುವವರಾದರೆ, ಬಸವಣ್ಣನವರ ಮೊದಲನೇ ಪಾಠವೇ ಸ್ವಾಭಿಮಾನ. ನೀವು ವೀರಶೈವ ಧರ್ಮವನ್ನು ಒಪ್ಪುವುದಾದರೆ, ಸ್ವಾಭಿಮಾನಕ್ಕೆ ಧಕ್ಕೆ ಆಗುವ ಕಡೆ ಒಂದು ಕ್ಷಣ ಕೂಡ ಇರಕೂಡದು. ಬೇಕಾದರೆ ತಿರುಪೆ ಎತ್ತಿ, ಆದರೆ ಇನ್ನೊಬ್ಬರ ಹಂಗಿನಲ್ಲಿ ಬದುಕಬಾರದು. ಅವರು ಹೇಳಿದ್ದು ಸರಿ. ಇನ್ನೊಬ್ಬರ ಹಂಗಿನಲ್ಲಿ ಬದುಕುವುದಕ್ಕಾಗಿ ಬಸವಣ್ಣನವರ ಹೆಸರನ್ನು ನಮ್ಮೆಲ್ಲರ ಎದುರಿಗೆ ನೀವು ಹೇಳುತ್ತೀರಾ? Mouಗೆ sign ಮಾಡುವುದಕ್ಕೋಸ್ಕರ ನೀವು ಬಸವಣ್ಣನವರನ್ನು ಬಳಸಿಕೊಳ್ಳುತ್ತೀರಾ? ಇನ್ನೊಬ್ಬರ ಒಡನಾಟ ಇಟ್ಟುಕೊಳ್ಳಲಿಕ್ಕೆ, ಒಡಂಬಡಿಕೆಗಳನ್ನು ಮಾಡಿಕೊಳ್ಳಲಿಕ್ಕೆ, ರಾಜ್ಯವನ್ನು ದಗಾಕೋರರಿಗೆ ಮಾರಿಕೊಳ್ಳಲಿಕ್ಕೆ ನೀವು ಬಸವಣ್ಣನವರ ಹೆಸರನ್ನು ಬಳಸಿಕೊಳ್ಳುತ್ತಿದ್ದೀರಾ? ಏತಕ್ಕೋಸ್ಕರ ನೀವು ಬಸವಣ್ಣನವರ ಹೆಸರನ್ನು ಬಳಸುತ್ತಿದ್ದೀರಿ? ಬಸವಣ್ಣ ಒಂದು ಜಾತಿಗೆ ಸೇರಿದವರಲ್ಲ. ಬಸವಣ್ಣ ಸಮಾಜವಾದವನ್ನು ಹೇಳಿದವನು. ಬಸವಣ್ಣ ಸಮಾನತೆಯನ್ನು ಹೇಳಿದವನು. ಆಸ್ಥಿತಿಯನ್ನು ನಿರ್ಮಾಣ ಮಾಡಲಿಕ್ಕೆ ನಿಮಗೆ ಆಗದಿದ್ದರೆ

ಕೈ ಮುಗಿದು ಕೇಳಿಕೊಳ್ಳುತ್ತೇನೆ, ನೀವು ಇನ್ನ್ಯಾರಾದರೊಬ್ಬರ ಹೆಸರನ್ನು ಹೇಳಿಕೊಳ್ಳಿ. ಬಸವಣ್ಣನವರನ್ನು ಪದೇ ಪದೇ ಈ ಸಭೆಗೆ ತರಬೇಡಿ. ವಚನಗಳನೆಲ್ಲಾ ನಾವು ಓದಿಕೊಂಡಿದ್ದೇವೆ. ಇವತ್ತು ನಾವ್ಯಾರೂ ಬಸವಣ್ಣನವರ ವಚನ, ಅಲ್ಲಮ ಪ್ರಭು ದೇವರ ವಚನ, ಅಕ್ಕಮಹಾದೇವಿ ವಚನ ಓದದೇ ಇಲ್ಲಿಗೆ ಬಂದಿಲ್ಲ. ಪಾಂಡಿತ್ಯ ಪ್ರದರ್ಶನ ಮಾಡುವ ಅಗತ್ಯವಿಲ್ಲ. ನಿಮ್ಮದು ಹೇಳಿ, ನಿಮ್ಮ ಸ್ಥಿತಿಗಳ ಬಗ್ಗೆ ಹೇಳಿ. What made you to behave like this? ನೀವು ಉಗಿದು ಆಚೆಗೆ ಹೋದಿರಿ, ಮತ್ತೆ ಒಳಗೆ ಬಂದಿರಿ, ಮತ್ತೆ Governer ಮುಂದೆ ಹೋದಿರಿ, ಮತ್ತೆ ಬಂದು ಬೀದಿಗೆ ಇಳಿದಿರಿ, ಮತ್ತೆ ದೆಹಲಿಗೆ ಹೋದಿರಿ, ಇಷ್ಟೆಲ್ಲಾ ಇಟ್ಟುಕೊಂಡು ಮತ್ತೆ ಏಕೆ ವಿಭಾಗ ಆಗಿದ್ದೀರಿ ಎಂಬುದನ್ನು ನಮಗೆ ಹೇಳಬೇಕಲ್ಲವೆ? ವ್ಯಾಪಾರವೇ? ವ್ಯವಹಾರನಾ? ಹಂಚಿಕೆಯೇ ಏನು ಎಂಬುದನ್ನು ಹೇಳಿಬಿಡಿ. ಅದನ್ನು ಹೇಳುವುದಕ್ಕಾಗಿಯೇ ಈ ಸಭೆಯಲ್ಲಿ ನಿಮಗೆ ವಿಶ್ವಾಸವಿಲ್ಲ ಎಂದು ಗೊತ್ತಿದ್ದೂ ಕೂಡ Resoloution move ಮಾಡಿದಿರಿ. ಅದನ್ನಾದರೂ ನೀವು ಏನು ಎಂಬುದನ್ನು ಹೇಳಿಬಿಡಿ. ಕನಿಷ್ಠ ಸೌಜನ್ಯ ಎಂದರೆ ಈ ರಾಜ್ಯದ ಜನತೆ ಗೆ ಅರ್ಥವಾಗಬೇಕು, ಯಾವ ಕಾರಣಕ್ಕಾಗಿ ನಿಮಗೆ ಬೆಂಬಲ ಕೊಡುತ್ತೇವೆಂದು ಹೇಳಿದವರು ಇವತ್ತು ಬೆಳಿಗ್ಗೆ ನಾವು ಬೆಂಬಲ ಕೊಡುವುದಿಲ್ಲ ಎಂದು ಹೇಳಿದ್ದಾರೆ ಎಂಬುದನ್ನು ನೀವು ಹೇಳಬೇಕು. ಯಾವ ಕಾರಣಕ್ಕಾಗಿ Governor ಮುಂದೆ ಹೋದವರು ಇವತ್ತು ನಮಗೆ ಅವಕಾಶ ಕೊಡದೇ ಮತ್ತೆ ಬೆಂಬಲ ಹಿಂತೆಗೆದುಕೊಳ್ಳುತ್ತಿದ್ದಾರೆ ಎಂಬುದು ನಮಗೆ ಗೊತ್ತಾಗಬೇಕು. ನಮಗೆ ಸ್ಪಷ್ಟವಾಗಿ ಗೊತ್ತಿರುವುದು, ಇಲ್ಲಿ ಕರ್ನಾಟಕದಲ್ಲಿ ಲೂಟಿಯೇ ಪ್ರಾತಿನಿಧ್ಯ, ಲೂಟಿಯೇ ಪ್ರಮುಖವಾಗಿದೆ. ಮುಂದಿನ ಚುನಾವಣೆಯಲ್ಲಿ ಇಲ್ಲಿರುವವರಲ್ಲಿ ಬಹುಶಃ 5–10% ನವರು ಬರುತ್ತೇವೇಯೋ, ಇಲ್ಲವೋ ಎನ್ನುವುದು ಗ್ಯಾರಂಟಿ ಇಲ್ಲ. ಯಾರ ಹತ್ತಿರ granite ಇದೆ? ಯಾರ ಹತ್ತಿರ Mines ಇದೆ? ಯಾರ ಹತ್ತಿರ ಬೆಂಗಳೂರಿನಲ್ಲಿ ಹೆಚ್ಚುವರಿ land ಅನ್ನು ಮಾರಲಿಕ್ಕೆ ಇದೆ? ಯಾರು ಹೆಚ್ಚು de-notification ಮಾಡಿಸಲಿಕ್ಕೆ ಸಮರ್ಥರಿದ್ದರು? ಅವರು ಮಾತ್ರ ಇದರೊಳಗೆ ಬರಬಹುದು. ರೈತರು, ಹಳ್ಳಿಗಾಡಿನ ಜನ ಬರಲ್ಲಿಕ್ಕೆ ಸಾಧ್ಯವೇ ಇಲ್ಲದಂತಹ ಸ್ಥಿತಿ ಕರ್ನಾಟಕದಲ್ಲಿ ನಿರ್ಮಾಣ ಆಗಿಬಿಟ್ಟಿದೆ. 50 ರೂಪಾಯಿ ನೋಟು ಅಥವಾ

100 ರೂಪಾಯಿ ನೋಟು ಇವತ್ತು ಚುನಾವಣೆಗಳಲ್ಲಿ ಕೆಲಸ ಮಾಡುತ್ತಿಲ್ಲ. 500 ರೂಪಾಯಿ ಅಥವಾ 1000 ರೂಪಾಯಿ ನೋಟುಗಳು, ಮೂರು ಜನರಿದ್ದರೆ ಇಷ್ಟು, ನಾಲ್ಕು ಜನರಿದ್ದರೆ ಇಷ್ಟು, ಐದು ಜನರಿದ್ದರೆ ಇಷ್ಟು ಎಂದು ಪ್ರತಿ ಮನೆಗೆ ಕೊಟ್ಟರೆ ಮಾತ್ರ ಇವತ್ತು ಎಲೆಕ್ಷನ್ ಗೆಲ್ಲಬಹುದು. ಈ ಶಕ್ತಿಯನ್ನು ಒಂದು ಕಡೆ ನಾವು ಬೆಳೆಸಿ, ಏನು ಬೇಕಾದರೂ ಸಹ ಮಾಡಬಹುದು ಎನ್ನುವ ಸ್ಥಿತಿ ಇವತ್ತು ರಾಜ್ಯದಲ್ಲಿ ನಿರ್ಮಾಣವಾಗಿದೆ. ಇದನ್ನು ದಯಮಾಡಿ ಮೊದಲು ತಪ್ಪಿಸಿ. ಶಾಸನ ಸಭೆ ಎಲ್ಲಾ ಆಯಾಮಗಳಿಂದ ಜನ ಬಂದು ಮಾತನಾಡಲಿಕ್ಕೆ ಇರಬೇಕಾದ್ದು, ದಂಧೆಮಾಡುವವರಿಗಲ್ಲ. ಯಾರೋ ರಾಜಕಾರಿಣಿ ಹಿಂದೆ ಓಡಾಡಿಕೊಂಡು ದಂಧೆ ಮಾಡಿಕೊಂಡು ಇದ್ದವರು ಇಲ್ಲಿಗೆ ಬಂದು, ನಿಮ್ಮ ತಲೆ ಮೇಲೆ ಬಂದು ಕುಳಿತುಕೊಳ್ಳುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಿ ಆಚೆಗೆ ಹೋಗುತ್ತಿದ್ದೀರಿ ಇವತ್ತು. ದಯಮಾಡಿ ಮಾನ್ಯ ಯಡಿಯೂರಪ್ಪನವರೆ, ಅಧಿಕಾರ ಶಾಶ್ವತವಲ್ಲ. ಇಂಥವಕ್ಕೆಲ್ಲಾ ರೋಸಿ, ಅಧಿಕಾರ ಮಾಡುವುದರಲ್ಲಿ ಅರ್ಥವಿಲ್ಲ. ಯಜಮಾನಿಕೆ ನೀನು ಮಾಡು ಬೀಗದ ಕೀ ನನ್ನ ಕೈಯ್ಯಲ್ಲಿ ಇರಲಿ ಎನ್ನುವುದು ಯಜಮಾನಿಕೆತನವೇ? ಅದು ಗುಲಾಮಗಿರಿ. ಗುಲಾಮಗಿರಿ ಮಾಡಲಿಕ್ಕೆ ಇಷ್ಟು ವರ್ಷಗಳ ಕಾಲ ಹೋರಾಟ ಮಾಡಬೇಕಾಗಿತ್ತೇ? ಗುಲಾಮಗಿರಿ ಮಾಡಲಿಕ್ಕೆ ಮುಖ್ಯಮಂತ್ರಿ ಎಂದು ಅನಿಸಿಕೊಳ್ಳಬೇಕಿತ್ತೇ? ಏತಕ್ಕೋಸ್ಕರ ನೀವು ಇವತ್ತು ವಿಶ್ವಾಸ ಮತವನ್ನು ಕೇಳುತ್ತಿದ್ದೀರಿ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ನಿಜವಾಗಿ ನೀವು ಆಚೆ ಹೋಗಿದ್ದ ದಿವಸ ನಾವೆಲ್ಲ ಖುಷಿ ಪಟ್ಟಿದ್ದೆವು. ಚುನಾವಣೆ ಆಗಿ ಬಿಡಲಿ, ಒಂದು ಇತ್ಯರ್ಥವಾಗಿ ಬಿಡಲಿ, ಇದು ಎಲ್ಲಿಗೆ ಹೋಗುತ್ತೋ ಹೋಗಲಿ, ಜನಕ್ಕೂ ಈ ರಾಜ್ಯದ ಸ್ಥಿತಿ ಏನಾಗಿದೆ ಎಂದು ಅರ್ಥವಾಗಲಿ ಎಂದುಕೊಂಡಿದ್ದೆವು. ನೀವು ವಾಪಸ್ ಬರಬೇಕಾದರೆ ನಿಮ್ಮ ಸ್ವಾಭಿಮಾನವನ್ನು ಏಕೆ ಅಡ ಇಟ್ಟು ಬಂದಿರಿ? ತಿರುಗಿ ಏಕೆ ನೀವು ಇಲ್ಲಿ ವಿಶ್ವಾಸ ಮತವನ್ನು ಕೇಳುತ್ತಿದ್ದೀರಿ? ಅವತ್ತು ತಾವು ತಮ್ಮ ಸ್ವಾಭಿಮಾನವನ್ನು ಅಡ ಇಟ್ಟುಬಿಟ್ಟರಿ ತಿರುಗಿ ನೀವು ಸ್ವಾಭಿಮಾನದ ಬಗ್ಗೆ ಮಾತನಾಡುವುದರಲ್ಲಿ ಅರ್ಥವಿಲ್ಲ. ಅವತ್ತು ನಿಮಗೆ ಗೊತ್ತಿತ್ತು. ಮಾನ್ಯ ಖರ್ಗೆಯವರು ಹೇಳಿದ ಹಾಗೆ, ಎಲ್ಲಾ ಬಯಲಾಗಿ ಬಿಟ್ಟಿತ್ತು, ನಿಮ್ಮದೇನು? ಅವರದೇನು?ನೀವು ಹೇಳಿದ್ದೇನು? ಅವರು ಹೇಳಿದ್ದೇನು? ಮತ್ತೆ ಹೇಗೆ

ನೀವು ಅವರ ವಿಶ್ವಾಸ ಬೆಳೆಸಿದಿರಿ? ಬೀದಿಯಲ್ಲಿ ಜಗಳವಾಡುವುದು, ಮನೆಯಲ್ಲಿ ಒಂದಾಗುವುದು, ಬೀದಿಯಲ್ಲಿ ಬೈದಾಡುವುದು, ಆಮೇಲೆ ಸರ್ಕಾರ ಮಾಡುತ್ತೇವೆ ಎನ್ನುವುದು, ಏನಿದು? ನೀವು ಹೋದ ಅವಧಿಯಲ್ಲಿ ಏನು ಸರ್ಕಾರ ನಡೆಸಿದಿರಿ,ಅವತ್ತೆ ನಿಮ್ಮಲ್ಲಿ ಒಡಕಿತ್ತು. ಅವತ್ತೆ ನೀವು ಒಂದು ಗುಂಪಾಗಿ ವರ್ತಿಸಲಿಲ್ಲ. ಅವತ್ತೆ ನೀವು ಸರ್ಕಾರವಾಗಿ ವರ್ತಿಸಲಿಲ್ಲ. ಅವತ್ತೇ ನೀವು ಯಾವುದೇ ಚುನಾವಣೆಯಲ್ಲಿ coalition ಮಾಡಿಕೊಂಡು candidate ಹಾಕುವುದಕ್ಕೆ ಸಮರ್ಥರಾಗಿರಲಿಲ್ಲ. ಅವತ್ತೇ ನಾವೊಂದು 4–5 ಜನ "ಎಲ್ಲರಗೂ 25 ಸಾವಿರ ರೂಪಾಯಿಗಳನ್ನು ಸಾಲವನ್ನು ವಜಾಮಾಡಿ' ಎಂದು ಇಲ್ಲಿ ನಿಂತುಕೊಂಡು ಬೇಡಿಕೊಂಡೆವು. ನೀವು ಅದಕ್ಕೆ ಒಪ್ಪಲಿಲ್ಲ. ಆದರೆ ಅದು ಆಗುತ್ತದೆಂದು ನಮಗೆ ಗೊತ್ತಿತ್ತು. ಅದು ಆಮೇಲೆ ಆಯಿತು. ಅವತ್ತೇ ನೀವು ಹಣಕಾಸಿನ ಸಚಿವರಾಗಿರಲಿಲ್ಲ. ಅವತ್ತು ನಿಮ್ಮನ್ನು ನಾವು ಒಪ್ಪಿಕೊಳ್ಳಿ ಎಲ್ಲರಿಗೂ ಕೂಡಿ ಎಂದು ಬೇಡಿದೆವು, ಕಾಡಿದೆವು, ಒಪ್ಪವುದಿಲ್ಲವೆಂದಿರಿ, ಆಗಲಿಲ್ಲವೇ? ಇಲ್ಲಿ ಏನೂ ನಿಮ್ಮ ಇಚ್ಛೆಯಂತೆ ನಡೆಯಿತೇ? ಅವತ್ತೇ ತಾವು ಈ ಒಡಕನ್ನು ಗುರುತಿಸಬೇಕಾಗಿತ್ತು. ಎರಡನೆಯದಾಗಿ ನಾವು ರಾಜ್ಯದಲ್ಲಿ ಬಹುಸಂಖ್ಯೆಯಲ್ಲಿ ಗೆದಿದ್ದೇವು, ರಾಜ್ಯದಲ್ಲಿ ನಮ್ಮನ್ನು ಬಹುಸಂಖ್ಯೆಯಲ್ಲಿ ಗೆಲ್ಲಿಸಿದಾಗ ನಿಮಗೆ ನಿಜವಾದ ಕನ್ಸರ್ನ್ ಇದ್ದಿದ್ದರೆ, ಅವತ್ತೆ ನೀವು, ಮೊದಲನೆ ಅವಧಿ ನಮಗೆ ಕೊಟ್ಟರೆ ಬನ್ನಿ ಇಲ್ಲದಿದ್ದರೆ ಅಗತ್ಯವಿಲ್ಲವೆಂದು ಕಂಡಿಷನ್ ಹಾಕಬೇಕಾಗಿತ್ತು. ಯಾರೋ ಮೇಲೆ ಪಿತೂರಿ ಮಾಡಿದವರನ್ನು ನೀವು ಒಪ್ಪಿಕೊಂಡರೆ, ನಿಮ್ಮ ಮೇಲೆ ಪಿತೂರಿ ಮಾಡಿದವರನ್ನು ಅವರು ನಾಳೆ ಒಪ್ಪಿಕೊಳ್ಳುವುದಿಲ್ಲವೇ? Mutual Sir, ಅವರಿಗೆ ಮೋಸ ಮಾಡಿದವರು ನಮಗೂ ಮೋಸ ಮಾಡುತ್ತಾರೆನ್ನುವ ಸಾಮಾನ್ಯ ಪರಿಜ್ಞಾನ ಇರಬೇಕಾಗಿತ್ತೇ? ಏನು ಮಾಡಿದ್ದಾರೆಂದು ಒಬ್ಬ ಮನುಷ್ಯ ಕಣ್ಣಿಗೆ ಕಾಣುತ್ತಿದ್ದಾನೆ, ಆಗಿದ್ದು ಆಯಿತು ನಾನಿದ್ದೇನೆ ಬಾ ಎಂದರೆ ಅನುಭವಿಸಿ. ಇವತ್ತು ಅನುಭವಿಸಬೇಕು, ಅವತ್ತು ಧರ್ಮಸಿಂಗ್ ಅವರು ಈ ಸಭೆಯಿಂದ ಹೋಗಬೇಕಾದರೆ ಯಾತನೆ ಪಟ್ಟು 4 ಗಂಟೆಯಾಗಲಿ, 4 ಗಂಟೆಯಾಗಲಿ ಎಂದು ಹೋದರು. ಇವತ್ತು ಅದೇ 4 ಗಂಟೆಯಲ್ಲಿ ಯಡಿಯೂರಪ್ಪನವರೆ ನೀವು ಕುಳಿತಿದ್ದಿರಿ. ಒಬ್ಬ ಮನುಷ್ಯ ನನಗೆ ಒದೆಯುತ್ತೇನೆಂದರೆ ನಿಮಗೂ ಒದೆಯುತ್ತಾನೆನ್ನುವ ಸಂಸ್ಕೃತಿ ಅವನಿಗಿದೆ

ಎನ್ನುವುದನ್ನು ನೀವು ತಿಳಿದುಕೊಳ್ಳಬೇಕಾಗಿತ್ತು. ಏಕೆ ನೀವು ಈ ರೀತಿ ಕಂಡವರ ಕೂಸಾದಿರೆಂಬುದು ನಮಗೆ ಅರ್ಥವಾಗುತ್ತಿಲ್ಲ, ಇದು ಯಾವ ಅಧಿಕಾರವಿದು? ಜನ ನಮಗೆ ಅಧಿಕಾರ ಕೊಟ್ಟಿಲ್ಲ, ಬೇಡ ಬಿಡಿ ಇನ್ನೊಂದು ಸಾರಿ ಬರುವುದು. ಏನು ಅಷ್ಟು ಸ್ಪೀಡ್ ಆಗಿ ಹೋಗುವುದು, ಅಯ್ಯೋ, ಅಯ್ಯೋ, ವೈಷ್ಣವದೇವಿ ನಮಗೆ ಅಧಿಕಾರ ಕೊಡಿಸುತ್ತಾರೆ, ಕರ್ನಾಟಕದ ದೇವರುಗಳೆಲ್ಲಾ ಮುಗಿದು ಹೋಯಿತು, ಕಾಶ್ಮೀರ್‌ಗೆ ಹೋಗುತ್ತಿರಿ, ನಮ್ಮನ್ಯಾರೂ ಮಾತನಾಡಿಸುತ್ತಿರಲಿಲ್ಲ, ಒಂದು ಓಟ್ ಹಾಕೋಣವೆಂದು ಬಹಳ ಆಸೆಯಿಂದ ಇದ್ದೆ, ಇಲ್ಲಪ್ಪ ನಾನು ಯಡಿಯೂರಪ್ಪನವರಿಗೆ ನನ್ನ ಓಟ್ ಹಾಕುವುದೆಂದು ನನ್ನ ಹಿಂದೆ ಇರುವವರಿಗೆಲ್ಲಾ ಹೇಳಿದ್ದೆ. ಇವತ್ತಿನವರೆಗೆ ನಮ್ಮನ್ನು ಅವರು ಕೇಳಲೇ ಇಲ್ಲ. ಒಳಗೆ ಬಂದ ಮೇಲೆ ಈಗ ನಮ್ಮನ್ನು ಅವರು ಕೇಳುತ್ತಿರುವುದು. ನಾವು ಹಾಕುತ್ತೇವೆ ಅದು ಬೇರೆ, ಅವರು ನಮ್ಮನ್ನು ಕೇಳೇ ಇಲ್ಲ, ಅವರಿಗೆ ಓಟ್ ಹಾಕುವುದು ನಾವಲ್ಲ, ವೈಷ್ಣವದೇವಿ. ವೈಷ್ಣವದೇವಿಗೆ 13 ಕಿ.ಮಿ. ಹತ್ತಿ ಹೋಗಿ ಅಲ್ಲಿಂದ ಓಟು ಬರುತ್ತಿತ್ತು. ರಾಜಕಾರಣದಲ್ಲಿ ಕೆಲಸ ಮಾಡುವುದಷ್ಟೆ ಮುಖ್ಯವಲ್ಲ. ಈಗ ಕೆಲಸ ಮಾಡುವುದು ಬಹಳ ಮುಖ್ಯವೆನ್ನುವ ಕಾಲ ಹೋರಟು ಹೋಯಿತು. ಖರ್ಗೆ ಅವರ ಹೇಳಿದರಲ್ಲ. ಎಷ್ಟೆಷ್ಟೋ ಕೆಲಸ ಮಾಡಿ ಸೋತಿರುವವರೆಲ್ಲಾ ಇಲ್ಲಿರುವವರು. ಇಲ್ಲಿ ಸುಮಾರು ಜನ, ಪ್ರಕಾಶ್‌ರಿಂದ, ರಮೇಶ್ ಕುಮಾರ್‌ರಿಂದ, ನನ್ನಿಂದ, ಅಧ್ಯಕ್ಷರಾಗಿ ಕರ್ನಾಟಕದ ಹಣವನ್ನೆಲ್ಲಾ ತೆಗೆದುಕೊಂಡು ಹೋಗಿ ಶ್ರೀನಿವಾಸಪುರಕ್ಕೆ ಕಟ್ಟಿಸಿದರಲ್ಲಾ ಎಂದು ನಾನೇ ರಮೇಶ್ ಕುಮಾರ್ ಅವರಿಗೆ ಟೀಕೆ ಮಾಡಿದ್ದೆ, ಗೆದ್ದರೇ? ಎಷ್ಟು ದುಡ್ಡು ಹಾಕಿದ್ದಿರಿ ಸರ್, ಸಾಯಿಬಾಬ ಅವರನ್ನೆಲ್ಲಾ ಬಳಸಿಕೊಳ್ಳುತ್ತಿದ್ದಿರಿ, ಬರೀ ಬಳ್ಳಾರಿ ಬಳಸುತ್ತಿದ್ದಿರಿ, ನಮಗೊಂದಿಷ್ಟು ಕೊಡಿ ಎಂದು ಪ್ರಕಾಶ್ ಅವರಿಗೂ ಟೀಕೆ ಮಾಡಿದೆವು, ಅವರು ಗೆದ್ದರೇ? ಜನ ಅವರನ್ನು ಇವತ್ತು ಗುರುತಿಸಿಲ್ಲ, ಜನರ ಜೊತೆಯಲ್ಲಿ ಕರೆದುಕೊಂಡು ಹೋಗುವುದನ್ನು ಗುರುತಿಸುತ್ತಾರೆ, ಅಧಿಕಾರವನ್ನು ಮತ್ತು ಐಶ್ವರ್ಯವನ್ನು ಜೊತೆಯಲ್ಲಿ ಹಂಚಿಕೊಳ್ಳುವುದನ್ನು ಗುರುತಿಸುತ್ತಾರೆ, ಹಂಚಿಕೊಳ್ಳಬೇಕು. ಏಕೆ ನಿಮ್ಮನ್ನು ಬಿಟ್ಟು ಬೇರೆಯವರನ್ನು ಗುರುತಿಸುತ್ತಾರೆಂದರೆ, ಅಲ್ಲಿ ಹಂಚಿಕೆ ಚೆನ್ನಾಗಿ ಆಗುತ್ತದೆ., ನಮ್ಮ ಹತ್ತಿರ ಹಂಚಿಕೆ ಆಗುತ್ತಿಲ್ಲ, ದುಡಿಮೆ ಇದೆಯೋ ಇಲ್ಲವೋ ಗೊತ್ತಿಲ್ಲ. ಹಂಚಿಕೆಯನ್ನು

ಸಮೃದ್ಧವಾಗಿ ಅಲ್ಲಿನಂತೆ ನೀವು ಮಾಡಿದ್ದರೆ ಬಹುಶಃ ಈ ಸ್ಥಿತಿ ನಮಗೆ ಬರುತ್ತಿರಲಿಲ್ಲ, ಹಂಚಿಕೆ ಮಾಡುವುದನ್ನು ಕಲಿಯಿರಿ. ಹಂಚಿಕೆ ಮಾಡಿಬಿಟ್ಟಿದ್ದರೆ ನಿಮ್ಮ ಜೊತೆಯಲ್ಲಿ ಇನ್ನು 15 ಜನ, 20 ಜನ, 30 ಜನ ಕೈ ಎತ್ತುವುದಕ್ಕೆ ಇರುತ್ತಿದ್ದರು. ಎಲ್ಲೋ ಆ ಕೊಂಡಿ ತಪ್ಪಿ ಹೋಗಿದೆ, ಆ ಕೊಂಡಿಯನ್ನು ಹುಡುಕಿ. ಇವತ್ತು ಅಭಿಮಾನ ಪ್ರೀತಿಯಿಂದ ಬರುತ್ತಿಲ್ಲ, ಅದು percolations, ಅಭಿಮಾನ ಕೆಳಗೆ ಹರಿದು ಹರಿದು ಹೋದರೆ ಬರುತ್ತದೆ. ಹೇಗೆ ಬಿಟ್ಟರು ಬೆಳೆ ಬೆಳೆಯುತ್ತದೆ. ಎರಡನೆಯದಾಗಿ constitutional matters ಅನ್ನು ಸಾರ್ವಜನಿಕವಾಗಿ ಮಾಡುತ್ತಿರುವುದು ಬಹಳ ದುರಂತ. ಒಂದು ಸಂವಿಧಾನ ಬಿಕ್ಕಟ್ಟು, ರಾಜ್ಯಪಾಲರು, ಆ ಸಂವಿಧಾನದ ಅಧೀನದಲ್ಲಿ ಏನೇನು ಮಾಡಬೇಕೋ ಮಾಡುವುದಕ್ಕೆ ಬಿಡಬೇಕಾಗಿತ್ತು. ಎಷ್ಟು ಪ್ರೇಶರ್ ಸರ್? ಏಕೆ ಸರ್? ನಮಗೆ ಅರ್ಥವಾಗುವುದಿಲ್ಲ ಸರ್? Why all this? ಇವತ್ತು ನಮಗೆ ಎರಡು ತಿಂಗಳು ಅವಕಾಶ ಕೊಟ್ಟಿದ ದಿವಸ ಯಾರೇ ಬರಲಿ 113 ಸದಸ್ಯರ ಸ್ಟೇಕ್ ಮಾಡಲಿ, 113 ಸದಸ್ಯರ ಪಟ್ಟಿಯನ್ನು ಕೊಟ್ಟರೆ ಕರೆಯುತ್ತಾರೆ ಎಂಬುದು ಗೊತ್ತಿರುವ ವಿಷಯ. ಈ ರಾಜ್ಯದಲ್ಲಿ ಎಷ್ಟು ಆಗಿಹೋಯಿತು ಸರ್, ಚಿತ್ರಣಾಂಗವಾಗಿ ಬಿಟ್ಟಿತು ಸರ್. ಸರ್, ನಮಗೆಲ್ಲಾ ಈ ಟಿವಿ ನ್ಯೂಸ್ ಅನ್ನು ನೋಡುವುದನ್ನು ಬಿಡಬೇಕಾದ ಸ್ಥಿತಿ ಬಂದುಬಿಟ್ಟಿತು. ಕೆನ್ನೆ ಮೇಲೆ ಪಟ್ ಅಂತ ಯಾರಾದರು ಹೊಡೆದಿದ್ದರೂ ನಿಜವಾಗಿಯೂ ಅಷ್ಟು ಅವಮಾನವಾಗುತ್ತಿರಲಿಲ್ಲ. ಆ ಸಾಂಗ್ ಎಲ್ಲಿ ಸಿಕ್ಕಿತೋ, ಎಡಿಟ್ ಮಾಡುವವರು ಯಾರೋ, ಸೀಕ್ವೇನ್ಸ್ ಅನ್ನು ಅಡ್ಜೆಸ್ಟ್ ಮಾಡುವವರ್ಯಾರೋ, ಅವರ್‍ಯಾರದರೂ ಕೈಯಲ್ಲಿ ಒಂದು ಸಿನಿಮಾವನ್ನು ತೆಗೆಸಿದರೆ ನಿಜವಾಗಿ ಅವರುಗಳಿಗೆ ನ್ಯಾಷನಲ್ ಅವಾರ್ಡ್ ಬರುತ್ತದೆ. ಓ, ಆ ರಂಗ ಸಜ್ಜಿಕೆ, ಜೋಡಣೆ, ಆ ಬ್ಯಾಕ್‌ಗ್ರೌಂಡ್, ಮಾನ ಮರ್ಯಾದೆ ಇರುವವರ್‍ಯರಾದರೂ ನೋಡಿಬಿಟ್ಟರೆ, ಮನೆಯಲ್ಲಿ ಹುಡುಗರಿಗೆ ಉತ್ತರ ಹೇಳುವುದಕ್ಕಾಗುವುದಿಲ್ಲ. ಅಕಸ್ಮಾತ್ ಯಾವುದಾದರು ಸಿನಿಮಾದಲ್ಲಿ ನಾನು ನಟನೆಂದು ರೇಪ್ ಸೀನ್‌ನಲ್ಲಿ ಇದ್ದರೆ, ನಮ್ಮ ಮಕ್ಕಳೇನು ತಿಳಿದುಕೊಳ್ಳಬಹುದು., ಆ ಸೀನ್ ಅಲ್ಲಿ ಸೃಷ್ಟಿಯಾಯಿತು. ಆ ಸೀನನ್ನೇ ಸೃಷ್ಟಿ ಮಾಡಿದಿರಿ. ಗಾಂಧಿ ಪ್ರತಿಮೆ ಮುಂದೆ ಹೋದಿರಿ, ರಾಜ್ಯಪಾಲರ ಮುಂದೆ ಹೋದಿರಿ, ರಾಷ್ಟ್ರಪತಿಯವರ ಮುಂದೆ ಹೋದಿರಿ. ಸರ್, ಸಂವಿಧಾನಕ್ಕೆ ಆದ ಬಿಕ್ಕಟ್ಟನ್ನು ಅದರ ಆಶಯದಲ್ಲಿ

ಸಾಲ್ವ್ ಆಗುವುದಕ್ಕೆ ನೀವು ಬಿಡದೆ ಹೋದರೆ ಮುಂದೆ ರಾಜ್ಯದ ಸ್ಥಿತಿ ಏನು? ಒಬ್ಬ ಮುಖ್ಯಮಂತ್ರಿಯಾಗಿ ತಾವು ಪ್ರಮಾಣ ಸ್ವಿಕಾರ ಮಾಡುವುದು, ಸರ್ಕಾರ ನಿಮಗೆ ಬಿಟ್ಟದ್ದು ಅಷ್ಟೆ ಆಗಬೇಕಾಗಿತ್ತು, ಕ್ಷಮಿಸಬೇಕು, ಅದು ಪಕ್ಷದ ಕಾರ್ಯಕ್ರಮ ಆಗಬಾರದು. ಈ ಪ್ರಮಾಣದಲ್ಲಿ ಯಾವತ್ತು ಆಗಿರಲಿಲ್ಲ. ಯಾರಾದರೂ ಮಾಡಲಿ. ಸರ್ ಅವತ್ತು ಬೆಂಗಳೂರಿನೊಳಗೆ ಯಾರು ಖಂಡಿತ ಬರುವಂತಿಲ್ಲ. ಯಾರು ಯಡಿಯೂರಪ್ಪನವರಿಗೆ ಸಲಹೆ ಮಾಡುತ್ತಿರುವುದು, ಏತಕ್ಕೋಸ್ಕರ ಇದನ್ನೆಲ್ಲಾ ಮಾಡುತ್ತಿದ್ದಾರೆ ಎಂದು ನಾನು ನೊಂದುಕೊಂಡೆ. ಇನ್ನು ಅಲ್ಲಿ ಓಟ್ ಆಫ್ ಕಾನ್ಫಿಡೆನ್ಸ್ ತೆಗೆದುಕೊಂಡಿಲ್ಲ, ಏನು ಆಗಲಿಲ್ಲ, ಇಡೀ ರಾಜ್ಯದಿಂದ ಕಾರ್ಯಕರ್ತರು ಬಂದು ಯಾರನ್ನೋ ಮಂತ್ರಿ ಮಾಡಬೇಕಾ? ಪ್ರಕಾಶ್ ಅವರೆ ಇವತ್ತು ಬರುತ್ತಾ ನೋಡಿಕೊಂಡು ಬಂದೆ, ಇಲ್ಲಿ ಯಾರಿಗೂ ಓಟ್ ಹಾಕಬೇಡಿ ಎಂದು ನೀವು ವಿಪ್ ಕೊಟ್ಟಿದ್ದಿರಿ. 18 ಜನ ನಮ್ಮ ಮಂತ್ರಿಗಳು ಪ್ರಮಾಣವಚನ ಸ್ವೀಕಾರಿಸುತ್ತಿದ್ದಾರೆ ಎಲ್ಲಾ ಬನ್ನಿ ಎಂದು ತುಮಕೂರಿನಿಂದ ಇಲ್ಲಿಯವರೆಗೆ ಬ್ಯಾನರ್ ಪೋಸ್ಟರ್ ಕಟ್ಟಿದ್ದೀರಿ, ನಾವು ಏನು ತಿಳಿದುಕೊಳ್ಳಬೇಕು? ನಾನು ಸತ್ಯವಾಗಿ ಹೇಳುತ್ತಿದ್ದೇನೆ, ಪ್ರತಿ ರಸ್ತೆಯಲ್ಲಿ ನಿಮ್ಮದೂ, ಸನ್ಮಾನ್ಯ ಪ್ರಕಾಶ್‌ರದ್ದು ಪೋಟೋ ಹಾಕಿದ್ದಾರೆ. ಪೋಸ್ಟ್, ಬ್ಯಾನರ್‌ಗಳಲ್ಲಿ 18 ಮಂತ್ರಿಗಳು 21ನೇ ತಾರೀಖು ಪ್ರಮಾಣವಚನ ಸ್ವೀಕಾರಿಸುತ್ತಿದ್ದಾರೆ, ತಾವೆಲ್ಲಾ ದಯವಿಟ್ಟು ಆ ಸಭೆಗೆ ಬರಬೇಕೆಂದು ಪೋಸ್ಟರ್‌ಗಳನ್ನು ಅಲ್ಲಿ ಹಾಕುತ್ತಿರಿ, ಯಡಿಯೂರಪ್ಪನವರ ವಿರುದ್ಧವಾಗಿ ಓಟ್ ಹಾಕಿ ಎಂದು ಇಲ್ಲಿ ವಿಪ್ ಕೊಡುತ್ತೀರಿ, what is this double standard? ಗೊತ್ತಾಗಬೇಕಲ್ಲ. ನಮಗೆ ಯಾರೋ ಸ್ನೇಹಿತರು ಅಂದರು, ಕಷ್ಟ ಅವರು ಬೇರೆ ತೀರ್ಮಾನ ತೆಗೆದುಕೊಂಡಿದ್ದಾರೆ ಅಂದರು, ಹೇಗ್ರಿ ಪೋಸ್ಟರ್ ಹಾಕಿದ್ದಾರೆ ಅಲ್ಲೇಲ್ಲಾ ಹೊರಡಿಸುವುದಕ್ಕೆ ದುಡ್ಡನ್ನು ಕೊಟ್ಟಿದ್ದಾರೆ, ಬಸ್‌ಗಳನ್ನು ಬುಕ್ ಮಾಡಿದ್ದಾರೆ, ಏನು ಲೆಕ್ಕವಿಲ್ಲದಷ್ಟು ಬಸ್‌ಗಳನ್ನು ಬುಕ್ ಮಾಡಿದ್ದಿರಿ, ಆ ಪ್ರಮಾಣ ಸ್ವೀಕಾರ ಸಮಾರಂಭವನ್ನು ಆ ಪ್ಯಾಲೇಸ್ ಗ್ರೌಂಡೋ, ಸ್ಟೇಡಿಯಂಗೋ ತೆಗೆದುಕೊಂಡು ಹೋಗಬೇಕಾಗಿರುವ ಸ್ಥಿತಿ ಬಂದಿದೆ, ಇನ್ನು ಎರಡು ದಿವಸಗಳಲ್ಲಿ ಅವರು ಸರ್ಕಾರವನ್ನು ಬೀಳಿಸುವವರು ನೀವು 18 ಜನ ಮಂತ್ರಿಗಳಾಗಿ ಹೇಗೆ ಮಾಡುತ್ತೀರೆನ್ನುವುದನ್ನು ಆ ಪಕ್ಷದಿಂದ ಯಾರಾದರೂ ಒಬ್ಬರು ನಿಂತುಕೊಂಡು ನಮಗೆ ಹೇಳಿ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಹೊಸ ಸರ್ಕಾರವಾಗಬಹುದು, ಏನು ಆಶ್ಚರ್ಯ ಪಡಬೇಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: 21ನೇ ತಾರೀಖಿಗೆ 18 ministers.

ಶ್ರೀ ವಾಟಾಳ್ ನಾಗರಾಜ್: ಮಂತ್ರಿಗಳದು ತಾನೇ ಪ್ರಮಾಣವಚನ ಯಾರಾದರೇನಂತೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಮುಖ್ಯಮಂತ್ರಿಯವರದಾದ ಮೇಲೆ ತಾನೇ ಸರ್, ಬೇರೆಯವರು ಆಗುವುದು? ಇಲ್ಲಿ ಮುಖ್ಯಮಂತ್ರಿಗಳು ಬಿದ್ದು ಹೋಗುತ್ತಿದ್ದಾರಲ್ಲ?

ಶ್ರೀ ವಾಟಾಳ್ ನಾಗರಾಜ್: ಇನ್ನೊಬ್ಬರು ಆಗುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅದನ್ನು ಹೇಳಲಿಲ್ಲವೇ?

ಶ್ರೀ ವಾಟಾಳ್ ನಾಗರಾಜ್: ದಿನಾಂಕ. ಜ್ಯೋತಿಷ್ಯವೆಲ್ಲಾ ಬೇಕಾಗಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈ ಸ್ಥಿತಿ ಖಂಡಿತ ಯಾವ ರಾಜ್ಯಕ್ಕೂ ಬರಬಾರದಾಗಿತ್ತು. ಅಲ್ಲೊಂದು ಹೇಳುವುದು, ಇಲ್ಲೊಂದು ಮಾಡುವುದು, ಅಲ್ಲೊಂದು ತೋರಿಸುವುದು, ಇಲ್ಲೊಂದು ಮಾಡುವುದು, ನಮ್ಮನ್ನು ಸಾರ್ವಜನಕರು ಏನು ತಿಳಿದುಕೊಳ್ಳುತ್ತಾರೆ? ಜನರು ನಮ್ಮನ್ನು ಏನು ಅಂದುಕೊಳ್ಳುತ್ತಾರೆ? ನಾವು ಯಾರು ಸರ್, we are all representing them. ಇಲ್ಲಿ ನಾನಾಡುವ ಮಾತು, ನಾನು ಕೊಡುವ ಓಟು, ನಮ್ಮ ಅಪ್ಪ ಕೊಟ್ಟ ಹಕ್ಕಲ್ಲ ಸರ್, ಕ್ಷೇತ್ರದ ಜನರು ಕೊಟ್ಟ ಹಕ್ಕು. ನಾನು ಇಲ್ಲಿ ಯಾವುದಾದರೂ ಮರ್ಯಾದೆ ಕಳೆದುಕೊಳ್ಳುವಂತಹ ಕೆಲಸವನ್ನು ಮಾಡಿದರೆ ನಾನು ಕ್ಷೇತ್ರದ ಜನರ ಮರ್ಯಾದೆ ಕಳೆದಂತೆ. ಇಲ್ಲಿ ಕುಳಿತುಕೊಂಡಿರುವ representation ಏನು ನನ್ನ ಹಕ್ಕು? ನನ್ನ ಪಿತ್ರಾರ್ಜಿತ ಆಸ್ತಿಯೇ? ರಾಜಕೀಯ ಪ್ರಾತಿನಿಧಿಕ ಹಕ್ಕು, ಸಾರ್ವಜನಿಕವಾಗಿ ಬಂದಿರುವ ಹಕ್ಕು. ಈ ರಾಜ್ಯದಲ್ಲಿ ಏಕೆ ಅವರಿಗೆ ಅಪಮಾನ ಮಾಡುವ ಕೆಲಸ ಈ ರಾಜ್ಯದಲ್ಲಿ ನಡೆಯುತ್ತಿದೆ ಎಂಬುದು ಅರ್ಥವಾಗಿಲ್ಲ. ಏತಕ್ಕೆ ಈ ಕೆಲಸಗಳಾಗುತ್ತಿವೆ ಎಂಬುದನ್ನು ದಯನಾಡಿ ಹೇಳಬೇಕು. ಒಂದು ಮುಖ್ಯಮಂತ್ರಿಗಳ swearing in, ಒಬ್ಬ ಮಂತ್ರಿಗಳ swearing in ಆಗುವುದು, ಪಕ್ಷಗಳ

ಕಾರ್ಯಕ್ರಮಗಳು, ಯಾವತ್ತಿನಿಂದ ಆಗುವುದಕ್ಕೆ ಶುರುವಾಯಿತು? ನಾನು ತಿಳಿದಂತೆ ಲೀಡರ್ಸ್‌ನ್ನು ಕರೆಯುತ್ತಿದ್ದರು, ಎಂ.ಎಲ್.ಎಗಳನ್ನು ಕರೆಯುತ್ತಿದ್ದರು. ಒಂದು ಕಾರ್ಯ ಕ್ರಮವನ್ನು ಮುಗಿಸುತ್ತಿದ್ದರು. ಉದಾಸಿಯವರು ಮಂತ್ರಿಗಳಾದಾಗ ಹೀಗೆ ಆದರೆ? ಈ ಸಂಪತ್ತಿಗೆ ಅವರು ಮಂತ್ರಿ ಆದರೆ? ಅವತ್ತು ಮೊದಲನೇ ದಿವಸ ಇವತ್ತು ಕೊನೆಯ ದಿವಸ, ಇಷ್ಟಕ್ಕೆ ಮಂತ್ರಿ ಆಗಿದ್ದರೆ? ಅದಕ್ಕಾದರೂ ನಿಮಗೆ 13 ದಿವಸ ಸಮಯ ಬೇಡವೇ? ಶ್ರಾದ್ಧಾ ಮಾಡುವುದಕ್ಕಾ ಅದು, 7 ದಿವಸಕ್ಕೆನಾ? ಇದಕ್ಕೆ ಒಂದು ಇತಶ್ರೀ ಆಡಲೇಬೇಕು. ಈ ಸಮಯದಲ್ಲೂ ನಾವೊಂದು 5–6 ಜನರನ್ನು ಬಿಟ್ಟರೆ ಎಲ್ಲರೂ ಸರ್ಕಾರದಲ್ಲಿ ಭಾಗಿಗಳಾಗಿಬಿಟ್ಟಿದ್ದಾರೆ, ಕನಿಷ್ಠ ಒಂದು ನ್ಯಾಷನಲ್ ಗೌರ್ನಮೆಂಟ್ ಸ್ಥಿತಿಯಾದರೂ ಬರಬೇಕು. ಇಲ್ಲಿ ಇನ್ನೇನು ಇಲ್ಲ. ಇರುವ ಪಕ್ಷಗಳ ಆಧಾರದ ಮೇಲಾದರೂ ಶಾಸನ ಸಭೆಯಲ್ಲೆ ನಿಗಧಿಯಾದ ಅಜೆಂಡಗಳಲ್ಲಿ ಕೆಲಸ ಮಾಡುವ ಒಂದು ಕ್ಯಾಬಿನೆಟ್ ಆದರೂ ನೇಮಕವಾಗಬೇಕಾಗುತ್ತದೆ. ಇಲ್ಲದೆ ಹೋದರೆ ಮುಂಬರುವ ದಿವಸಗಳಲ್ಲಿ ಒಂದೇ ಪಕ್ಷದ ಸರ್ಕಾರ ಆಳ್ವಿಕೆ ಮಾಡುವುದು ಬಹಳ ಕಷ್ಟವೆಂಬುದು ನಮ್ಮ ಅನುಭವ. ಇವತ್ತು ಬರಿ ಪಕ್ಷಗಳು ಅಕೌಂಟ್ ಆಗುತ್ತಿಲ್ಲ. ಕ್ಯಾಂಡಿಡೇಟ್ ಪಕ್ಷ ಎರಡು ಕೌಂಟ್ ಆಗುತ್ತಿದೆ. ಕ್ಯಾಂಡಿಡೇಟ್ಗಳು ಇವತ್ತು ಒಂದು ಪಕ್ಷ, ಎರಡು ಪಕ್ಷ, ಮೂರು ಪಕ್ಷಗಳಲ್ಲಿ ಇಲ್ಲ. ಬೇಕಾದಷ್ಟು ಪಕ್ಷಗಳಿವೆ. ಆ ಪಕ್ಷಗಳಿಗೆ ಏನಾದರೂ ಪ್ರಾತಿನಿಧ್ಯ ಕೊಟ್ಟು ಅಥವಾ ಗುಂಪಿನ ಮೇಲೆ ಏನಾದರೂ ಆಧಾರ ಮಾಡಿಕೊಂಡು ಸರ್ಕಾರಗಳನ್ನು ನಡೆಸಿ ಆಡಳಿತ ಮಾಡಬೇಕಾಯಿತು. ಇವತ್ತು ಆಡಳಿತದ ಮಟ್ಟ ಏನಾಗಿದೆ, ಮೈನ್ಸ್ ವಿಷಯ ಬಹಳ ಚರ್ಚೆಗೆ ಏಕೆ ಬಂದಿದೆ, ಮೈನ್ಸ್‌ಲ್ಲಿರುವ ಒಬ್ಬ ACF ಇವತ್ತು trader. ಒಬ್ಬ RFO, trader, RTO ಗಳು ಇವತ್ತು ಏನಾದರೂ ನಮ್ಮ ಭಾಗಕ್ಕೆ ಬಂದರೆ, ಮೈನ್ಸ್‌ನಲ್ಲಿ ದುಡ್ಡು ಇದೆ ಎಂದೇ ಬಂದಿರುವುದು. Forest Officer ಬಂದರೆ ಇವತ್ತು Forestನಲ್ಲಿ ಮೈನಿಂಗ್ ಮಾಡಬಹುದು ಎಂದೇ ಬಂದಿರುವುದು. Forest ಇಲ್ಲದ ಕಡೆ ಏಕೆ Forest ಗೆ ಡಿಮ್ಯಾಂಡ್ ಇದೆ ಎಂದರೆ, ದುಡ್ಡಿಗಷ್ಟೇ ಮಾನ್ಯ ಪ್ರಕಾಶ್‌ರವರೇ, ಸರಸಾಗಟು ದುಡ್ಡು ಟನ್‌ನಲ್ಲಿ ಕೊಡುತ್ತಾರೆ. ಮೊದಲು ದುಡ್ಡು ಏಣಿಸುತ್ತಿದ್ದರು. ರಾಜಕಾರಣಿಗಳ ಹತ್ತಿರ ಇರುವ ದುಡ್ಡು ಎಣಿಸುವುದಕ್ಕೆ ಈಗ ಮಿಷನ್ನೇ ಬೇಕು. ಕೈಯಲ್ಲಿ ಏಣಿಸುವುದಕ್ಕೆ ಆಗುವುದಿಲ್ಲ.

ಪಾಕೆಟ್ ಮಾಡಿ ಮಿಷನ್‌ಗೆ ಫೀಡ್ ಮಾಡುತ್ತಾರೆ.ಅಧ್ಯಕ್ಷರೇ, ಇವೆಲ್ಲಾ ನಿಮಗೆ ಗೊತ್ತಾಗುವುದಿಲ್ಲ. ದುಡ್ಡಿನ ಏಣಿಕೆ ಕೂಡ ಈಗ ಮಾಡುವುದಕ್ಕಾಗುವುದಿಲ್ಲ. ಮೆಷಿನ್ ಬೇಕಾಗಿದೆ. ಬ್ಯಾಂಕ್‌ಗಳನ್ನು ಬಿಟ್ಟು ಯಾರ್ಯಾರ ಮನೆಯಲ್ಲಿ ಈ ಮೆಷಿನ್ install ಆಗಿದೆ ಎಂದು ಒಂದು enquiry ಮಾಡಿ. ಏತಕ್ಕೋಸ್ಕರ ಲೂಟಿ ಮಾಡುತ್ತಿದ್ದೀರಿ. ಹಿಂದೆ ಒಂದು ಸಾರಿ ನಮ್ಮ ಮಾಜಿ ಪ್ರಧಾನಿಗಳಾದ ದಿ. ಚಂದ್ರಶೇಖರ್‌ರವರು ಒಂದು ಮಾತು ಹೇಳಿದ್ದರು. ಹೇಗಿದೆ ಸಾರ್ ದೆಹಲಿ ವಾತಾವರಣ ಎಂದು. ಏನೋ ಗೊತ್ತಿಲ್ಲ, ಎಲ್ಲಾ ತರಾತುರಿಯಲ್ಲಿದ್ದಾರೆ. ದೇಶವೇ ಮುಳುಗಿ ಹೋಗುತ್ತಿದೆ ಇವರೇಕೆ ಒಡಾಡುತ್ತಿದ್ದಾರೆಂದು ನಮಗೆ ಗೊತ್ತಾಗುತ್ತಿಲ್ಲ. ರಾಜ್ಯವೇ ಮುಳುಗಿ ಹೋಗುತ್ತಿದೆ ಇವರೇಕೆ ಒಡಾಡುತ್ತಿದ್ದಾರೆಂದು ನಮಗೆ ಅರ್ಥವಾಗುತ್ತಿಲ್ಲ. ಎಷ್ಟು ದುಡಿಯುತ್ತೀರಿ, ಎಲ್ಲಿ ಇಡುತ್ತೀರಿ, ಎಲೆಕ್ಷನ್ ಚಟ ನಿಮಗೇಕೆ ಬಂದಿದೆ, ಆ ಹಣವನ್ನು ಬೇಗ ಖರ್ಚು ಮಾಡಿಬಿಡಬೇಕು. ಇಟ್ಟುಕೊಂಡಿದ್ದರೆ ಅಪಾಯದ ಬೆಂಕಿ ಹತ್ತಿಕೊಳ್ಳುತ್ತದೆ. ದುಡ್ಡು ಹೀಟ್ ಜನರೇಟ್ ಮಾಡುತ್ತಿದೆ. ಅದಕ್ಕಾಗಿ ಅದನ್ನು ಬೇಗ ಹಂಚಿಬಿಡಬೇಕು. ಬೇಗ ಹಂಚದೇ ನಾಳೆ ಹೆಚ್ಚು ಕಡಿಮೆ ಆದರೆ ಗತಿ ಏನು? ನಿಮಗೆ ಎಲೆಕ್ಷನ್‌ಗೆ ಹೋಗುವುದಕ್ಕೆ ಚಟ ಬಂದಿರುವುದು, ನೀವು ಮಾಡಿರುವ 20 ತಿಂಗಳುಗಳ ಆಡಳಿತ. ಇದರಲ್ಲಿ ಯಾರೇನು ಹೆಚ್ಚು ಯಾರೇನು ಕಡಿಮೆ ಎಂದು ಇಲ್ಲ. ನಿಮ್ಮ ಒಳಗಿನಿಂದ ರಕ್ತ ಏಕೆ ಕುದಿಯುವುದಕ್ಕೆ ಪ್ರಾರಂಭ ಮಾಡಿದೆ ಎಂದರೆ, ಈ ಹಣವನ್ನು ಬೇಗ ಖರ್ಚು ಮಾಡಬೇಕು. Municipality ಯಲ್ಲಿ ಒಂದು test dose ನೋಡಿ ಬಿಟ್ಟಿದ್ದೀರಿ. ಮುಂದೆಯೂ ಅದೇ ಆಗುತ್ತದೆ ಎನ್ನುವ ಭಾವನೆಯಲ್ಲಿದ್ದೀರಿ. ಇವತ್ತು ನಾವು ಪುರಸಭೆಯಲ್ಲಿ ಸಾಧನೆ ಮಾಡಿದ್ದೇವೆ, that can be done for the assembly election also ಎಂದು ತಮ್ಮ ತಲೆಗೆ ಬಂದುಬಿಟ್ಟಿದೆ. ಬೇಗ ಮಾಡಿ ಪಾಪದ ದುಡ್ಡು ಒಂದಷ್ಟು ಜನರಿಗಾದರೂ ಹಂಚಿ. ಅದಾದರೂ ಒಂದು ಒಳ್ಳೆಯ ಕೆಲಸವಾಗಲಿ. ಏಕಾದಶಿ ಹಬ್ಬವೋ, ಮಹಾನವಮಿ ಹಬ್ಬವೋ, ಯುಗಾದಿ ಹಬ್ಬವೋ ಅವರಿಗೆ ಮಾಡಿಸಿ. ನೀವು ಬೇರೆ ರೀತಿಯಲ್ಲಿ ಸಹಾಯ ಮಾಡುವುದಕ್ಕೆ ಆಗಲಿಲ್ಲವಲ್ಲ. ದಯವಿಟ್ಟು ಅದನ್ನು ಮಾಡಿ. ನಾನು ಮಾನ್ಯ ಯಡಿಯೂರಪ್ಪನವರಿಗೆ ಒಂದು ಮಾತು ಹೇಳುತ್ತೇನೆ. ಅವತ್ತು ತಾವು ಇಲ್ಲಿ ನಿಂತು ಕೊಂಡು ಹೇಳಿದ್ದೀರಿ. ನೀವು Programme ಗಳನ್ನು announce ಮಾಡುತ್ತಿರುವುದು ನೋಡಿದರೆ, project

ನ್ನು ಬಿಟ್ಟು Programmes ಗೆ ಬಜೆಟನ್ನು ಕೇಂದ್ರಿಕರಿಸುವುದು ನೋಡಿದರೆ, ನೀವು ಈಗಾಗಲೇ election ಗೆ ತಯಾರಾಗಿದ್ದೀರಿ, ನಿಮ್ಮಲ್ಲಿ ಏನೋ ಹೆಚ್ಚು ಕಡಿಮೆ ಕಾಣುತ್ತಿದೆ ಎಂದು ಅನ್ನಿಸಿತ್ತು. ಇವತ್ತು ಅದಿ ಸತ್ಯ ಎಂದು ನಿರೂಪಣೆ ಆಗಿದೆ. ತಾವು Finance Minister ಆಗಿ, project ಗಳಿಗೆ ಇಂಬು ಕೊಡಬೇಕಾಗಿತ್ತು. Programme ಗಳಿಗೆ ಅಲ್ಲ. ತಾವು Finance Minister ಆಗಿ, ಈ ರಾಜ್ಯದಲ್ಲಿ ರೈತರಿಗೆ ನೀರು ಕೊಡುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿತ್ತು. ಅಧಿಕಾರ ಇರುತ್ತದೆ ಹೋಗುತ್ತದೆ. ಕನಿಷ್ಟ ಇಲ್ಲಿ ಹೋದ ಗೌರವ ನಿಮಗೆ ಗ್ರಾಮೀಣ ಪ್ರದೇಶಗಳಲ್ಲಾದರೂ ಸಿಗುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಿಕೊಳ್ಳಬೇಕಾಗಿತ್ತು. ನಾವೆಲ್ಲಾ ಸೋತಾಗ ಜನ ಅಯ್ಯೋ ಎಂದು ಹೇಳುತ್ತಾರೆ. ನಮಗೆ ಸಂತೋಷ ಇದೆ. ಯಾರೋ ಇಲ್ಲಿ ಆಡಿಕೊಂಡು ನಗಬಹುದು. ಜಂಬ ಆಡುತ್ತಿದ್ದರು ಸೋತು ಹೋದರು ಎಂದು. ನಮಗೆ ಹಾಗೆ ಅನಿಸುವುದಿಲ್ಲ. ನಮ್ಮ ಕ್ಷೇತ್ರಗಳಲ್ಲಿ ನಾವು ಸೋತರೂ ಹಾಗೇಯೇ ಇರುತ್ತೇವೆ, ಗೆದ್ದರೂ ಹಾಗೆಯೇ ಇರುತ್ತೇವೆ. ಆ ಗೌರವವನ್ನು ನಾವು ಇಟ್ಟುಕೊಂಡಿದ್ದೇವೆ. ತಾವು ಕೂಡ ಉಪಮುಖ್ಯಮಂತ್ರಿಯಾಗಿ ಆ ಗೌರವಕ್ಕೆ ಬರುತ್ತೀರಿ ಎಂದು ನಾವು ನಿರೀಕ್ಷೆ ಮಾಡಿದ್ದೆವು. ಗೌರವಕ್ಕೆ ಬರಬೇಕಾಗಿತ್ತು. ಮಾನ್ಯ ಯಡಿಯೂರಪ್ಪನವರು ಇದ್ದರು ನಮಗೋಸ್ಕರ ಬರೀ ರೈತರು, ರೈತರು ಎಂದು ಹೇಳಿ ಹೋಗಲಿಲ್ಲ. ಇಂತಿಂತಹ ಯೋಜನೆಗಳನ್ನು ನೀರಾವರಿಯಲ್ಲಿ ಇಂತಿಂತಹದ್ದು ಮಾಡಿದರು, ಬಯಲು ಸೀಮೆಗೆ ಇಂತಹ ಕೆಲಸಗಳನ್ನು ಮಾಡಿದರು, ಇದೆಲ್ಲಾ ಮಾಡಿದರು ಎಂದು. ಯಾರನ್ನು ಓಲೈಸುತ್ತೀರಿ, ಏಕೆ ಓಲೈಸುತ್ತೀರಿ ನಮಗೆ ಗೊತ್ತಿಲ್ಲ. ಒಂದು ಹೇಳುತ್ತಿದ್ದೇನೆ, ದಯಮಾಡಿ ಅವರು ಸಪೋರ್ಟ್ ಕೊಟ್ಟರೂ ಕೂಡ ತಾವು ಈ ಸರ್ಕಾರದಲ್ಲಿ ಮುಂದುವರಿಯಬೇಡಿ. ಈ ಸರ್ಕಾರ ನೆಡೆಸಬೇಡಿ. ಇಷ್ಟೆಲ್ಲಾ ಗಂಡ ಹೆಂಡತಿ ಜಗಳ ಬೀದಿಯಲ್ಲಿ ಆಡಿ, ನಮ್ಮಂತಹವರನ್ನು ಪಂಚಾಯಿತಿಗೆ ಇಟ್ಟುಕೊಂಡು ಮತ್ತೆ ಸಂಸಾರ ಮಾಡುತ್ತೇವೆಂದರೆ, ಅಣ್ಣ ಅವಳ ತವ ಮಲಗಿದ್ದರು, ಇವಳ ತವ ಮಲಗಿದ್ದರು, ಎಂದು ತಮಗೆ ಹೇಳುವುದು, ಆ ಮೇಲೆ ಬಂದು ಇಲ್ಲ ಜೊತೆಯಲ್ಲಿಯೇ ಇದ್ದೇವೆ ಎಂದು ಹೇಳಿದರೆ ನಾವೇನು ಹೇಳುವುದು? ದಯಮಾಡಿ ಬೇರೆಯವರ ಜೊತೆಯಲ್ಲಿ ಸಂಸಾರ ಮಾಡಿದ ಮೇಲೆ ಡೈವೋರ್ಸ್ ಮಾಡಿ ಬಿಟ್ಟುಬಿಡಿ. ಇದರಿಂದ ಏನೂ

ಆಗುವುದಿಲ್ಲ. ಹಣೆಬರಹವನ್ನು ಯಾರೂ ಬರೆಯುವುದಕ್ಕೆ ಆಗುವುದಿಲ್ಲ. ದಯಮಾಡಿ ನಿಮಗೆ ಸ್ವಾಭಿಮಾನ ಇದ್ದರೆ ನೀವಾಗಿ, ನೀವು ಒಂದು ತೀರ್ಮಾನ ಮಾಡಿದಿರಿ "ಅವರು ಕರೆದರೂ ನಾನು ಹೋಗುವುದಿಲ್ಲ, ಆ ಸರ್ಕಾರಕ್ಕೆ ನಾನು ಹೋಗುವುದಿಲ್ಲ, ನನಗೆ ಬೇಕಾಗಿಲ್ಲ" ಎಂದು ಹೇಳಿದ್ದಿರಿ. ಯಾರು ಮಾಡಿದರೋ, ಏಕೆ ಮಾಡಿದರೋ, ವಾಪಸ್ ಬಂದುಬಿಟ್ಟಿರಿ. ಯಾರು ಮಾಡಿದರು ಎಂದು ನಮಗೆ ಗೊತ್ತಿಲ್ಲ. ಮಾನ್ಯ ಉದಾಸಿ ಅಥವಾ ಮಾನ್ಯ ಶಿವಣ್ಣನವರು ಯಾರಾದರೂ ಹೇಳಬೇಕು. ಏಕಪ್ಪಾ ಮತ್ತೆ ಕರೆದುಕೊಂಡು ಬಂದಿರಿ ಅವರನ್ನು ಯರ್‍ಯಾರ ತೆವಲಿಗೆ ಕರೆದುಕೊಂಡು ಮಲಗಿಸುತ್ತೀರಿ, ಅದನ್ನಾದರೂ ಹೇಳಿ. ಈ ಸ್ಥಿತಿಗೆ ತಂದಿದ್ದೀರಿ. ಮಾನ್ಯ ಯಡಿಯೂರಪ್ಪನವರಲ್ಲಿ ಇದನ್ನು ಬಹಳ ಲಂಬಿಸುವುದರ ಬಗ್ಗೆ ನನ್ನ ಒಂದು ಕೋರಿಕೆ. ತಮಗೆ ಏನಾದರೂ ಮಾಹಿತಿ ಇದ್ದು, ಇನ್ನು ಏನಾದರೂ ಚರ್ಚೆ ಮಾಡುತ್ತಿದ್ದು, ಕ್ಯಾಪಿಟಲ್ ಹೋಟೆಲ್ ಮತ್ತು ಪದ್ಮನಾಭನಗರದ್ದು ಮೀಟಿಂಗ್ ಮುಗಿದಿದ್ದರೆ, ಅಧಿಕೃತವಾಗಿ ಬೆಂಬಲ ಇದೆಯೋ ಇಲ್ಲವೆಂದು ಒಂದು ಸಾರಿ ಕೇಳಿ, ನನಗೆ ಬೆಂಬಲ ಇಲ್ಲವೆಂದು declare ಮಾಡಿಬಿಡಿ. ನನ್ನನ್ನು ಇಲ್ಲಿಗೆ ಬಿಟ್ಟುಬಿಡಿ ನಾನು ಹೇಗಾದರೂ ಹೋಗುತ್ತೇನೆ ಎಂದು ಹೇಳಿ. ಆದರೆ ನಾವು ಯಾವುದೇ ಒಬ್ಬ ನಾಯಕರಿಗೆ ಅವರು ಯಾರಾದರಾಗಲಿ, ಮಾನ್ಯ ಧರ್ಮಸಿಂಗ್‌ರವರಾಗಲಿ, ಮಾನ್ಯ ಯಡಿಯೂರಪ್ಪನವರಾಗಲಿ, ಮಾನ್ಯ ಕಾರಜೋಳರವರಾಗಲಿ, ಈ ತರಹ unceremonious exit ಆಗುವುದನ್ನು ಸಹಿಸಿಕೊಳ್ಳುವುದಕ್ಕಾಗುವುದಿಲ್ಲ. ನಮಗೆ ನೋವಾಗುತ್ತದೆ. ನಾವೆಲ್ಲ ಒಂದು category. ನಾವೆಲ್ಲ ಒಂದು family. ಆ ಕಡೆ ಇರಬಹುದು, ಈ ಕಡೆ ಇರಬಹುದು, ಇನ್ನೊಂದು ಕಡೆ ಇರಬಹುದು, ನೀವೆಲ್ಲಾ ಯಾರು ಎಂದರೆ ನಾವೆಲ್ಲಾ MLA ಗಳು ಎಂದು ಹೇಳಲೇಬೇಕು. ನಮ್ಮ ನಮ್ಮಲ್ಲಿಯೇ ಪಿತೂರಿಗಳನ್ನು ಮಾಡಿಕೊಂಡು ನಮ್ಮ ನಮ್ಮಲಿಯೇ ಒದಿಸಿಬಿಟ್ಟು, ನಮ್ಮ ನಮ್ಮಲ್ಲಿಯೇ ಯಾರಿಗೋ ಬಟ್ಟೆ ಬಿಚ್ಚಿ ಆಚೆ ಕಳುಹಿಸುವಂತಹ ಸ್ಥಿತಿಯನ್ನು ಯಾರೂ ರಾಜಕಾರಣಿಗಳು ಮಾಡಬಾರದು. ಮಾಡುವುದಾದರೆ ಮೊದಲೆ ಮಾಡಿಬಿಡಬೇಕು. ಇಲ್ಲಿಯವರೆಗೆ ಮಾನ್ಯ ಯಡಿಯೂರಪ್ಪನವರನ್ನು ತಂದು, ಇಲ್ಲಿಂದ ನೀವು ನಗ್ನರಾಗಿ ಹೋಗಿ ಎನ್ನುವ ಸ್ಥಿತಿ ತಂದವರಿಗೆ ಬಹುಶಃ ಭಗವಂತ ಎಂದು ಇದ್ದರೆ, ಒಳ್ಳೆಯದು ಮಾಡುತ್ತಾನೆಂದು ನಾನು

ತಿಳಿದುಕೊಂಡಿಲ್ಲ. ಅದನ್ನು ಎಂಟು ದಿವಸಗಳ ಹಿಂದೆಯೇ ಮಾಡಬಹುದಾಗಿತ್ತು. ಇಲ್ಲಾ "ಮಾನ್ಯ ಯಡಿಯೂರಪ್ಪನವರೆ, ನಿಮಗೂ ನಮಗೂ ಸಂಬಂಧ ಇಲ್ಲ. ಆಚೆ ಇರಿ" ಎಂದು ಹೇಳಬಹುದಾಗಿತ್ತು. ಇದು ಅವರ ಅಮಾಯಕತೆಯ ಪ್ರತೀಕ. ಮಾನ್ಯ ಯಡಿಯೂರಪ್ಪನವರಿಗೆ ರಾಜಕೀಯವಾಗಿ ಇನ್ನು ಅಷ್ಟೊಂದು ಅನುಭವವಾಗಿಲ್ಲವೆಂದು ಗೊತ್ತಾಗುವುದು ಬಿಟ್ಟರೆ, ಮಾನ್ಯ ಯಡಿಯೂರಪ್ಪನವರು ಕೆಟ್ಟವರು ಎಂದು ನಾನು ಇಲ್ಲಿ ನಿಂತು ಭಾಷಣ ಮಾಡುವುದಕ್ಕಾಗುವುದಿಲ್ಲ. ಬಲಿಪಶು ಆದಿರಿ. ಪಿತೂರಿಗೆ ತಮ್ಮನ್ನು ತಾವು ಹೋಗಿ ಹೊಡೆದುಕೊಂಡು ಸತ್ತರು. ಚೀನ ದೇಶದಲ್ಲಿ ನಮ್ಮ ಸೈನಿಕರು ನಿಂತುಕೊಂಡು ಬಾಂಬ್ ಹಾಕಿಸಿಕೊಂಡ ಹಾಗಾಯಿತು. ಈ ಸ್ಥಿತಿಯನ್ನು ತಾವು ನಿರ್ಮಾಣ ಮಾಡಿಕೊಳ್ಳಬಾರದಾಗಿತ್ತು. ನಿಮಗೆ advisors ಯಾರಿದ್ದಾರೆ ಸ್ವಲ್ಪ ಬದಲಾಯಿಸಿಕೊಳ್ಳುವುದು ಒಳ್ಳೆಯದು. ರಾಜಕೀಯದಲ್ಲಿ ಒಂದು ನಿಲುವನ್ನು ತೆಗೆದುಕೊಂಡ ಮೇಲೆಲೀಡರ್ ಎನ್ನುವವರಿಗೆ clarity ಇರಬೇಕು, leader ಎನ್ನುವವರಿಗೆ direction ಇರಬೇಕು, Leader ಎನ್ನುವವರಿಗೆ decision making capacity ಇರಬೇಕು, ಒಂದು clarity ಇಲ್ಲ. decision ತೆಗೆದುಕೊಂಡಿದ್ದು firm ಆಗಿ ನಿಂತುಕೊಳ್ಳುವ ಶಕ್ತಿ ಇಲ್ಲದೇ ಬಂದರೆ ಲೀಡರ್‌ಗಿರಿ ಹೇಗೆ ಉಳಿಯುತ್ತದೆ? ನೀವೆ ತೊಡಿಕೊಂಡಿರುವ ಕಂದಕಕ್ಕೆ ತಾವು ಬಿದ್ದಿದ್ದೀರಿ. ತಾವು ಕಂದಕದಿಂದ ಮೇಲಕ್ಕೆ ಬರುವಂತಹ ಸ್ಥಿತಿಯನ್ನು ಭಗವಂತ ನಿರ್ಮಾಣ ಮಾಡಲಿ. ಪದೇ ಪದೇ ಹೋಗಿ ಇಂತಹ ಪಿತೂರಿಗಳಿಗೆ ಬೀಳಬೇಡಿ, ನೀವು ಬೀಳುವುದು ಬಿದ್ದುಬಿಡಿ. ನಮ್ಮನ್ನು ಬಸವಣ್ಣನವರ ವಂಶಸ್ಥರನ್ನು, ಮಠಗಳನ್ನು, ಮಾನ್ಯಗಳನ್ನು ದಯಮಾಡಿ ಇಲ್ಲಿ ತರಬೇಡಿ. ನಾವೆಲ್ಲ ಬೇರೆ ಪಾರ್ಟಿಯಲ್ಲಿದ್ದೇವೆ. ಅವರೂ ಬರಬಾರದೂ. ಮಾನ್ಯ ಯಡಿಯೂರಪ್ಪನವರಿಗೆ ಅನ್ಯಾಯವಾಗಿದೆ ಎಂದರೆ, ಅದು ರಾಜಕೀಯವಾಗಿ ಅನ್ಯಾಯವೇ ಹೊರತು, ಸಾಮಾಜಿಕವಾಗಿ ಅಥವಾ ಜಾತಿಗೆ, ಧರ್ಮಕ್ಕೆ ಆಗಿರುವ ಅನ್ಯಾಯವೆಂದು ಯಾರಾದರೂ ಭಾವಿಸಿದರೆ, ಅದು ಒಂದು ಮಹಾ ಅಪರಾಧವಾಗುತ್ತದೆ. ಇವತ್ತು ಒಂದೇ ಪಕ್ಷ ಅಥವಾ ಒಂದೇ ಗುಂಪಿಗೆ ಯಾವ ಸಮಾಜವೂ ಇಲ್ಲ. ಎಲ್ಲಾ ಜಾತಿಯವರು ಎಲ್ಲಾ ಕಡೆ ಹಂಚಿಕೊಂಡಿದ್ದೇವೆ. ನಿಮಗೆ ಏನು ಅನ್ಯಾಯವಾಗಿದೆ, ಅದು ನಮ್ಮ ಕಾರ್ಯಕರ್ತರಿಗೆ, ಮತದಾರರಿಗೆ ಆಗಿರುವ ಅನ್ಯಾಯವೆಂದು

ಪ್ರತಿಬಿಂಬಿಸಬೇಕಾಗಿತ್ತು. ತಾವು ಆ ದಿಕ್ಕಿನಲ್ಲಿ ಸ್ವಲ್ಪ ಎಡವಿದ್ದೀರಿ ಎಂದು ನನ್ನ ಭಾವನೆ. ನೀವು ಮಠಾಧ್ಯಕ್ಷರ ರಕ್ಷಣೆಗೆ ಹೋಗಿದ್ದು, ನೀವು ದೇವಸ್ಥಾನಗಳಿಗೆ ಹೋಗಿದ್ದು, ನಿಜವಾಗಿ ಆಗಬಾರದು. ಯಾವ ದೇವಸ್ಥಾನ, ಬುರುಡೇಗಟ್ಟೆ ನಾಗರಾಜ ಈಗ ನಿಮ್ಮನ್ನು ಉಳಿಸುವುದಕ್ಕೆ ಬಂದಿದ್ದಾನೆ? ನಾಳೆ ಹೋಗಿ ಅಲ್ಲಿ ಮಲಗಿಕೊಳ್ಳುವುದಕ್ಕೆ ಹೊರಟ್ಟಿದ್ದೀರಿ, ಕರೆದುಕೊಂಡು ಬನ್ನಿ ಅವರು ನಿಮ್ಮನ್ನು ಉಳಿಸಲಿ. ನಾವೆಲ್ಲ ಹೇಳಿದರೆ ನೀವು ಕೇಳುವುದಿಲ್ಲ. ಹಾಗಾದರೆ ನಾಳೆ ನೀವು ಮಾಡುವ ಅಡ್ಡಪಲ್ಲಕ್ಕಿ ಉತ್ಸವ ನಿಮ್ಮ Chief Minister ಗಿರಿ ಮುಂದುವರಿಸುತ್ತಾ, ವೈಷ್ಣೋದೇವಿ ಮಾತೆಗೆ ನಮಸ್ಕಾರ ಮಾಡಿದಿರಿ, ಈಗ ನಿಮಗೆ ಏನು ಮಾಡುತ್ತಾಳೆ ಹೇಳಿ. ಓಟು ಹಾಕುವ ಜನ ನಮ್ಮ ದೇವರು ಎಂದು ಹೇಳಬೇಕು. ಈ ರಾಷ್ಟ್ರದ ಮತ್ತು ಈ ರಾಜ್ಯದ ಬಡವ ನಮಗೆ ದೇವರು ಎಂದು ಹೇಳಬೇಕು. ಯಾರಿಗೆ ಯಾರೂ ಇಲ್ಲ. ಅವನು ನಮಗೆ ದೇವರು, ಅವನಿಗೆ ಕೆಲಸ ಮಾಡಲಿಕ್ಕೆ ನಾವು ಲೀಡರ್ ಎಂದು ಹೇಳಬೇಕು. ಅದು ಬಿಟ್ಟು ಇನ್ನೊಂದು ದಿಕ್ಕಿನಲ್ಲಿ ನೀವು ಹೋದರೆ ಮುಂದೆ ಬರುವ ರಾಜಕಾರಣಿಗಳಿಗೆ ನೀವು ನಿದರ್ಶನ ಆಗುತ್ತೀರಿ. ಶಾಸ್ತ್ರಕ್ಕೆ, ಧರ್ಮಕ್ಕೆ ದೇವರಿಗೆ ಎಂದು ಹೋದರೆ, ಏನೂ ನಡೆಯುವುದಿಲ್ಲವೆಂದು ಗೊತ್ತಾಗುತ್ತದೆ. ಈ ಆಲೋಚನಾ ಲಹರಿಯನ್ನು ಸ್ವಲ್ಪ ಬದಲಾಯಿಸಿಕೊಳ್ಳಬೇಕು. ಒಂದಲ್ಲ ಒಂದು ದಿವಸ ನೀವು ನಾಯಕರಾದಾಗ ಇಡೀ ಸಮಾಜಕ್ಕೆ ಇಡೀ ರಾಜ್ಯಕ್ಕೆ ತಾವು ನಾಯಕರು ಎನ್ನುವ ಸ್ಥಿತಿಯನ್ನು ನಿರ್ಮಾಣ ಮಾಡಬೇಕು. ಇವತ್ತು ನಿಮಗೆ ಈ ಸ್ಥಿತಿ ಬಂದಿದ್ದಕ್ಕೆ ನಮಗೆ ಸಂಕಟವಾಗುತ್ತಿದೆ. ಆದರೂ ನಾನು ಹೇಳಿದ್ದೇನೆ. ಅಕಸ್ಮಾತ್ ನನ್ನ ಓಟಿನಿಂದ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಇಲ್ಲಿ ಉಳಿಯುವುದಾದರೆ, ನಾವು ಮತ್ತು ನಮ್ಮ ಪಕ್ಷದವರು ಓಟು ಹಾಕುವುದಕ್ಕೆ ತಯಾರಾಗಿದ್ದೇವೆ. ನಾವು ಅದರಲ್ಲಿ ಹಿಂದಕ್ಕೆ ಹೋಗುವ ಪ್ರಶ್ನೆಯೇ ಇಲ್ಲ. ಇಷ್ಟು ಹೇಳಿ ಈ ಸ್ಥಿತಿಯನ್ನು ನಿರ್ಮಾಣ ಮಾಡಿದವರಿಗೆ..... ನಾನು ಈ ಕಡೆ ಕೇಳುವುದು, ಸ್ವಲ್ಪ ನಾವೂ ಯೋಚನೆ ಮಾಡಬೇಕು. ಶತ್ರುವಿನ ಶತ್ರು ನನ್ನ ಮಿತ್ರ ಎನ್ನುವುದು ಎಲ್ಲಾ ಕಾಲಕ್ಕೂ formula ಆಗಬಾರದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಒಬ್ಬರು ಅವರ ಪರ ವಹಿಸಿಕೊಂಡಿರಿ. ಇನ್ನು ಬೇರೆಯವರಿಗೆ ಬುದ್ದಿ ಹೇಳುವುದು ಉಳಿದಿಲ್ಲ.

ನೀವು ಅವರ ಪರ ವಹಿಸಿಕೊಂಡ ಮೇಲೆ ಇನ್ನೊಬ್ಬರನ್ನು ದೂಷಿಸುವ ಅಗತ್ಯವಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಈ ನಿರ್ಣಯವನ್ನು ರಾಜ್ಯದ ಮತದಾರರು ತೆಗೆದುಕೊಳ್ಳುವ ಸ್ಥಿತಿ ನಿರ್ಮಾಣ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ): ಮಾನ್ಯ ಅಧ್ಯಕ್ಷರೆ, ಕರ್ನಾಟಕದ ರಾಜಕಾರಣ ಇಷ್ಟೊಂದು ಹೀನಾಯವಾಗಿ ಆಗುತ್ತದೆ ಎಂದು ನಾವು ಯಾರೂ ಕೂಡ ಕನಸು ಕಂಡಿರಲಿಲ್ಲ. ಈ ಸದನದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರಿಂದ ಹಿಡಿದು ಮಾನ್ಯ ಯಡಿಯೂರಪ್ಪನವರವರೆಗೂ ನಾನು ನೋಡಿದ್ದೇನೆ. ನಿಜಲಿಂಗಪ್ಪನವರು ರಾಜೀನಾಮೆಯನ್ನು ಕೊಟ್ಟ ತಕ್ಷಣ ಎಸ್. ಆರ್.ಕಂಠಿಯವರು ಮೂರು ತಿಂಗಳು ಮುಖ್ಯಮಂತ್ರಿಗಳಾಗಿರುತ್ತಾರೆ. ಎಷ್ಟು ಸತ್ಯವಂತರು ಅವರು ಎನ್ನುವುದಕ್ಕೆ ಹೇಳುತ್ತೇನೆ. ಸತ್ಯವೇ ನಮ್ಮ ತಾಯಿ ತಂದೆ, ಸತ್ಯವೇ ನಮ್ಮ ಬಂಧು ಬಳಗ ಎನ್ನುವ ಪದಕ್ಕೆ ಅರ್ಥ ಅವೊತ್ತಿನ ರಾಜಕಾರಣದಲ್ಲಿ ಇತ್ತು. ಎಲ್ಲಾ ರಾಜಕಾರಣಿಗಳು ಸತ್ಯವಂತರೆ. ಶಾಸಕರು ಎಂದರೆ ದೇವರ ಸಮಾನ. ಮಂತ್ರಿಗಳು ಎಂದರೆ ಬಹಳ ಅತ್ಯಂತ ಹೆಚ್ಚಿನ ಗೌರವ. ಮತದಾರರು ಎಂದರೆ ಅವರಿಗೆ ಇನ್ನೂ ಹೆಚ್ಚಿನ ಗೌರವ ಇತ್ತು. ಇದ ನಿಜಲಿಂಗಪ್ಪನವರ ಕಾಲದಲ್ಲಿ ಇತ್ತು. ಅವರು ರಾಜೀನಾಮೆಯನ್ನು ಕೊ. ುತ್ತಾರೆ. ಅವರು ಮೂರು ತಿಂಗಳು ಇರುತ್ತಾರೆ. ಅವರು ಕೊನೆಯವರೆಗೂ ಏನು ಹೇಳುತ್ತಾರೆಂದರೆ, ನಾನು ಭರತ ಎಂದು ಅವರು ಅಂದುಕೊಳ್ಳುತ್ತಾರೆ. ಮುಖ್ಯಮಂತ್ರಿ ಎಂದುಕೊಳ್ಳುವುದಿಲ್ಲ. ರಾಮನ ಕೆಳಗೆ ನಾನು ರಾಮನಾಗುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಭರತ ಎನ್ನುವ ಮಾತನ್ನು ಸ್ಪಷ್ಟವಾಗಿ ನೇರವಾಗಿ ಶ್ರೀಮಾನ್ ಎಸ್.ಆರ್.ಕಂಠಿಯವರು ಹೇಳುತ್ತಾರೆ. ಇವತ್ತು ಅವರ ಮಗ ಮಹೇಂದ್ರ ಕಂಠಿಯೆನ್ನುವವರು ನನಗೆ ಸಿಕ್ಕಿದ್ದರು. ಈ ಹಿಂದೆ ಆವೊತ್ತಿನ ಕಾಲದಲ್ಲಿ ಏನು ನಡೆಯಿತೋ ಅದನ್ನು ಕೂಡ ನಾನು ನೋಡಿದ್ದೇನೆ. ಶ್ರೀಮಾನ್ ವೀರೇಂದ್ರ ಪಾಟೀಲರಿಗೆ 1969–1970 ರಲ್ಲಿ ಒಂದೇ ಒಂದು ಮತ ಅವರಿಗೆ ಕಡಿಮೆಯಾಗಿತ್ತು. ವೀರೇಂದ್ರ ಪಾಟೀಲರು ಆಗ ಆ ವೇದಿಕೆಯಲ್ಲಿ ಕುಳಿತಿದ್ದಂಥ ಕೊಠಾವಳೆಯವರನ್ನು ಕೇಳುತ್ತಾರೆ, ಮಾನ್ಯ ಅಧ್ಯಕ್ಷರೆ ನನಗೆ ಒಂದು ಮತ ಕಡಿಮೆಯಾಗಿದೆ. ನಾನು

ಇನ್ನು ಬಹುಮತ ಪಡೆಯುವುದಕ್ಕೆ ಆಗುವುದಿಲ್ಲ. ನಾನು ನೇರವಾಗಿ ರಾಜಭವನಕ್ಕೆ ಹೋಗಬೇಕು. ಸಭೆಯನ್ನು ಮುಂದೂಡಿ ಎಂದು ಹೇಳುತ್ತಾರೆ. ಅವರು ಆಗ ರೆಸಾರ್ಟ್‌ಗೆ ಹೋಗಲಿಲ್ಲ. ಅವರು ವ್ಯಾಪಾರಕ್ಕೆ ಹೋಗಲಿಲ್ಲ. ಜಾತಿ ಬಗ್ಗೆ ಹೇಳಲಿಲ್ಲ. ದೇವಸ್ಥಾನಗಳಿಗೆ ಹೋಗಲಿಲ್ಲ. ನೇರವಾಗಿ 3.00 ಗಂಟೆಗೆ ರಾಜಭವನಕ್ಕೆ ಹೋಗಿ ರಾಜ್ಯಪಾಲರಾದ ಧರ್ಮವೀರರವರ ಹತ್ತಿರ ಹೋಗಿ ರಾಜೀನಾಮೆಯನ್ನು ಕೊಟ್ಟರು. ತದನಂತರ ತಮ್ಮ ಮನೆಗೆ ಹೋಗಿ ಮಲಗಿದರು. ನಾನು ಮತ್ತು ಶಾಂತವೇರಿ ಗೋಪಾಲಗೌಡರು ಮತ್ತು ಎಸ್. ಶಿವಪ್ಪನವರು ಸೇರಿಕೊಂಡು ನಾವುಗಳು ನಿಜಲಿಂಗಪ್ಪನವರ ಮನೆಗೆ ಹೋಗಿ ಮಾತನಾಡಿ ಮೂರ್‍ನಾಲ್ಕು ಸದಸ್ಯರ ಜೊತೆ ಮಾತನಾಡಿ ನಿಮಗೆ ಬೆಂಬಲ ಕೊಡುವಂತೆ ಹೇಳಿದ್ದೇವೆ. ಅವರೂ ಕೂಡ ತಮಗೆ ಬೆಂಬಲ ಕೊಡುತ್ತೇವೆಂದು ಹೇಳಿದ್ದಾರೆ. ಆದಕಾರಣ ತಾವು ಬರಬೇಕು ಎಂದು ಕೇಳಿಕೊಂಡೆವು. ನಾನು ಅವರ ಬೆಂಬಲ ತೆಗೆದುಕೊಂಡು ಇನ್ನು ಮುಂದೆಯೂ ಮುಂದುವರೆಯುವುದು ಬೇಕಾಗಿಲ್ಲ. ಇನ್ನು ಒಂದು ನಿಮಿಷ ಕೂಡ ನಾನು ಅಲ್ಲಿ ಇರಲು ಇಷ್ಟ ಪಡುವುದಿಲ್ಲವೆಂದು ಬಿಟ್ಟರು. ನಮ್ಮ ಮೂವರಿಗೂ ಅವರ ಮಾತಿನಿಂದ ಕಣ್ಣೀರು ಬಂತು. ಇಂದು ಅದೆಲ್ಲಾ ನೆನಪುಗಳು. ವೀರೇಂದ್ರಪಾಟೀಲರಂಥ ಒಬ್ಬ ಮೇಧಾವಿ. ದಕ್ಷರಾದ ಅವರು ಈ ನಾಡಿನ ಇತಿಹಾಸದಲ್ಲಿ ಉಳಿಯುವಂಥ ವ್ಯಕ್ತಿ ಅವರು. ಅಂಥವರನ್ನೆಲವನ್ನೂ ನಾವು ನೋಡಿಕೊಂಡು ಬಂದಿದ್ದೇವೆ. ನಮ್ಮ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾದಾಗಿನಿಂದ ಇವೊತ್ತಿನವರೆಗೂ ನಡೆದಂಥದ್ದನ್ನು ನೋಡಿದ್ದೇವೆ. ನಾನು ಇಂದು ಬೆಳಿಗ್ಗೆ ಮಾನ್ಯ ಧರ್ಮಸಿಂಗ್‌ರವರಿಗೆ ಹೇಳಿದೆ. ನನ್ನನ್ನು ಅವರ ಕಾರ್ಯಾಲಯಕ್ಕೆ ಕರೆಸಿಕೊಂಡಿದ್ದರು. ನಾನು ಅವರ ಜೊತೆ ಮಾತನಾಡಿದೆ. ಎರಡು ವರ್ಷ ನೀವು ಯಾವ ರೀತಿಯಲ್ಲಿ ಆಡಳಿತವನ್ನು ನಡೆಸಿದಿರಿ? ನಿಮ್ಮ ಸೂತ್ರಗಳೇನು? ನಿಮ್ಮ ಶಕ್ತಿ ಏನು? ನಿಮ್ಮ ಮೆದುಳಿನ ಸ್ಥೈರ್ಯ ಏನು? ನಿಮ್ಮ ಶರೀರ ಯಾವ ರೀತಿ ಇತ್ತು? ಅಂದರೆ ಯಾವುದಾದರೂ ವಿಶ್ವವಿದ್ಯಾಲಯ ನಿಮಗೆ ದೊಡ್ಡ ಡಾಕ್ಟರೇಟ್ ಅನ್ನೇ ನಿಮಗೆ ಕೊಡಬೇಕು. ನೀವು ಆ ಎರಡು ವರ್ಷ ಆಡಳಿತ ನಡೆಸಿದಿರಲ್ಲ. ಅದೇನು ಸಾಮಾನ್ಯವಾದುದಲ್ಲ. ಆ ಎರಡು ವರ್ಷ ಆಡಳಿತ ನಡೆಸಿರುವ ಬಗ್ಗೆ ನಮಗೆ ಡಾಕ್ಟರೇಟ್ ಕೊಡಬೇಕು ಎಂದು ಹೇಳಿದ್ದೇನೆ. ಮಾಧುಸ್ವಾಮಿಯವರು

ಹೇಳಿರುವುದಕ್ಕೆ ಆ ಸಂದರ್ಭದಲ್ಲಿ ನನಗೆ ಸ್ವಲ್ಪ ನೋವಾಯಿತು. ಮಾನ್ಯ ಧರ್ಮಸಿಂಗ್‌ರವರನ್ನು ಮನೆಗೆ ಕಳುಹಿಸಿದಿರಲ್ಲ ಆ ದಿನ, ಆ ದಿನ ಅದು ಯಾರಿಗೂ ಬೇಡ. ನಮ್ಮ ರಾಜಕಾರಣದಲ್ಲಿ ನಾವೇನು ಬಹಳಷ್ಟು ದಿನ ಬದುಕುವುದಿಲ್ಲ. ಯಾರೂ ಬದುಕುವುದಿಲ್ಲ. ಯಾರ್ಯಾರೂ ಇಲ್ಲ "ಮುನ್ನ ಶತಕೋಟಿ ರಾಯರಾಳಿದ ಈ ನೆಲವನ್ನು ತನ್ನದೆನೆತಾ ಶಾಸನವ ಬರೆಸಿ ಚೆನ್ನಿಗನು ಮನೆ ಕಟ್ಟಿ ಕೋಟೆ ಕೊತ್ತಳೆ ಮಿಕ್ಕಿದರೂ ಚೆನ್ನಿಗನು ಅಸುವಳಿದರೆ ಹೊರಗೆ ಹಾಕುವರು" ನಾವ್ಯಾರೂ ಇಲ್ಲಿ ಬಹಳ ವರ್ಷಗಳ ಕಾಲ ಇರುವುದಿಲ್ಲ. ಮೂರು ಸಾವಿರ ಕೋಟಿ ಮನೆಗಳನ್ನು ಕಟ್ಟಿದ್ದೇವೆ. ಇದು ನನ್ನದು ಎಂದು ಹೇಳಿ ಬೋರ್ಡ್ ಹಾಕಿದರೂ ಕೂಡ ಅವನೇನು ಇಲ್ಲಿಯೇ ಉಳಿಯುವುದಕ್ಕೆ ಸಾಧ್ಯವಿಲ್ಲ. ಯಾರೂ ಕೂಡ ಇಲ್ಲಿಯೇ ಉಳಿಯುವುದಕ್ಕೆ ಸಾಧ್ಯವಿಲ್ಲ. ಇದು ಸತ್ಯ. ಮಾನ್ಯ ಯಡಿಯೂರಪ್ಪನವರೆ, ಇದು ಸತ್ಯ. ನಿಮ್ಮ ಬಗ್ಗೆ ನನಗೆ ವಿಶ್ವಾಸವಿದೆ. ಆವೊತ್ತು ಧರ್ಮಸಿಂಗ್‌ರಂಥ ಒಬ್ಬ ಮಹಾನ್ ವ್ಯಕ್ತಿ, ಅವರಿಗೆ ಯಾವ ಜಾತಿಯ ಬೆಂಬಲವಿಲ್ಲ. ಲಿಂಗಾಯಿತರ ಬೆಂಬಲವಿಲ್ಲ, ಒಕ್ಕಲಿಗರ ಬೆಂಬಲವಿಲ್ಲ, ಬೇರೆ ಜನಾಂಗದ ಬೆಂಬಲವಿಲ್ಲ. ಇಡೀ ರಾಜ್ಯದಲ್ಲಿ ಒಂದಿನ್ನೂರು ಮತವಿರಬಹುದು. ಅವರನ್ನು ಯಾವ ರೀತಿ ಕಳುಹಿಸಿದೆವು ಎಂದು ಹೇಳಿದರೆ ಆ ಪಾಪ ಒಂದು ದೊಡ್ಡ ಪಾಪ. ಪಾಪ ಎನ್ನುವ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ಹೊರಟರೆ ಆ ಬಗ್ಗೆ ಅಪಾರವಾದಂಥ ವಿಶ್ಲೇಷಣೆ ಇದೆ. ಮಾನ್ಯ ಯಡಿಯೂರಪ್ಪನವರೆ, ಇವೊತ್ತು ನಾನು ಬೇರೆ ದಿಕ್ಕಿನಲ್ಲಿಯೇ ಭಾಷಣ ಮಾಡಬೇಕೆಂದು ಬಂದವನು ನಾನು. ನಿಮ್ಮ ಸರ್ಕಾರ ರಚನೆಯಾಗುತ್ತದೆ, ನೀವು ಬಹುಮತ ಪಡೆಯುತ್ತೀರಿ, ಇಲ್ಲಿ ಶಾಸಕರುಗಳು ನಿಮಗೆ ಬಹುಮತವನ್ನು ಕೊಡುತ್ತಾರೆ, ಸರ್ಕಾರ ರಚನೆಯಾಗುತ್ತದೆ ಎಂದು ನಾನು ತಿಳಿದುಕೊಂಡು ಬಂದಿದ್ದವನು. ನನಗೆ ಇಲ್ಲಿ ನೋಡಿದರೆ ಗ್ರಾಮ ಪಂಚಾಯಿತಿ ಸದಸ್ಯರಿಗಿಂತ ನಮ್ಮ ಶಾಸಕರು ಕಡಿಮೆಯಾದರೇನೋ ಎಂದೆನಿಸಿತು. ಗ್ರಾಮ ಪಂಚಾಯಿತಿ ಸದಸ್ಯರಿಗೆ ತತ್ವ, ಸಿದ್ಧಾಂತ, ಪ್ರಾಮಾಣಿಕತೆ, ಪ್ರಮಾಣ ಪತ್ರ, ಪ್ರಮಾಣವಚನ, ಹೀಗೆ ಎಲ್ಲದರಲ್ಲೂ ಪ್ರಾಮಾಣಿಕರು. ಹಳ್ಳಿಯಲ್ಲಿ ಈಗಲೂ ಕೂಡ ಸೆಗಣಿ ಮುಟ್ಟಿ ಗರಿಕೆ ಮುಟ್ಟಿದರೆ ಅದು ದೇವರು ಎಂದು ನಂಬಿಕೆ ಇದೆ. ರಾಜಭವನದಲ್ಲಿ ಮಾನ್ಯ ಯಡಿಯೂರಪ್ಪನವರು 129 ಶಾಸಕರ ಕೈಯಲ್ಲಿ ಪ್ರಮಾಣವಚನವನ್ನು

ಮಾಡಿಸುತ್ತಾರೆ. 129 ಶಾಸಕರು ಪ್ರಮಾಣಪತ್ರವನ್ನು ಕೊಟ್ಟಿದ್ದಾರೆ. ಇಲ್ಲಿರುವ ಬಹುತೇಕ ಶಾಸಕರು ಪ್ರಮಾಣಪತ್ರವನ್ನು ಕೊಟ್ಟಿದ್ದಾರೆ. ನಾವುಗಳ್ಯಾರೂ ಆ ರೀತಿ ಪ್ರಮಾಣಪತ್ರವನ್ನು ಕೊಟ್ಟಿಲ್ಲ. ಪ್ರಮಾಣಪತ್ರವನ್ನು 129 ಶಾಸಕರು ಮಾನ್ಯ ರಾಜ್ಯಪಾಲರಿಗೆ ಕೊಟ್ಟಿದ್ದಾರೆ. ತರಾತುರಿಯಲ್ಲಿ ಬಸ್‌ನಂದ ಇಳಿದು ಪತ್ರಕ್ಕೆ ಸಹಿ ಹಾಕಿ "ಇದು ನನ್ನದು, ಇದು ನನ್ನದು" ಇದು ನನ್ನದು ಎಂದು ಕೊಟ್ಟಿದ್ದಾರೆ. ಅದು ಏನು ಓಡೋಡಿ ಕೊಟ್ಟಿದ್ದಾರೆ. ಆ ಓಡುವ ವೇಗ ಪ್ರಮಾಣ ಪತ್ರ ಕೊಡುವುದಕ್ಕೆ ಹೆಚ್ಚಿತ್ತು. ಅದಕ್ಕೆ ಈಗ ಏನು ಬೆಲೆ? ಪ್ರಮಾಣ ಪತ್ರಕ್ಕೆ ಏನು ಬೆಲೆ? ಇದು ನನ್ನ ಪ್ರಶ್ನೆ. ಯಾವ ನ್ಯಾಯಾಲಯಗಳಲ್ಲಿ ಇರತಕ್ಕಂಥ ಎಲ್ಲಾ ಮೊಕದ್ದಮೆಗಳನ್ನು ಹೊರಗೆ ಹಾಕಬೇಕು, ಜೈಲಿನಲ್ಲಿ ಇರತಕ್ಕಂಥ ಎಲ್ಲಾ ಕೈದಿಗಳನ್ನು ಹೊರಗೆ ಹಾಕಬೇಕು. ಹುಚ್ಚಾಸ್ಪತ್ರೆಯಲ್ಲಿರತಕ್ಕಂಥ ಹುಚ್ಚರನ್ನೆಲ್ಲಾ ಹೊರಗೆ ಬಿಡಬೇಕು. ಈಗ ಅವರನ್ನೆಲ್ಲಾ ನಾವು ಮೀರಿಸಿದ್ದೇವೆ. ಇಲ್ಲಿ ಹುಚ್ಚರನ್ನು ನಾವು ಮೀರಿಸಿದ್ದೇವೆ. ಖೈದಿಗಳನ್ನು ಮೀರಿಸಿದ್ದೇವೆ, ಅಪ್ರಮಾಣಿಕರಾಗಿದ್ದೇವೆ, ಎಲ್ಲವನ್ನೂ ನಾವು ಮೀರಿಸಿದ್ದೇವೆ. ಪ್ರಮಾಣಪತ್ರ ಎನ್ನುವುದಕ್ಕೆ ನನಗೆ ಬಹಳ ಪ್ರಾಮಾಣಿಕವಾದ ವ್ಯಾಖ್ಯಾನ ಬೇಕಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ವಾಟಾಳ್‌ರವರೆ ಒಂದ್ನಿಮಿಷ, ನಾನು ಕೆಲವು ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಕಾಂಗ್ರೆಸ್ಸಿನ ಹಿರಿಯ ನಾಯಕರು, ಜೆ.ಸಿ.ಮಾಧುಸ್ವಾಮಿಯವರು, ವಾಟಾಳ್ ನಾಗರಾಜ್‌ರವರು ಮಾತನಾಡಿದ್ದಾರೆ. ನಾನು ಒಂದು ಮಾತನ್ನು ಪ್ರಾಮಾಣಿಕವಾಗಿ ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಧ್ಯಾಹ್ನ ಈ ಸದನವನ್ನು ಅರ್ಧಗಂಟೆಗಳ ಕಾಲ ಮುಂದಕ್ಕೆ ಹಾಕಿದಾಗ ನೇರವಾಗಿ ರಾಜ್ಯಪಾಲರ ಬಳಿಗೆ ಹೊರಟವನು ನಾನು. ಒಂದು ಸಾರಿ ವಿಶ್ವಾಸ ಮತದ ವಿರುದ್ಧ ಮತ ಚಲಾಯಿಸಬೇಕೆಂದು ಜನತಾದಳದ ಶಾಸಕರಿಗೆ ವಿಪ್ ಕೊಟ್ಟಿದ್ದಾರೆ ಎನ್ನುವ ವಿಷಯ ನನಗೆ ಗೊತ್ತಾದ ತಕ್ಷಣ ನಾನು ರಾಜಭವನಕ್ಕೆ ಹೊರಟವನು ವಾಟಾಳ್‌ರವರೆ. ಪ್ರಶ್ನೆ ಏನು? ಇವೊತ್ತು ಇಲ್ಲಿ ಒಂದು ರೀತಿ ವಚನ ಭ್ರಷ್ಟತೆ ಆಗಿದೆ ಎನ್ನುವಂಥದ್ದು, ನಾನು ಜೆ.ಡಿ.(ಎಸ್) ನಾಯಕರಲ್ಲಿ ಯಾರ ಬಗ್ಗೆಯೂ ನಾನು ಟೀಕೆ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ನಾನು 20 ತಿಂಗಳು ಹಣಕಾಸಿನ ಸಚಿವನಾಗಿ ಜನರು ಮೆಚ್ಚುವ ರೀತಿಯಲ್ಲಿ ಕೆಲಸವನ್ನು ಮಾಡಿದ್ದೇನೆ ಎನ್ನುವ

ವಿಶ್ವಾಸ ನನಗೆ ಇದೆ. ನಾಡಿನ ಜನರು ಯಡಿಯೂರಪ್ಪನಂಥವರು ಇನ್ನೂ ಹತ್ತು-ಹದಿನೈದು ವರ್ಷಗಳ ಹಿಂದೆಯೆ ಈ ಒಂದು ಜವಾಬ್ದಾರಿ ಸ್ಥಾನದಲ್ಲಿ ಇದ್ದಿದ್ದರೆ ಇನ್ನೂ ಹೆಚ್ಚು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರು ಎನ್ನುವಂಥ ಆತ್ಮವಿಶ್ವಾಸವನ್ನು ನಾನು ಮೂಡಿಸಿದ್ದೇನೆ ಎನ್ನುವಂಥದ್ದು ನನ್ನ ಮನಸ್ಸಿನಲ್ಲಿ ಇದೆ. ನಾನು ಇದೇ ಮನೆಯಲ್ಲಿ ಕುಳಿತು ಒಂದು ಮಾತನ್ನು ಹಿಂದೆ ಹೇಳಿದ್ದೆ ವಾಟಾಳ್‌ರವರೆ. ಅಕ್ಟೋಬರ್ 2ರ ನಂತರ ಯಾವ ಕಾರಣಕ್ಕೂ ಒಂದು ಕ್ಷಣ ನಾನು ಇಲ್ಲಿ ಕುಳಿತುಕೊಳ್ಳುವುದಿಲ್ಲ. ನಾನು ಏನಿದ್ದರೂ ಮುಖ್ಯಮಂತ್ರಿಯಾಗಿಯೇ ಕುಳಿತುಕೊಳ್ಳುತ್ತೇನೆ ಎಂದು ಹೇಳಿದ್ದೆ. ನನ್ನೆ ಸಹ ನನಗೆ ಮತ್ತು ಜೆ.ಡಿ.(ಎಸ್) ಮುಖಂಡರ ಜೊತೆ ಚರ್ಚೆಯಾದಂಥ ಸಂದರ್ಭದಲ್ಲಿ ಕೆಲವು ಇಲಾಖೆಗಳೂ ಬೇಕು ಎಂದು ಅವರು ಒತ್ತಾಯ ಮಾಡಿದಾಗ, ಅಂದರೆ ನಮಗೆ ಹೆಚ್.ಯು.ಡಿ. ಬೇಕು, ನಮಗೆ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆ ಬೇಕು ಎಂದು ಅವರು ಕೇಳಿದಾಗ, ಭಗವಂತನ ಸಾಕ್ಷಿಯಾಗಿ ಅದರೊಳಗೆ ಏನಿದೆಯೋ ನನಗೆ ಗೊತ್ತಿಲ್ಲ. ಆದರೆ 21 ತಿಂಗಳ ಹಿಂದೆ ಏನು ಒಪ್ಪಂದವಾಗಿತ್ತು ಅದರಲ್ಲಿ ಒಂದು ಸಣ್ಣ ಗೆರೆ ವ್ಯತ್ಯಾಸವಾದರೂ ಕೂಡ ನಾವು ನಾನು ಅಧಿಕಾರದಲ್ಲಿ ಕುಳಿತುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ ಎಂದು ಹೇಳಿದ್ದೆ. ಅಂದರೆ ನಾನು ಕುರ್ಚಿಗಾಗಿ ಎಂದೂ ಅಂಟಿಕೊಂಡವನಲ್ಲ. ನಾನು ಹೇಳಿದಂತೆ ನಡೆದುಕೊಂಡಿದ್ದೇನೆ. ಇಲ್ಲದೆ ಹೋಗಿದ್ದರೆ ತಮಗೆ ಗೊತ್ತಿರುವಂತೆ ಅಕ್ಟೋಬರ್ 2 ನೇ ತಾರೀಖು 18 ಜನ ಸಚಿವರು ಒಟ್ಟಾಗಿ ಒಂದಾಗಿ ಅವೊತ್ತಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಕುಮಾರಸ್ವಾಮಿಯವರಿಗೆ ನಾವು ಹೋಗಿ ರಾಜೀನಾಮೆಯನ್ನು ಕೊಟ್ಟು ಬರುತ್ತಿರಲಿಲ್ಲ. ನಾನು ಹೇಳಿದಂತೆ ನಡೆದುಕೊಂಡಿದ್ದೇನೆ. ಇಲ್ಲದೆ ಇದ್ದರೆ ತಮಗೆ ಗೊತ್ತಿರುವ ಹಾಗೆ, ಅಕ್ಟೋಬರ್ 2 ನೇ ತಾರೀಖು ನಾವು 18 ಜನ ಸಚಿವರು ಒಂದಾಗಿ ಅವತ್ತಿನ ಮಾನ್ಯ ಮುಖ್ಯಮಂತ್ರಿಯವರಾದ ಕುಮಾರಸ್ವಾಮಿಯವರಿಗೆ ರಾಜೀನಾಮೆ ಪತ್ರವನ್ನು ಕೊಟ್ಟು ಬರುತ್ತಿರಲಿಲ್ಲ. ಅದಾದ ಮೇಲೆ ಅವರೇ, ಸನ್ಮಾನ್ಯ ದೇವೇಗೌಡಜೀಯವರು, ಮಾನ್ಯ ಅಡ್ವಾಣಿಜೀಯವರ ಹತ್ತಿರ ಹಾಗು ಅಟಲ್‌ಜೀಯವರ ಹತ್ತಿರ ಮಾತನಾಡಿ, “ನಾವು ಬೆಂಬಲವನ್ನು ಕೊಡುತ್ತೇವೆ, ಸರ್ಕಾರವನ್ನು ರಚನೆ ಮಾಡಿ” ಎಂದು ಹೇಳಿದ್ದಕ್ಕೋಸ್ಕರ, ನಾನು ಇಲ್ಲಿ ಮತ್ತೊಮ್ಮೆ ನಮ್ಮ ಮುಂದೆ ಬರುವಂತಹ

ಪ್ರಯತ್ನ ಮಾಡಿದೆನು, ಹೊರತು ಅಧಿಕಾರಕ್ಕಾಗಿ ಅಂಟಿಕೊಂಡು ನಾನು ಈ ಕೆಲಸವನ್ನು ಮಾಡಲಿಲ್ಲ. ಮಕ್ಕಳಿದ್ದಾಗ ಒಂದು ಮಾತು ಹೇಳುತ್ತಾರೆ. ಮಾನ್ಯ ದೇಶಪಾಂಡೆಯವರೇ, ನನಗೆ ಹಳ್ಳಿ ಹೈದನಾಗಿ ನನೆಪಿನಲ್ಲಿರುವುದು ಏನೆಂದರೆ ಶಾಲೆಯಲ್ಲಿ ಯಾರಾದರೂ ಗೊತ್ತಿಲ್ಲದೇ ಒಂದು ಪಕ್ಕದ ಮಗುವಿನದು ಸ್ಲೇಟ್ ಅಥವಾ ಪುಸ್ತಕವನ್ನು ತೆಗೆದುಕೊಂಡು ಹೋದರೆ ನಮ್ಮ ತಾಯಿ–ತಂದೆ "ಇದು ನಿನ್ನದಲ್ಲ ಕೊಟ್ಟು ಬಾ" ಎಂದು ಹೇಳುತ್ತಿದ್ದರು. ಮೇಸ್ಟರು ಕೂಡ "ನಿನ್ನದಲ್ಲ ಕೊಟ್ಟು ಬಾ" ಎಂದು ಹೇಳುತ್ತಿದ್ದರು. ಚಿಕ್ಕಂದಿನಲ್ಲೆ "ನಿನ್ನದು ನನ್ನದು ಅವರದ್ದು ಅವರದ್ದು ಕೊಟ್ಟು ಬಾ" ಎಂದು ಹೇಳುತ್ತಿದ್ದರು. ದೊಡ್ಡವರಾದ ಮೇಲೆ "ನಿನ್ನದು ನಿನ್ನದು ಅವರದ್ದು ನಿನ್ನದೇ" ಎಂದು ಆಯಿತು. So, ಮಾನ್ಯ ಕುಮಾರಸ್ವಾಮಿ ಹಾಗೂ ಮಾನ್ಯ ದೇವೇಗೌಡರ ನೀತಿ ಏನಾಯಿತು ಎಂದರೆ ಅದೂ "ನನಗೆ ಬೇಕು, ಇದೂ ನನಗೆ ಬೇಕು" ಹೀಗಾಗಿ ಇವತ್ತು ಈ ಪರಿಸ್ಥಿತಿ ಒದಗಿ ಬಂದಿದೆ. ನಾಡಿನ ಜನರಿಗೆ ಒಳ್ಳೆಯ ಕೆಲಸ ಮಾಡಿದ್ದೇನೆ ಎನ್ನುವ ವಿಶ್ವಾಸ ನನಗೆ ಇದೆ. ಇಂತಹ ಒಂದು ಸಂದರ್ಭದಲ್ಲಿ ನಾನು ಯಾವುದೇ ಪ್ರಶ್ನೆಗೂ ಉತ್ತರ ಕೊಡದೇ ನೇರವಾಗಿ ರಾಜಭವನಕ್ಕೆ ಹೋಗುತ್ತಿದ್ದೇನೆ, ರಾಜೀನಾಮೆ ಕೊಡುತ್ತೇನೆ. ಯಾವುದೇ ಒಂದು ಟೀಕೆ ಟಿಪ್ಪಣಿಗೂ ಉತ್ತರಿಸಲು ನಾನು ಇಷ್ಟಪಡುವುದಿಲ್ಲ. ನಮಸ್ಕಾರ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ತಪ್ಪು ಇದು. ಅವಕಾಶ ಕೊಡಲೇಬೇಕು

ಶ್ರೀ ಜಿ.ವಿ.ಶ್ರೀರಾಂರೆಡ್ಡಿ: ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ಅವರು ವಿಶ್ವಾಸವನ್ನು ಕಳೆದುಕೊಂಡಿದ್ದೇನೆ ಎಂದು ಹೊರಟು ಹೋದ ಮೇಲೆ ಇನ್ನೇನಾಗುತ್ತದೆ?

(ಗೊಂದಲ)

ಅಧ್ಯಕ್ಷರು: ಈಗ ಏನೆಂದರೆ ಮಾನ್ಯ ಯಡಿಯೂರಪ್ಪನವರು ವಿಶ್ವಾಸ ಮತವನ್ನು ಕೇಳಿ ಒಂದು resolution ಮಂಡಿಸಿದ್ದರು. "ಈಗ ನನಗೆ ವಿಶ್ವಾಸ

ಸಿಗುತ್ತಿಲ್ಲ, ಆದುದರಿಂದ ನಾನು ರಾಜೀನಾಮೆಯನ್ನು ಕೊಡುವುದಕ್ಕೆ ಮಾನ್ಯ ರಾಜ್ಯಪಾಲರ ಬಳಿಗೆ ಹೋಗುತ್ತೇನೆ" ಎಂದು ನಿರ್ಗಮಿಸಿದ್ದಾರೆ. ವಿಶ್ವಾಸ ಮತವನ್ನು ಕಳೆದುಕೊಂಡಿದ್ದೇನೆಂದು ಅವರೇ ಘೋಷಣೆ ಮಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರ ನೇತೃತ್ವದ ಮಂತ್ರಿಮಂಡಲಕ್ಕೆ ವಿಶ್ವಾಸ ಮತ ಇಲ್ಲವೆಂದು ಹೇಳಿ, ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನದ ಕಲಾಪವು 4 ಗಂಟೆ 43 ನಿಮಿಷಕ್ಕೆ ಮುಕ್ತಾಯಗೊಂಡಿತು ಹಾಗೂ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು)

* * * * * *